ಜನಶಕ್ತಿ

ದುಡಿಯುವ ಜನರ ಪ್ರಾಣ ಮಿತ್ರ

ಕನ್ನಡ ವಾರಪತ್ರಿಕೆ



ಆಳವಾದ ಛಾಪು ಮೂಡಿಸಿದ ಮುಖ್ಯಮಂತ್ರಿ

ಸಂಪುಟ 10 | ಸಂಚಿಕೆ 51 ಪುಟ 16 | ಡಿಸೆಂಬರ್ 18, 2016 | ರೂ. 10/-

web: www.janashakthi.co.in | e-mail : js_weekly@yahoo.com



82ನೇ ಕನ್ನಡ ಸಾಹಿತ್ಯ ಸಮ್ಮೇಳನ

ಜನತೆಯ ಹಿತಾಸಕ್ತಿ ಧ್ವನಿಸಿದ ಅಧ್ಯಕ್ಷ ಭಾಷಣ



ಮೋದಿ ಸರಕಾರದ ಮುಖವಾಡಗಳನ್ನು ಬಯಲುಗೊಳಿಸಿ
-ಸಿಐಟಿಯು 15ನೇ ಸಮ್ಮೇಳನದ ಕರೆ

ನೋಟು ಹರಣದ ಒಂದು ತಿಂಗಳು....

ಆರೆಸ್ಸೆಸ್ ಹಿಂಸಾಚಾರ : ಪೋಸ್ಟರ್ ಪ್ರದರ್ಶನ

ನೈಸ್: ಅಧಿಕಾರಸ್ಥರ ದುಷ್ಟಕೂಟದ ಅಕ್ರಮ

ಡಾ.ಜೆ.ಜಯಲಲಿತ : ಸಿಪಿಐ(ಎಂ) ಪೊಲಿಟ್‌ಬ್ಯುರೊ ಶ್ರದ್ಧಾಂಜಲಿ



ಡಿಸೆಂಬರ್ 5 ರಂದು ನಿಧನರಾದ ತಮಿಳುನಾಡಿನ ಮುಖ್ಯಮಂತ್ರಿ ಜಯಲಲಿತ ಅವರಿಗೆ ಶ್ರದ್ಧಾಂಜಲಿ ಅರ್ಪಿಸುತ್ತ ಸಿಪಿಐ(ಎಂ) ಪೊಲಿಟ್‌ಬ್ಯುರೊ ಈ ಕೆಳಗಿನ ಹೇಳಿಕೆಯನ್ನು ನೀಡಿದೆ:

ಸಿಪಿಐ(ಎಂ) ಪೊಲಿಟ್‌ಬ್ಯುರೊ ತಮಿಳುನಾಡಿನ ಮುಖ್ಯಮಂತ್ರಿ ಮತ್ತು ಎಐಎಡಿಎಂಕೆಯ ಪ್ರಧಾನ ಕಾರ್ಯದರ್ಶಿ ಡಾ, ಜೆ.ಜಯಲಲಿತ ಅವರ ನಿಧನಕ್ಕೆ ಆಳವಾದ ದುಃಖವನ್ನು ವ್ಯಕ್ತಪಡಿಸುತ್ತದೆ.

ಬಹಳ ಸಣ್ಣ ವಯಸ್ಸಿನಲ್ಲಿಯೇ ಚಲನಚಿತ್ರಗಳಲ್ಲಿ ತನ್ನ ಜೀವನ ಆರಂಭಿಸಿದ ಜಯಲಲಿತ ನಂತರ ಎಐಎಡಿಎಂಕೆ ಸೇರಿದರು ಮತ್ತು ಅಲ್ಲಿ ಬೇಗನೇ ಮೇಲಕ್ಕೇರಿದರು.

ತಮಿಳುನಾಡಿನ ಒಬ್ಬ ಜನಪ್ರಿಯ ಮುಖಂಡರಾಗಿದ್ದ ಅವರು ಸುಮಾರು 15 ವರ್ಷಗಳ ಅವಧಿಗಳಲ್ಲಿ ರಾಜ್ಯದ ಮುಖ್ಯಮಂತ್ರಿಯಾಗಿ ಸೇವೆ ಸಲ್ಲಿಸಿದರು. ಆಕೆ ಅಧಿಕಾರದ ಚುಕ್ಕಾಣಿ ಹಿಡಿದಿದ್ದಾಗ ಜನಸಾಮಾನ್ಯರಿಗೆ ತಕ್ಷಣದ ಪರಿಹಾರಗಳನ್ನು ಒದಗಿಸಲು ಹಲವು ಜನಪ್ರಿಯ ಕಲ್ಯಾಣ ಯೋಜನೆಗಳನ್ನು ಆರಂಭಿಸಲಾಯಿತು. ಅವು ತಮಿಳುನಾಡಿನ ರಾಜಕೀಯದಲ್ಲಿ ಆಳವಾದ ಛಾಪು ಮೂಡಿಸಿವೆ.

ಸಿಪಿಐ(ಎಂ) ಪೊಲಿಟ್‌ಬ್ಯುರೊ ತಮಿಳುನಾಡಿನ ಜನತೆಯೊಂದಿಗೆ ಆಕೆಯ ನಿಧನಕ್ಕೆ ಶೋಕ ವ್ಯಕ್ತಪಡಿಸುತ್ತದೆ. ನಾವು ಎಐಎಡಿಂಕೆಯ ಮುಖಂಡತ್ವ ಮತ್ತು ಕಾರ್ಯಕರ್ತರಿಗೆ ನಮ್ಮ ಆಳವಾದ ಸಂತಾಪಗಳನ್ನು ತಿಳಿಸಬಯಸುತ್ತೇವೆ.

ಕೇರಳ ಸರಕಾರದ ಶ್ರದ್ಧಾಂಜಲಿ

ಕೇರಳದ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ತಮಿಳುನಾಡು ಮುಖ್ಯಮಂತ್ರಿ ಸೆಲ್ವಿ ಜಯಲಲಿತ ಅವರ ನಿಧನಕ್ಕೆ ದು:ಖ ಮತ್ತು ಆಳವಾದ ಸಂತಾಪವನ್ನು ವ್ಯಕ್ತಪಡಿಸಿದ್ದಾರೆ. ಆಕೆ ಒಬ್ಬ ಪ್ರತಿಭಾಪೂರ್ಣ ನಟಿಯಾಗಿ, ಒಬ್ಬ ಅಸಾಧಾರಣ ರಾಜಕಾರಣಿಯಾಗಿ ಮತ್ತು ಒಬ್ಬ ಅದ್ವಿತೀಯ ಮುಖಂಡರಾಗಿ ಬಹುಮುಖೀ ಸಾಧನೆಗಳನ್ನು ಮಾಡಿದವರು ಎಂದು ವಿಜಯನ್ ಹೇಳಿದ್ದಾರೆ. ಕೇರಳ ಮತ್ತು ತಮಿಳುನಾಡಿನ ಜನತೆಯ ನಡುವೆ ಉತ್ತಮ ಸಂಬಂಧಗಳಿಗಾಗಿ ಶ್ರಮಿಸಿದ್ದ ಆಕೆಗೆ ಗೌರವದ ಸಂಕೇತವಾಗಿ ಡಿಸೆಂಬರ್ 6ರಂದು ಸಭೆ ಸೇರಬೇಕಾಗಿದ್ದ ಕೇರಳ ಸಂಪುಟ ಮೌನವನ್ನಾಚರಿಸಿ ಯಾವುದೇ ಅಜೆಂಡಾವನ್ನು ಚರ್ಚಿಸದೆ ಬರ್ಖಾಸ್ತು ಆಯಿತು. ಸಂತಾಪ ಸೂಚಿಸುವ ಒಂದು ನಿರ್ಣಯವನ್ನು ಸಂಪುಟ ಅಂಗೀಕರಿಸಿತು. ಡಿಸೆಂಬರ್ 6ರಂದು ಸರಕಾರೀ ಕಚೇರಿಗಳಿಗೆ, ಸಾರ್ವಜನಿಕ ವಲಯದ ಘಟಕಗಳಿಗೆ ಮತ್ತು ಶೈಕ್ಷಣಿಕ ಸಂಸ್ಥೆಗಳಿಗೆ ರಜಾ ಘೋಷಿಸಿ ಕೇರಳ ಸರಕಾರ ತನ್ನ ಗೌರವವನ್ನು ವ್ಯಕ್ತಪಡಿಸಿದೆ. ಮೂರು ದಿನಗಳ ಶೋಕಾಚರಣೆ ಅವಧಿಯಲ್ಲಿ ಸೆಂಬರ್ 6,7 ಮತ್ತು 8ರಂದು ನಡೆಯುವ ಸರಕಾರೀ ಸಮಾರಂಭಗಳನ್ನು ಯಾವುದೇ ಆಡಂಬರವಿಲ್ಲದೆ ನಡೆಸಲಾಗುವುದು ಎಂದೂ ತಿಳಿಸಲಾಯಿತು.

ಕೇರಳ ಮುಖ್ಯಮಂತ್ರಿಗಳು ಚೆನ್ನೈನಲ್ಲಿ ನಡೆದಿರುವ ಅಂತ್ಯ ಸಂಸ್ಕಾರ ಸಮಾರಂಭದಲ್ಲಿ ಭಾಗವಹಿಸಿದ್ದಾರೆ.

‘ಮರ್ಯಾದಾ ಹತ್ಯೆ’ಗಳಲ್ಲಿ 79% ಹೆಚ್ಚಳ: ಎಐಡಿಡಬ್ಲ್ಯುಎ ಆತಂಕ

ಲೋಕಸಭೆಗೆ ಗೃಹ ವ್ಯವಹಾರಗಳ ರಾಜ್ಯ ಮಂತ್ರಿಗಳು ಸಲ್ಲಿಸಿದ ಒಂದು ಉತ್ತರದ ಪ್ರಕಾರ ‘ಮರ್ಯಾದಾ’ ಅಪರಾಧಗಳು ಮತ್ತು ಹತ್ಯೆಗಳ ಕೇಸುಗಳಲ್ಲಿ ಒಂದೇ ವರ್ಷದಲ್ಲಿ 79% ಹೆಚ್ಚಳವಾಗಿದೆ. 2014 ರಲ್ಲಿ 28 ಇದ್ದದ್ದು 2015ರಲ್ಲಿ 251ಕ್ಕೆ ಏರಿದೆ.

ಇದು ಅತ್ಯಂತ ಕಳವಳಕಾರಿ ಸಂಗತಿ ಎಂದು ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ(ಎಐಡಿಡಬ್ಲ್ಯುಎ) ಎಂದು ಆತಂಕ ವ್ಯಕ್ತಪಡಿಸಿದೆ.

ಎಐಡಿಡಬ್ಲ್ಯುಎ 2010ರಿಂದಲೂ ಈ ಅಪರಾಧಗಳನ್ನು ಕುರಿತಂತೆ ಒಂದು ಪ್ರತ್ಯೇಕ ಕಾನೂನನ್ನು ತರಬೇಕು ಎಂದು ಆಗ್ರಹಿಸುತ್ತ ಬಂದಿದೆ. ಈ ಬಗ್ಗೆ ಕಾನೂನು ಮಂತ್ರಾಲಯಕ್ಕೆ ಒಂದು ಕರಡು ಮಸೂದೆಯನ್ನೂ ತಯಾರಿಸಿ ಕೊಟ್ಟಿದೆ. ಯುಪಿಎ–2 ಸರಕಾರ ಈ ವಿಷಯದ ಮೇಲೆ ಒಂದು ಮಂತ್ರಿ ಸಮೂಹ(ಜಿಒಎಂ) ರಚಿಸಿತು.

ಆದರೆ ಎಐಡಿಡಬ್ಲ್ಯುಎ) ನಿಯೋಗವೊಂದು ಜುಲೈ23, 2016ರಂದು ಕಾನೂನು ಮಂತ್ರಿ ಸದಾನಂದ ಗೌಡರನ್ನು ಭೇಟಿಯಾಗಿ ಈ ಪ್ರಕ್ರಿಯೆಯನ್ನು ಮುಂದುವರೆಸಬೇಕು ಎಂದು ಕೇಳಿದಾಗ ಮಂತ್ರಿಗಳು ಹಾಗೆ ಮಾಡಲಾಗುವುದಿಲ್ಲ ಎಂದು ನಿರಾಕರಿಸಿರುವುದು ದಾಖಲೆಯಲ್ಲಿ ಇದೆ. ಎಸ್‌ಸಿ–ಎಸ್‌ಟಿ ಅತ್ಯಾಚಾರ ತಡೆ ಕಾಯಿದೆಯಂತೆ, ಅಥವ ಐಪಿಸಿ ಸೆಕ್ಷನ್ 498ಎ ಯಂತೆ ಇದೂ ದುರುಪಯೋಗಕ್ಕೆ ಒಳಪಡುತ್ತದೆ ಎಂಬುದು ಅವರು ಕೊಟ್ಟ ಕಾರಣ.

ಎಐಡಿಡಬ್ಲ್ಯುಎ ಈಗಾಗಲೇ ಕುಟುಂಬದ ಮರ್ಯಾದೆಯ ಹೆಸರಲ್ಲಿ ನಡೆಯುತ್ತಿರುವ ಅಪರಾಧಗಳ ಪ್ರತ್ಯೇಕ ದಾಖಲೆಗಳನ್ನು ಇಡಬೇಕು, ಒಂದು ವಿಶೇಷ ಕಾನೂನು ತರಬೆಕು ಎಂಬ ಅರ್ಜಿಗೆ ಸಹಿ ಸಂಗ್ರಹ ಮಾಡುತ್ತಿದೆ. ಈಗ ಸರಕಾರ ಕೊಟ್ಟಿರುವ ಮಾಹಿತಿಯ ಹಿನ್ನೆಲೆಯಲ್ಲಿ ಒಂದು ವಿಶೇಷ ಕಾನೂನು ತರಬೆಕೆಂಬ ತನ್ನ ಆಗ್ರಹವನ್ನು ಅದು ಪುನರುಚ್ಚರಿಸಿದೆ.

ವಿಕಲಚೇತನ ವ್ಯಕ್ತಿಗಳ ಹಕ್ಕುಗಳ ಮಸೂದೆ: ಸರಿಯಾದ ತಿದ್ದುಪಡಿಗಳನ್ನು ತರಲು ಆಗ್ರಹ

ಡಿಸೆಂಬರ್ 3 ರಂದು ನವದೆಹಲಿಯ ಜಂತರ್ ಮಂತರ್‌ನಲ್ಲಿ ನೆರೆದಿದ್ದ ವಿಕಲ ಚೇತನ ವ್ಯಕ್ತಿಗಳ ಹಕ್ಕುಗಳನ್ನು ಪ್ರತಿಪಾದಿಸುವ ಸಂಘಟನೆಗಳ ಪ್ರತಿನಿಧಿಗಳ ನಿಯೋಗವೊಂದು ಕೇಂದ್ರ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಮಂತ್ರಿಗಳನ್ನು ಭೇಟಿ ಮಾಡಿ ವಿಕಲ ಚೇತನ ವ್ಯಕ್ತಿಗಳ ಹಕ್ಕುಗಳ ಮಸೂದೆ, 2014ಕ್ಕೆ ಸೂಚಿಸಿರುವ ಅಧಿಕೃತ ತಿದ್ದುಪಡಿಗಳು ಈ ಸಂಘಟನೆಗಳು ವ್ಯಕ್ತಪಡಿಸಿದ್ದ ಆತಂಕಗಳನ್ನು ಸರಿಯಾಗಿ ಗಮನಕ್ಕೆ ತಗೊಂಡಿಲ್ಲ ಎಂಬುದನ್ನು ಸರಕಾರದ ಗಮನಕ್ಕೆ ತಂದಿತು. ಈ ಕುರಿತ ಒಂದು ಮನವಿ ಪತ್ರವನ್ನು ಈ ನಿಯೋಗ ಸಲ್ಲಿಸಿತು. ಮಂತ್ರಿಗಳು ಈ ನಿರ್ದಿಷ್ಟ ಸೂಚನೆಗಳನ್ನು ಗಮನಿಸುವುದಾಗಿ ಭರವಸೆ ನೀಡಿದ್ದಾರೆ ಎಂದು ನಿಯೋಗ ತಿಳಿಸಿದೆ.

ರಾಷ್ಟ್ರೀಯ ವಿಕಲಚೇತನರ ಹಕ್ಕುಗಳ ವೇದಿಕೆ(ಎನ್‌ಪಿಆರ್‌ಡಿ) ಪ್ರಧಾನ ಕಾರ್ಯದರ್ಶಿ ಕಾಂತಿ ಗಂಗೂಲಿ, ರಾಷ್ಟ್ರೀಯ ಕುರುಡರ ಒಕ್ಕೂಟದ ಕಾರ್ಯದರ್ಶಿ ಎಸ್.ಕೆ.ರುಂಗ್ಟ ಮತ್ತು ಲೆಪ್ರಸಿ ಮಿಶನ್ ಟ್ರಸ್ಟ್‌ನ ಸೀಮಾ ಬಕ್ವೆರ್ ಈ ನಿಯೋಗದಲ್ಲಿದ್ದರು.

ವಿಕಲ ಚೇತನ ವ್ಯಕ್ತಿಗಳ ವಿರುದ್ಧ ಪಕ್ಷಪಾತಕ್ಕೆ ಅವಕಾಶ ನೀಡುವ ಮಸೂದೆಯ ಸೆಕ್ಷನ್ 3(3)ರಲ್ಲಿ ಬದಲಿಸಿ ಸೇರಿಸುವ ಅಂಶವನ್ನು ತೆಗೆಯಬೇಕು, ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ, ಉದ್ಯೋಗಗಳಲ್ಲಿ 5% ಮೀಸಲಾತಿಯ ಅಂಶವನ್ನು ಮತ್ತೆ ಸೇರಿಸಬೇಕು, ನಿರ್ದಿಷ್ಟವಾಗಿ ಗುರುತಿಸಿದ ಹುದ್ದೆಗಳಿಗೆ ಮಾತ್ರವೇ ಮೀಸಲಾತಿ ಎಂಬಂತ ಸೆಕ್ಷನ್33(1)ರಲ್ಲಿ ಇರುವ ಸಂದಿಗ್ಧತೆಯನ್ನು ನಿವಾರಿಸಬೇಕು, ಇದರ ಬಿ ವಿಭಾಗದಲ್ಲಿದ್ದ ‘ಶ್ರವಣ ಮತ್ತು ವಾಕ್ ದೋಷ’ದ ಬದಲು ‘ಕಿವುಡು ಮತ್ತು ಕೇಳದಿರುವುದು’ ಎಂದು ಸೇರಿಸಿರುವುದನ್ನು ಬಿಟ್ಟು ಹಿಂದಿನಂತೆಯೇ ಇರಬೇಕು, ವಿಕಲ ಚೇತನ ವ್ಯಕ್ತಿಗಳ ಹಕ್ಕುಗಳ ರಾಷ್ಟ್ರೀಯ ಹಾಗೂ ರಾಜ್ಯ ಆಯೋಗಗಳನ್ನು ರದ್ದು ಮಾಡಬೇಕೆಂಬ ತಿದ್ದುಪಡಿಯನ್ನು ಕೈಬಿಡಬೇಕು, ಬಡ್ತಿಗಳನ್ನು ಮಿತಗೊಳಿಸುವ ತಿದ್ದುಪಡಿಯನ್ನು ಕೈಬಿಡಬೇಕು ಹಾಗೂ ಒಂದೆಡೆಯಲ್ಲಿ ವಿಕಲ ಚೇತನ ವ್ಯಕ್ತಿಗಳಿಗೆ ಪೂರ್ಣ ಬೆಂಬಲದ ಮಾತಾಡುತ್ತಲೇ ಸೀಮಿತ ಪಾಲಕತ್ವ ಎನ್ನುವುದನ್ನು ಸರಿಪಡಿಸಬೇಕು ಎಂಬ ಬೇಡಿಕೆಗಳನ್ನು ನಿಯೋಗ ಸಲ್ಲಿಸಿದ ಮನವಿಯಲ್ಲಿ ವಿಷದಪಡಿಸಲಾಗಿದೆ.

ಅಂದು ಬಾಬ್ರಿ ಮಸೀದಿ ಧ್ವಂಸ: ಇಂದು ಅಘೋಷಿತ ಹಣಕಾಸು ತುರ್ತು ಪರಿಸ್ಥಿತಿಯ ಜಾರಿ ಇಬ್ಬಗೆಯ ಅಪಾಯವನ್ನು ಚರ್ಚಿಸಬೇಕೆಂದು ರಾಜ್ಯಸಭೆಗೆ ಯೆಚೂರಿ ನಿಲುವಳಿ ನೋಟೀಸು

ಈ ಡಿಸೆಂಬರ್ 6ಕ್ಕೆ ಬಾಬ್ರಿ ಮಸೀದಿ ಧ್ವಂಸ ನಡೆಸಿ ದೇಶದ ಜಾತ್ಯಾತೀತ, ಪ್ರಜಾಸತ್ತಾತ್ಮಕ ಬುನಾದಿಯ ಮೇಲೆ ದಾಳಿ ಮಾಡಿ 24 ವರ್ಷಗಳಾಗುತ್ತಿದೆ. ಈ ದಿನ ಡಾ,ಅಂಬೇಡ್ಕರ್ ನಿಧನರಾಗಿ 60ವರ್ಷಗಳಾಗಿರುವ ಸಂದರ್ಭ ಕೂಡ. ಆದರೆ ಈ ವರ್ಷ ಈ ದಿನ ಈ ದಾಳಿಯೊಂದಿಗೆ ಅಘೋಷಿತ ಹಣಕಾಸು ತುರ್ತು ಪರಿಸ್ಥಿತಿಯ ಜಾರಿಯೂ ನಡೆದಿದೆ. ಈ ರೀತಿ ಭಾರತೀಯ ಗಣತಣತ್ರದ ಮೇಲೆ ಇಬ್ಬಗೆಯ ದಾಳಿ ನಡೆಯುತ್ತಿರುವ ಹಿನ್ನೆಲೆಯಲ್ಲಿ ರಾಜ್ಯಸಭೆ ತನ್ನ ಸಾಮಾನ್ಯ ಕಲಾಪಗಳನ್ನು ಸ್ಥಗಿತಗೊಳಿಸಿ ಈ ಅಪಾಯದ ಗಂಭೀರ ಪರಿಣಾಮಗಳನ್ನು ಚರ್ಚಿಸಬೇಕು ಎಂಬ ನಿಲುವಳಿ ಸೂಚನೆಯನ್ನು ಸಿಪಿಐ(ಎಂ)ನ ಸಂಸದೀಯ ಪಕ್ಷದ ಮುಖಂಡರೂ ಆಗಿರುವ ಸೀತಾರಾಮ್ ಯೆಚೂರಿ ಕೊಟ್ಟಿದ್ದಾರೆ.

ನಮ್ಮ ಗಣತಂತ್ರವನ್ನು ಬುಡಮೇಲು ಮಾಡುವ ಅಪಾಯವನ್ನು ನೆನಪಿಸಿಕೊಳ್ಳಬೇಕಾಗಿದೆ. ಇಂದು ಈ ಅನಾಣ್ಯೀಕರಣ ಎಂಬ ಹೆಸರಿನಲ್ಲಿ ಜಾರಿಮಾಡುತ್ತಿರುವ ಅಘೋಷಿತ ಹಣಕಾಸು ತುರ್ತು ಪರಿಸ್ಥಿತಿ ಅಪಾಯವನ್ನು ದ್ವಿಗುಣಗೊಳಿಸಿದೆ, ಯಾವುದೇ ತುರ್ತು ಪರಿಸ್ಥಿತಿ ನಮ್ಮ ಗಣತಂತ್ರ ವ್ಯವಸ್ಥೆಯ ಮೇಲೆ ದಾಳಿ ಎಂದು ಅವರು ತಮ್ಮ ನೋಟೀಸಿನಲ್ಲಿ ನೆನಪಿಸಿದ್ದಾರೆ.


ಕಪ್ಪು ಹಣವನ್ನು ಹೊರತೆಗೆಯುವ, ನಕಲಿ ನೋಟುಗಳ ಚಲಾವಣೆಯನ್ನು ನಿಲ್ಲಿಸುವ ಮತ್ತು ಭ್ರಷ್ಟಾಚಾರವನ್ನು ತಡೆಗಟ್ಟುವ ಹೆಸರಿನಲ್ಲಿ ತಂದಿರುವ ಈ ಹಣಕಾಸು ತುರ್ತು ಪರಿಸ್ಥಿತಿ ಸಂಪೂರ್ಣ ಟೊಳ್ಳು ಎಂದು ಸಿದ್ಧವಾಗುತ್ತಿದೆ. ರದ್ದು ಮಾಡಿದ 15.3 ಲಕ್ಷ ಕೋಟಿ ರೂ.ಗಳ ಮೌಲ್ಯದ ಕರೆನ್ಸಿ ನೋಟುಗಳಲ್ಲಿ ಈಗಾಗಲೇ 12.6ಲಕ್ಷ ಕೋಟಿ ರೂ.ಗಳ ಮೌಲ್ಯ ಬ್ಯಾಂಕಿಂಗ್ ವ್ಯವಸ್ಥೆಗೆ ಮರಳಿದೆ. ಕೇವಲ 2.7 ಲಕ್ಷ ಕೋಟಿ ರೂ. ಬಾಕಿ ಬರುವುದಿದೆಯಷ್ಟೆ. ಅದಕ್ಕೆ ಇನ್ನೂ ಡಿಸೆಂಬರ್ 30 ರ ವರೆಗೆ ಸರಕಾರ ಅವಕಾಶ ಕೊಟಿದ್ದು ಅದೂ ಬಂದು ಬಿಡುವ ಸಾಧ್ಯತೆಯೇ ಹೆಚ್ಚಿದೆ. ಅಂದರೆ ಕಪ್ಪು ಹಣ ಮಾತ್ರವಲ್ಲ, ನಕಲಿ ನೋಟುಗಳೂ ಕಾನುನುಬದ್ಧಗೊಂಡಂತಾಯಿತು.

ಹೀಗಿರುವಾಗ ಪ್ರಧಾನ ಮಂತ್ರಿಗಳ ಘೋಷಣೆಯ ಅರ್ಥವೇನು ಎಂದು ಯೆಚೂರಿಯವರು ಪ್ರಶ್ನಿಸಿದ್ದಾರೆ. ಒಂದೆಡೆಯಲ್ಲಿ ಅವರು ಹೇಳಿದಂತೆ ಭ್ರಷ್ಟಾಚಾರದ ಮೂಲೋತ್ಪಾಟನೆಯಾಗಿಲ್ಲ, ಬದಲಾಗಿ ಕಾನೂನುಬಾಹಿರವಾಗಿದ್ದನ್ನು ಕಾನೂನುಬಾಹಿರವಾಗಿ ಕಾನೂನುಬದ್ಧಗೊಳಿಸಿದಂತಾಗಿದ್ದರೆ, ಇನ್ನೊಂದೆಡೆ ಯಲ್ಲಿ, ಪ್ರತಿದಿನ ಸಂಪಾದಿಸುವ ನಗದಿನ ಮೇಲೆಯೇ ಬದುಕಿರುವ ಬಹುಪಾಲು ಜನಗಳ ಬದುಕನ್ನು ಹಾಳುಗೆಡವಲಾಗಿದೆ.

ಇದೀಗ ಅವರು ಭರವಸೆ ನೀಡಿದ ‘ಅಚ್ಛೇ ದಿನ್’ಗಳು. ಕಾನೂನುಬಾಹಿರವಾಗಿ, ಅನೈತಿಕವಾಗಿ ಲಾಭವನ್ನು ಉತ್ಪತ್ತಿ ಮಾಡುವುದನ್ನು ಉತ್ತೇಜಿಸಲು ಸಾಮಾನ್ಯ ಜನರು, ಮೀನುಗಾರರು, ಕಾರ್ಖಾನೆ ಕಾರ್ಮಿಕರು, ದಿನಗೂಲಿ ಕಾರ್ಮಿಕರು, ಕೃಷಿಕೂಲಿಕಾರರು ಮತ್ತಿತರ ಬಡಜನಗಳು ಬೆಲೆ ತೆರಬೇಕಾಗಿ ಬಂದಿದೆ.

ಈ ರೀತಿ ಒಂದೆಡೆಯಲ್ಲಿ ಕೋಮುವಾದೀ ದಾಳಿ, ಇನ್ನೊಂದೆಡೆಯಲ್ಲಿ ಜನಸಮಾನ್ಯರ ಬದುಕಿನ ಮೇಲೆ ದಾಳಿಯ ಹಿನ್ನೆಲೆಯಲ್ಲಿ ದೇಶದ ಪ್ರಜಾಪ್ರಭುತ್ವದ ಮೇಲೆ ಎರಗಿರುವ ಗಂಭೀರ ಅಪಾಯದ ಬಗ್ಗೆ ಸಂಸತ್ತು ಚರ್ಚೆ ನಡೆಸಬೇಕು ಎಂದು ಸೀತಾರಾಮ್ ಯೆಚೂರಿ ಆಗ್ರಹಿಸಿದ್ದಾರೆ.

1992ರ ಡಿಸೆಂಬರ್ 6 ರಂದು ಇಡೀ ದೇಶ ಕರಾಳ ಕೃತ್ಯಗಳನ್ನು ಕಾಣುತ್ತಿದ್ದಾಗ ಶಾಂತಿ ಮತ್ತು ಕೋಮು ಸೌಹಾರ್ದದ ಬಾವುಟವನ್ನು ಎತ್ತಿ ಹಿಡಿದಿದ್ದ ಪಶ್ಚಿಮ ಬಂಗಾಲ ಕೂಡ ಇಂದು ಇದಕ್ಕೆ ಧಕ್ಕೆ ಬರುತ್ತಿರುವುದನ್ನು ಕಾಣುತ್ತಿದೆ. ಈ ಸನ್ನಿವೇಶದಲ್ಲಿ ಸಿಪಿಐ(ಎಂ)ನ ಪಶ್ಚಿಮ ಬಂಗಾಲ ರಾಜ್ಯ ಸಮಿತಿ ಶಾಂತಿ ಮತ್ತು ಸೌಹಾರ್ದತೆಗೆ ಬದ್ಧತೆಯನ್ನು ಎತ್ತಿ ಹಿಡಿಯಲು ಈ ಡಿಸೆಂಬರ್ 6ರಂದು ಕೊಲ್ಕತಾದ ಪ್ರಸಿದ್ಧ ಶಹೀದ್ ಮಿನಾರ್ ಪ್ರಾಂಗಣದಲ್ಲಿ ಪ್ರಜಾಪ್ರಭುತ್ವ, ಶಾಂತಿ ಮತ್ತು ಸೌಹಾರ್ದತೆಗೆ ಬೆಂಬಲವಾಗಿ ಒಂದು ಸಾರ್ವಜನಿಕ ಅಧಿವೇಶನವನ್ನು ಸಂಘಟಿಸಿತು. ಇದನ್ನುದ್ದೇಶಿಸಿ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಮ್ ಯೆಚೂರಿ, ಪಶ್ಚಿಮ ಬಂಗಾಲ ರಾಜ್ಯ ಕಾರ್ಯದರ್ಶಿ ಸೂರ್ಯಕಾಂತ್ ಮಿಶ್ರ, ಮತ್ತೊಬ್ಬ ಪೊಲಿಟ್‌ಬ್ಯುರೊ ಸದಸ್ಯರಾದ ಮಹಮ್ಮದ್ ಸಲೀಂ ಮಾತ ನಾಡಿದರು. ಎಡರಂಗದ ಅಧ್ಯಕ್ಷ ಬಿಮನ್ ಬಸು ಅಧ್ಯಕ್ಷತೆ ವಹಿಸಿದ್ದರು.



ಮಾತೆಂದರೆ ಇದು

ಪ್ರಜಾಸತ್ತಾತ್ಮಕ ಗಣತಂತ್ರದ ಮೂಲಕ ಬೂರ್ಜ್ವಾ ಸರ್ವಾಧಿಕಾರವನ್ನು ಚಲಾಯಿಸುವ ಒಂದು ಬೂರ್ಜ್ವಾ ಪ್ರಭುತ್ವ ತಾನು ಬೂರ್ಜ್ವಾ ವರ್ಗದ ಕೈಂಕರ್ಯ ಮಾಡುತ್ತಿದ್ದೇನೆಂದು ಜನರ ಮುಂದೆ ತಪ್ಪೊಪ್ಪಿಕೊಳ್ಳಲಾರದು; ಸತ್ಯವನ್ನು ಹೇಳಲು ಅದಕ್ಕೆ ಸಾಧ್ಯವಿಲ್ಲ, ಅದು ಗೋಸುಂಬೆತನವನ್ನೇ ಪ್ರದರ್ಶಿಸಬೇಕಾಗುತ್ತದೆ.

–ಲೆನಿನ್

ಪ್ರತಿಷ್ಠಿತರ ಅಂಗಳವಾಗುವ ಬದಲು ಸಮೂಹದ ಸಂಗಮವಾಗಲು ಪ್ರಯತ್ನಿಸಿದ

82ನೇ ಕನ್ನಡ ಸಾಹಿತ್ಯ ಸಮ್ಮೇಳನ



ಎಸ್.ವೈ. ಗುರುಶಾಂತ್

ಕನ್ನಡ ಸಾಹಿತ್ಯ ಸಮ್ಮೇಳನ ಎನ್ನುವುದು ಒಂದು ಜಾತ್ರೆ. ಅದು ಸಾಹಿತ್ಯದ ಜಾತ್ರೆ. ಜಾತ್ರೆಗೆ ಸುತ್ತಲ ಪರಿಸರದಿಂದ ಜನಸಾಗರ ಹದಿರು ಬರುತ್ತದೆ. ಜಾತ್ರೆಯಲ್ಲಿರುವಂತೆ ಆರಾಧನೆ, ಸಮಾರಾಧನೆ, ತೇ ರು, ಜನರ ಸಮಾಗಮ, ಮನರಂಜನೆ, ವ್ಯಾಪಾರ, ಸಂದೇಶ ಹೀಗೆ ಹಲವು ಆಯಾಮಗಳಲ್ಲಿ ಚಟುವಟಿಕೆಗಳು ಹರಡಿಕೊಂಡಿರುತ್ತವೆ. ಹಾಗೆಯೇ ನಮ್ಮ ಕನ್ನಡ ಸಾಹಿತ್ಯ ಸಮ್ಮೇಳನವೂ ಕೂಡ ಸಾಹಿತ್ಯಿಕ, ಸಾಂಸ್ಕೃತಿಕ ಸಂಗಮದ ಜಾತ್ರೆಯಂತೆ.

ಇತ್ತೀಚಿನ ವರುಷಗಳಲ್ಲಿ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಜನರ ಆಗಮನ ಮತ್ತು ಭಾಗವಹಿಸುವಿಕೆ ಗಣನೀಯ ಪ್ರಮಾಣದಲ್ಲಿ ಏರಿಕೆಯಾಗಿದೆ, ಆಗುತ್ತಲೇ ಇದೆ. ಅದರಲ್ಲೂ ಇದೇ 2016ರ ಡಿಸೆಂಬರ್ 2 ರಿಂದ 4ರವರೆಗೆ ರಾಯಚೂರು ನಗರದಲ್ಲಿ ಜರುಗಿದ ಸಾಹಿತ್ಯ ಪರಿಷತ್ತಿನ ಸಮ್ಮೇಳನಕ್ಕೆ ಹರಿದು ಬಂದ ಜನಸಾಗರ ಸಂಖ್ಯಾತ್ಮಕವಾಗಿ ದಾಖಲಾರ್ಹ. ಮೊದಲ ದಿನ ಉದ್ಘಾಟನಾ ಕಾರ್ಯಕ್ರಮಕ್ಕೆ 1.25 ಲಕ್ಷಕ್ಕೂ ಮೀರಿ ಜನರು ಬಂದ ಅಂದಾಜು. ಸಮಾರೋಪದ ದಿನವೂ ಅಷ್ಟೇ. ಹಾಗೆಯೇ ಸಮ್ಮೇಳನದ ಪೂರ್ವ ಸಿದ್ಧತೆಯಲ್ಲಿಯೂ ಕ.ಸಾ.ಪ. ಘಟಕಗಳು ಮತ್ತು ಜನರ ಭಾಗವಹಿಸುವಿಕೆಯೂ ಅಭೂತಪೂರ್ವ. ಸಿಂಧನೂರು ತಾಲ್ಲೂಕಿನಲ್ಲೇ ಕಸಾಪ ಮಾಡಿದ ಮನವಿಗೆ ಜನ ಮನೆಗಳಿಂದ ಸುಮಾರು 2 ಲಕ್ಷ ರೊಟ್ಟಿಗಳನ್ನು ಊಟಕ್ಕೆ ಕಳುಹಿಸಿ ಕೊಟ್ಟಿದ್ದಾರೆ. ಅದೇ ರೀತಿ ಎಲ್ಲೆಡೆಗಳಿಂದ ಧನ-ಧಾನ್ಯ, ಕೊಟ್ಟವರು ಅನೇಕರಿದ್ದಾರೆ. ಕೇವಲ ಪ್ರತಿಷ್ಠಿತರ ಅಂಗಳವಾಗುವ ಬದಲು ವಿವಿಧ ವರ್ಗಗಳುಳ್ಳ ಸಮೂಹದ ಸಂಗಮವಾದದ್ದು ಗಮನಾರ್ಹವೇ.

ಆಶಯಗಳು ಹಲವು

ಹೀಗೆ "ಜನಸಾಗರ" ಸೇರುವಲ್ಲಿ 'ಕನ್ನಡದ ಪ್ರಜ್ಞೆ'ಯ ಮಿಡಿತ ಇದೆ. ಮುಖ್ಯವಾಗಿ ಟಿ.ವಿ. ಪತ್ರಿಕೆ ಒಳಗೊಂಡು ಆಧುನಿಕ ಸಮೂಹ ಮಾಧ್ಯಮಗಳ ಬಹುದೊಡ್ಡ ಪಾತ್ರವಿದೆ. ಅಕ್ಷರ ಕಲಿತ, ಕನ್ನಡದ ಪದವಿ ಪಡೆದ ಶಿಕ್ಷಿತ ಸಮೂಹದ ಸೆಳೆತವಿದೆ. ನಾಡಿನ ಗಣ್ಯರು, ಚಿಂತಕರ ಮಾತುಗಳನ್ನು ಕೇಳಬೇಕು, ವಿಚಾರ ಅರಿಯಬೇಕು ಎಂಬ ಹೊಸ ತಿಳಿವಿನ ಹಂಬಲದ ಹೊಸ ಜನಾಂಗವೂ ಇದೆ. ಕನ್ನಡದ ಭಾಷೆಯೊಂದಿಗೆ ತಮ್ಮನ್ನು ಗುರುತಿಸಿಕೊಳ್ಳುವ ಅಸ್ತಿತ್ವಾಕಾಂಕ್ಷಿ ವ್ಯಕ್ತಿತ್ವಗಳಸಿವೆ.

ರಾಯಚೂರಿನಲ್ಲಿ ಸಮ್ಮೇಳನಕ್ಕೆ ಗಡಿನಾಡು ಎಂಬುದು ಒಂದು ಕಡೆಯಾದರೆ, ಜನಪರ ಸಾಹಿತಿ ಬರಗೂರುರವರು ಅದರ ಸರ್ವಾಧ್ಯಕ್ಷರಾದ ಅಂಶದ ಪರಿಣಾಮವೂ ಇಲ್ಲದಿಲ್ಲ.

ಪ್ರಶ್ನೆ, ಲಕ್ಷಾಂತರ ಜನ ಸೇರುವ, ನೇರ-ಪರೋಕ್ಷವಾಗಿ ಹತ್ತಾರು ಕೋಟಿ ಹಣ ಖರ್ಚಾಗುವ, ನಾಡಿನ ಪ್ರಮುಖರು ನೆರೆಯುವ ಈ ಸಮ್ಮೇಳನ ತನ್ನ ಆಶಯ ತಲುಪುವಲ್ಲಿ ಯಶಸ್ವಿಯಾಗಿದೆಯೇ? ಆಗುತ್ತಿದೆಯೇ? ಎಂದು.

82ನೆಯ ಈ ಸಾಹಿತ್ಯ ಸಮ್ಮೇಳನದ ಯಶಸ್ಸು ಹಿಂದಿನವುಗಳಂತೆ ಭಾಗಶಃ ಎಂದು ಹೇಳಬಹುದು. ಕನ್ನಡ ಭಾಷೆ, ಸಾಹಿತ್ಯದ ಬಗ್ಗೆ ಒಂದು ಹಂತದ ಜಾಗೃತಿಯನ್ನು ಮೂಡಿಸುವಲ್ಲಿ ಇದು ಯಶಸ್ಸಿಯಾಗಿದೆ ನಿಜ. ಸಾಹಿತ್ಯ ಸಮ್ಮೇಳನದಲ್ಲಿ ನಾಡು-ನುಡಿಯ ಹಿತ ಚಿಂತನೆಯೂ, ವರ್ತಮಾನದ ಸವಾಲುಗಳಿಗೆ ಮುಖಾಮುಖಿಯಾಗುವಲ್ಲಿ ನಡೆದ ಪ್ರಯತ್ನಗಳು ಫಲ ನೀಡಿರುವುದು ಭಾಗಶಃ. ಇಲ್ಲೆಲ್ಲಾ ವಿಚಾರಗೋಷ್ಠಿಗಳು ಪ್ರಧಾನ ಪಾತ್ರ ವಹಿಸಬೇಕಿತ್ತು. ಆದರೆ ಇದಕ್ಕೆ ತನ್ನದೇ ಒಂದು ಏಕತಾನತೆ ಹಾಗೂ ಸೀಮಿತತೆ ಹಲವು ವರುಷಗಳಿಂದ ಪ್ರಾಪ್ತವಾಗಿ ಬಿಟ್ಟಿದೆ.

ವಿಚಾರಪೂರ್ಣ ಮಾತುಗಳು

ಈ ಸಮ್ಮೇಳನದ ಹೈಲೈಟ್ ಎಂದರೆ ಸರ್ವಾಧ್ಯಕ್ಷರ ಭಾಷಣ.

ಪ್ರತಿ ಸಮ್ಮೇಳನಗಳಲ್ಲಿಯೂ ಅಧ್ಯಕ್ಷರ ಭಾಷಣವನ್ನು ಆಲಿಸಲು ಎಲ್ಲರೂ ಉತ್ಸುಕರಾಗಿರುತ್ತಾರೆ. ಈ ಬಾರಿ ನಾಡೋಜ ಬರಗೂರು ರಾಮಚಂದ್ರಪ್ಪನವರ ಭಾಷಣ ಕೇಳಲು ಸಹ ಉತ್ಸುಕರಾಗಿದ್ದರು ಜನ. ಇಡೀ ಸಮ್ಮೇಳನಕ್ಕೆ ಅಗತ್ಯವಾದ ದಿಕ್ಸೂಚಿ ಭಾಷಣವನ್ನೂ ಅವರು ಮಾಡಿದರು. ಅದು ಹಲವು ವಿಚಾರಗಳಿಂದ ಅತ್ಯಂತ ಪರಿಣಾಮಕಾರಿಯಾಗಿತ್ತು.

ವರ್ತಮಾನದ ಹತ್ತಾರು ಸಂಗತಿಗಳನ್ನು ಚರ್ಚೆಗೆ ಒಳಪಡಿಸುವಂತಿದ್ದವು ಅವರ ಮಾತುಗಳು. ಭಾಷೆ ಮತ್ತು ಬದುಕಿನ ನಡುವಿನ ಅವಿನಾವಭಾವ ಸಂಬಂಧಗಳನ್ನು ತೆರೆದಿಡುತ್ತಲೇ, ಕನ್ನಡ-ಕರ್ನಾಟಕ ಒಂದು ಭಾಷೆಯಾಗಿ, ಪ್ರದೇಶವಾಗಿ, ಜನರಾಗಿ ಎದುರಿಸುವ ಸವಾಲುಗಳನ್ನು ತೋರು ಬೆರಳಿನಿಂದ ಗುರುತಿಸಿದರು.

ದೇಶದಲ್ಲಿ ಹಾಗೂ ರಾಜ್ಯದಲ್ಲಿ ವಿನಾಶಕಾರಿ ಪ್ರವೃತ್ತಿಯಾಗಿ ಬೆಳೆಯುತ್ತಿರುವ ಕೋಮುವಾದ-ಮತೀಯ ಮೂಲಭೂತವಾದದ ಅಪಾಯಗಳನ್ನು ತೆರೆದಿಟ್ಟರು. ಡಾ॥ಎಂ.ಎಂ.ಕಲಬುರ್ಗಿಯವರ ಹತ್ಯೆಯ ಗಂಭೀರತೆ ಪ್ರಸ್ತಾಪಿಸುತ್ತಾ, ಭಿನ್ನಾಭಿಪ್ರಾಯಗಳನ್ನು ಬಲಿಪೀಠವಾಗಿಸಿದ ಧಾರುಣ ಅಂಶಗಳನ್ನೂ ಬಿಡಿಸಿಟ್ಟರು. ಈ ಫ್ಯಾಸಿಸ್ಟ್ ಮನೋಭಾವ ಹೇಗೆ ಪ್ರಜಾಪ್ರಭುತ್ವಕ್ಕ ಮಾರಕ ಎನ್ನುವುದನ್ನು ತಿಳಿಸಿದರು.

ಕರ್ನಾಟಕದ ಏಕೀಕರಣದ ಆಶಯವನ್ನೂ ತಿಳಿಸುತ್ತಾ, ಪ್ರಾದೇಶಿಕ ಅಸಮಾನತೆಯನ್ನು ಗುರುತಿಸಿ ಕರ್ನಾಟಕದ ಜನ-ಮನವನ್ನೂ ಒಂದು ಗೂಡಿಸುವ ಅಗತ್ಯ ಕೆಲಸಗಳತ್ತ ಬೊಟ್ಟು ಮಾಡಿದರು. ಪ್ರತ್ಯೇಕ ರಾಜ್ಯದ ಬೇಡಿಕೆ ಸಮಸ್ಯೆಗೆ ಪರಿಹಾರವಲ್ಲ ಎಂಬುದನ್ನೂ ಮನವರಿಕೆ ಮಾಡಿದರು.

ಅವರ ಭಾಷಣದಲ್ಲಿ ಗಂಭೀರವಾಗಿ ಪ್ರಸ್ತಾಪಿತವಾದದ್ದೂ ಕೇಂದ್ರ-ರಾಜ್ಯಗಳ ನಡುವಿನ ಸಂಬಂಧಗಳಲ್ಲಿನ ವಿಕೃತತೆ, ಜಾಗತೀಕರಣದ ಪರಿಣಾಮಗಳು, ಜನತೆಯನ್ನು ದಮನಿಸುತ್ತಿರುವ ಸಾಮಾಜಿಕ, ಆರ್ಥಿಕ ದೌರ್ಜನ್ಯಗಳು, ಸಮಾನ ಶಿಕ್ಷಣ ನೀತಿ, ಅಗತ್ಯತೆ, ಮಾತೃಭಾಷೆ, ಭಾಷಾ ಮಾಧ್ಯಮದ ವಿಚಾರಗಳು. ಲಿಂಗತಾರತಮ್ಯ. ಉದ್ಯೋಗ ಸೃಷ್ಠಿ, ಮಾಹಿತಿ ತಂತ್ರಜ್ಞಾನ ಇತ್ಯಾದಿಗಳನ್ನು ಅವರ ಭಾಷಣದಲ್ಲಿ ವಿಸ್ತೃತವಾಗಿ ಒಳಗೊಂಡಿವೆ. ಧೀರ್ಘವಾದ ಲಿಖಿತ ಭಾಷಣವನ್ನು ಓದದೇ ಹಾಗೇ ನಿರರ್ಗಳವಾಗಿ ಮಾತನಾಡಿದ್ದು ಜನರನ್ನು ಸೆಳೆಯಿತು. ಜನತೆಯನ್ನು ಮಾನಸಿಕವಾಗಿ, ಆಡಳಿತಾತ್ಮಕವಾಗಿ ಹತ್ತಿರ ತಂದು ಬೆಸೆಯುವ ಪ್ರಾದೇಶಿಕವಾದ ಸಚಿವಾಲಯ ಕಛೇರಿ ಸ್ಥಾಪಿಸಲು ಸೂಚಿಸಿದರು. ಶಿಕ್ಷಣದ ಭಾಷಾ ಮಾಧ್ಯಮದ ಬಗ್ಗೆ ಸಂವಿಧಾನದ ವ್ಯಾಪ್ತಿಯಲ್ಲಿ ಪರಿಹಾರ ಕಾಣಲು ಪ್ರಯತ್ನಿಸಲು ಮುತುವರ್ಜಿ ವಹಿಸಲು ಸರಕಾರಕ್ಕೆ ಸೂಚಿಸಿದರು. ಹಾಗೆಯೇ ಭಾರತದ ಸಂವಿಧಾನದ ಒಕ್ಕೂಟದ ವ್ಯವಸ್ಥೆಯನ್ನು ದುರ್ಬಲಗೊಳಿಸುತ್ತಾ, ರಾಜ್ಯಗಳ ಅಧಿಕಾರ ಮೊಟಕು ಮಾಡುತ್ತಾ ಹೊರಟಿರುವ ಕೇಂದ್ರದ ನೀತಿಯ ವಿರುದ್ಧ ರಾಜ್ಯಗಳ ಹಕ್ಕಿಗಾಗಿ ಹೋರಾಡಲು ಕರ್ನಾಟಕ ರಾಜ್ಯ ಸರಕಾರ ಎಲ್ಲಾ ಸಮಾನ ಮನಸ್ಕ ರಾಜ್ಯಗಳನ್ನೂ ಒಂದುಗೂಡಿಸಲು ಸಲಹೆ ನೀಡಿದರು.

ಸಾಮಾಜಿಕ, ಆರ್ಥಿಕ ಅಸಮಾನತೆಯ ವ್ಯವಸ್ಥೆಯಿಂದ ವಿಮೋಚನೆಗೊಳ್ಳಲು ಹೊಸ ಪರ್ಯಾಯಗಳು ಬೇಕು ಎಂದೂ ಪ್ರತಿಪಾದಿಸಿದರು. ಅವರ ಭಾಷಣದುದ್ದಕ್ಕೂ ಜನತೆಯ, ಶ್ರಮಿಕರ ಹಿತಾಸಕ್ತಿ ಧ್ವನಿಸಿದ್ದು ಕಂಡು ಬಂದಿತು. ಸಾಹಿತಿಗಳು ಜನರಿಗೆ ಸಂದೇಶ ನೀಡಿ ಹೋಗುವುದಲ್ಲ, ಬದಲಿಗೆ ಜನರಿಂದ ಅಪಾರವಾಗಿ ಕಲಿಯಬೇಕಿದೆ, ಉತ್ತರದಾಯಿಗಳೂ ಆಗಬೇಕಿದೆ ಎಂದು ಸಾಹಿತಿ ಮತ್ತು ಸಾಹಿತಿ ಜನಮುಖಿಯಾಗಬೇಕಾದ ಅಗತ್ಯವನ್ನು ಪ್ರತಿಪಾದಿಸಿದರು. ಅಧ್ಯಕ್ಷರೊಂದಿಗಿನ ಸಂವಾದವೂ ಅರ್ಥಪೂರ್ಣವಾಗಿ ನಡೆದಿದೆ. (ಅವರ ಭಾಷಣದ ಮುಖ್ಯ ಅಂಶಗಳು ಮುಂದಿನ ವಾರದಲ್ಲಿ).

ಸಮ್ಮೇಳನ ಉದ್ಘಾಟಿಸಿ ಮಾತನಾಡಿದ ಮುಖ್ಯಮಂತ್ರಿ ಸಿದ್ಧರಾಮಯ್ಯನವರು ಲಿಖಿತ ಭಾಷಣ ಓದಿದ್ದಲ್ಲದೇ ಬರಗೂರುರವರ ಮಾತುಗಳಿಗೆ ಪ್ರತಿಕ್ರಿಸಿದರು. ಕೊಟ್ಟ ಭರವಸೆಗಳು ಹೇಗೆ ಕಾರ್ಯರೂಪಕ್ಕೆ ಬರುತ್ತವೆ ಎಂಬುದನ್ನು ಮತ್ತೇ ಕಾದು ನೋಡಬೇಕು ಅಷ್ಟೇ.

ಗಂಭೀರತೆಯ ಕೊರತೆ

ಈ ಸಮ್ಮೇಳನದಲ್ಲಿ ಒಟ್ಟು 17 ವಿಚಾರಗೋಷ್ಠಿಗಳು, 2 ಕವಿಗೋಷ್ಠಿ, 2 ವಿಶೇಷ ಉಪನ್ಯಾಸಗಳು ನಡೆದಿವೆ. ಇದಕ್ಕಾಗಿ ಸಮಾನಾಂತರ ವೇದಿಕೆಗಳು ರೂಪಿತವಾಗಿದ್ದವು. ಸಾವಿರಾರು ಜನ ಅತ್ಯಂತ ಆಸಕ್ತಿಯಿಂದ ಭಾಗವಹಿಸಿದ್ದಾರೆ. ಇದು ಅವರ ಜ್ಞಾನದಾಹವನ್ನೂ ತೋರಿಸುತ್ತದೆ. ಆದರೆ, ಒಂದೆರೆಡು ಗೋಷ್ಠಿಗಳನ್ನು ಬಿಟ್ಟರೇ ಬಹುತೇಕ ಗೋಷ್ಠಿಗಳ ವಿಷಯ, ವಿಷಯ ಮಂಡನೆ ಚರ್ವಿತ ಚರ್ವಣ ! ಪ್ರಬಂಧ ಮಂಡಿಸುವವರು ಅತ್ಯಂತ ಗಂಭೀರ ಸಿದ್ಧತೆಯಲ್ಲಿ ಭಾಗವಹಿಸದೇ ಇರುವುದು, ಕೇವಲ ಭಾಷಣದ ಸ್ವರೂಪದಲ್ಲೇ ಮಂಡಿಸುವುದು ಹೆಚ್ಚುತ್ತಿದೆ. ನಿಜಕ್ಕೂ ವರ್ತಮಾನದ ಹಲವು ವಿಷಯಗಳ ಬಗ್ಗೆ ಗೋಷ್ಠಿ ನಡೆಸುವುದು ಮತ್ತು ಚರ್ಚಿಸುವುದು ಇಲ್ಲವಾಗುತ್ತಿದೆ. ಅತಿಥಿಗಳನ್ನು ತೊಡಗಿಸಬೇಕೆಂಬ ಭಿಡೆ ಮುಖ ನೋಡಿ ಮಣೆ ಹಾಕುವ ಪ್ರವೃತ್ತಿಯು ಸಮ್ಮೇಳನವು ಸರಳ ರೇಖೆಯಲ್ಲಿ ಸಾಗಲು ಕಾರಣವಾಗುತ್ತಿದೆ. ಮಂಡಿತ ವಿಷಯದ ಸುತ್ತ ತೀವ್ರ ವಾದ-ವಾಗ್ವಾದ, ಜ್ಞಾನ ಹಂಚಿಕೆ ಇಲ್ಲವಾಗಿ ಏಕಮುಖವಾಗಿದೆ. ಈ ಸಮ್ಮೇಳನ ನಾಡು-ನುಡಿ, ಜನತೆಯ ಬದುಕಿನ ಬಗ್ಗೆಯೂ ಚಿಂತಿಸಿ ನಿರ್ಣಯಗಳನ್ನೂ ಕೈಗೊಂಡು ಅದರ ಜಾರಿಗಾಗಿ ಆಂದೋಲನ ನಡೆಸುವ ಇಚ್ಛಾಶಕ್ತಿ ಇಲ್ಲವಾಗಿದೆ. ಇದು ಜನರು ಸಂಘಟಿಸುವ ಸಮ್ಮೇಳನ ಎನ್ನುವುದಕ್ಕಿಂತ ಸರಕಾರೀ ಪ್ರಾಯೋಜಕತ್ವವೇ ಪ್ರಧಾನವಾಗಿರುವುದು ಇದಕ್ಕೆ ಮಿತಿಯನ್ನೂ ಹೇರಿದೆ. ಹಾಗಾಗಿಯೇ ಇಷ್ಟೊಂದು ದೊಡ್ಡ ಪ್ರಮಾಣದ ಕಸರತ್ತಿನಲ್ಲಿ ಜನರ ಶಕ್ತಿ ಪೋಲಾಗುತ್ತಿದೆಯೇ ಎಂಬ ಅನಿಸಿಕೆ ಕಾಡದಿರದು. ಸಾಹಿತ್ಯ ಸಮ್ಮೇಳನದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳು ಜನರನ್ನು ಸೆಳಿದಿವೆ. ಎರಡು ಕವಿಗೋಷ್ಠಿಗಳಿಗೆ ಕವಿಗಳ ಸಂಖ್ಯೆ ಹೆಚ್ಚು, ನೂಕುನುಗ್ಗಲಾಯಿತು ಎಂದು ಅಸಮಾಧಾನ ತೋಡಿಕೊಂಡರು ಕೆಲವರು.

ಮಿತಿಗಳು, ವೈಫಲ್ಯಗಳು

ಪ್ರಧಾನವಾಗಿ ಬಹುತೇಕ ಸಾಹಿತ್ಯ ಸಮ್ಮೇಳನಗಳು ಇದೇ ಧಾಟಿಯಲ್ಲಿಯೇ ಇರುವುದಕ್ಕೆ ಮುಖ್ಯಕಾರಣ ಸಮ್ಮೇಳನದ ಮೂಲ ಸಂರಚನೆಯಲ್ಲಿರುವ ಮಿತಿ. ಇಂತಹ ಸಮ್ಮೇಳನ ಸಾಹಿತ್ಯಿಕ, ಸಾಮಾಜಿಕ, ಆರ್ಥಿಕ ಚಿಂತನೆಗಳಿಗಿಂತ, ಹೊಸ ಸಾಹಿತ್ಯಕ, ಸೈದ್ಧಾಂತಿಕ ವಾಗ್ವಾದಗಳಿಗಿಂತ ಸರಾಗವಾಗಿ ಜಾರುವ ಜಾತ್ರೆಯಂತೆ ಸಂಘಟಿಸುವ ಅದರ ವಿಧಾನವೇ ಒಂದು ಮಿತಿ. ಇನ್ನು ಇಲ್ಲಿ ನಿರ್ಣಯಗಳನ್ನೂ ಕೈಗೊಳ್ಳುತ್ತದಾದರೂ (ಬಹುತೇಕ ನಾಮಕಾವಸ್ಥೆ) ಅವನ್ನು ಜಾರಿಗೆ ತರುವ ಇಚ್ಛಾಶಕ್ತಿಯ ಕೊರತೆ ಎದ್ದು ಕಾಣುತ್ತದೆ.

ಆಳುವವ ವರ್ಗಗಳನ್ನು ಪ್ರಶ್ನಿಸುವ, ನೀತಿ ಬದಲಾಯಿಸುವಲ್ಲಿ ಜನರನ್ನು ತೊಡಗಿಸದೇ ಇರುವ ಹೊಂದಾಣಿಕೆ ಪ್ರವೃತ್ತಿ ಇದಕ್ಕೊಂದು ಕಾರಣ. ಹೀಗಾಗಿ, ಕನ್ನಡ ಸಾಹಿತ್ಯ ಪರಿಷತ್ತು ಕನ್ನಡಿಗರ 'ಪ್ರಾತಿನಿಧಿಕ ಸಂಸ್ಥೆ' ಎಂದು ಹೇಳಿಕೊಳ್ಳುವಾಗಲೇ ಅದು ನಿಜದಲ್ಲಿ ಪೂರ್ತಿ ಜನ-ಪ್ರಾತಿನಿಧಿಕವಾಗದ ಸ್ಥಿತಿ ! ಹೀಗಾಗಿ ಸಾಹಿತ್ಯ ಸಮ್ಮೇಳನಕ್ಕೆ ತನ್ನ ಮೂಲ ಸಂರಚನೆಯನ್ನೂ ಬದಲಾಯಿಸಿಕೊಳ್ಳಬೇಕಾದ ಅಗತ್ಯತೆ ಇದೆ.

ಈ ಸಮ್ಮೇಳನದಲ್ಲಿ ಸಾಹಿತ್ಯ, ಸಾಮಾಜಿಕ ಕ್ಷೇತ್ರದ ದಿಗ್ಗಜರನ್ನೂ, ವಿವಿಧ ಅಕಾಡೆಮಿ ಇತ್ಯಾದಿ ಸಂಸ್ಥೆಗಳ ಪ್ರಮುಖರನ್ನೂ ಒಳಗೊಳ್ಳಲಿಲ್ಲ ಎಂಬ ಮಾತು ಕೇಳಿ ಬಂದಿದೆ. ಇದಕ್ಕೆ ಕ.ಸಾ.ಪ. ಅಧ್ಯಕ್ಷರು ಈ ಕೊರತೆಯನ್ನು ತಿದ್ದಿಕೊಳ್ಳುವುದಾಗಿಯೂ ಹೇಳಿದ್ದಾರೆ. ಹಾಗೆ ಅಂತಹವರನ್ನು ಕರೆದು ತಂದಾಗಲೂ ಉತ್ಸವಮೂರ್ತಿಗಳಂತೆ ಮಾಡದೇ ಸಂವಾದದಲ್ಲಿ ತೊಡಗಿಸಬೇಕು. ಅದೇ ರೀತಿ ಬಹು ಭಾಷಾ ಸಾಮಾರಸ್ಯ ಇರುವ ಗಡಿನಾಡಾಗಿರುವ ರಾಯಚೂರು ಜಿಲ್ಲೆಯಲ್ಲಿ ಗಡಿ ಕನ್ನಡಿಗರ ಸಮಸ್ಯೆಗಳತ್ತ ಹೆಚ್ಚು ಚರ್ಚೆ, ಒತ್ತು ಇರಲಿಲ್ಲ ಎಂಬ ಅತೃಪ್ತಿ ಸಕಾರಣವಾಗಿದೆ.

ಪುಸ್ತಕ ಮಾರಾಟ ಸೊರಗಿಸಿದ 'ಸರ್ಜಿಕಲ್ ಧಾಳಿ'

ಸಾಹಿತ್ಯ ಪ್ರೇಮಿಗಳು ಅಪಾರ ಸಂಖ್ಯೆಯಲ್ಲಿ ನೆರೆದಿದ್ದರೂ ಸಾಹಿತ್ಯದ ಕೃತಿಗಳ ಮಾರಾಟ ಪ್ರಕಾಶಕರು, ಮಾರಾಟಗಾರರು ನಿರೀಕ್ಷೆಸಿದಷ್ಟು ಆಗಲಿಲ್ಲ ಎಂಬುದು ವಿಷಾಧನೀಯ. ಕ.ಸಾ.ಪ. ಅಧ್ಯಕ್ಷರು ಪುಸ್ತಕ ಮಳಿಗೆಗಳ ಸಂಖ್ಯೆ ಹೆಚ್ಚಿಸುವುದಾಗಿ ಹೇಳಿದ್ದಾರೆ. ಆದರೆ ಈ ಬಾರಿ ಮಾರಾಟ ತೀರಾ ಸಾಮಾನ್ಯ. ಇದರಲ್ಲಿ ಮುಖ್ಯವಾಗಿ ಬಂದ ಜನಗಳಲ್ಲಿ ಹೆಚ್ಚಿನವರು ಅನಕ್ಷರಸ್ಥರು, ಓದುಬಲ್ಲ ಬಹುತೇಕರು ;ಪ್ಲಾಸ್ಟಿಕ್ ಮನಿ ಕಾಡ್' ಇಲ್ಲದೇ 'ಮೋದಿಯವರ ಹಣಕಾಸು ಸರ್ಜೀಕಲ್ ಧಾಳಿಗೆ' ಕೈ ಕಟ್ಟಿಸಿಕೊಂಡವರು !

ಈ ಸಾಹಿತ್ಯ ಸಮ್ಮೇಳನವನ್ನು ಉತ್ತಮವಾಗಿ ನಡೆಸಿಕೊಟ್ಟಿದ್ದಾರೆ ಅಲ್ಲಿಯ ಸ್ವಾಗತ ಸಮಿತಿ ಮತ್ತು ಮುಖ್ಯವಾಗಿ ಕೊಡುಗೆ ನೀಡಿ ದುಡಿದ ಜನ, ಆದರೆ ಎಲ್ಲಾ ಹಂತಗಳಲ್ಲಿಯೂ ಅಧಿಕಾರಶಾಹಿಯದ್ದೇ ಮೇಲುಗೈ ಇದ್ದಂತೆ ಕಂಡಿತು.

ಸಕಾರಾತ್ಮಕ

ಒಟ್ಟಾರೆ ಇಂತಹ ಸಮ್ಮೇಳನಗಳು ಜನತೆಯನ್ನು ಜಾಗೃತವಾಗಿಡುವಲ್ಲಿ ಸಹಕಾರಿ. ಇತ್ತೀಚೆಗೆ ಬೆಂಗಳೂರು ಫೆಸ್ಟ್ ನಡೆಸುವ ಕಾರ್ಪೋ-ರೇಟ್ ಕಂಪನಿಗಳು, ಶಿಕ್ಷಣದ ಭರ್ಜರಿ ವ್ಯಾಪಾರ ನಡೆಸುವ ಆಳ್ವಾಸ್ ರವರ ನುಡಿ ಸಿರಿಗಳು, ಫೋರ್ಡ್ ಹಣದ ಸಂಸ್ಕೃತಿ ಚರ್ಚೆಗಳು ಜನರನ್ನು ಬದುಕು-ಬವಣೆಗಳ ಕೇಂದ್ರೀತ ಸಾಂಸ್ಕೃತಿಕ ಮತ್ತು ಸಾಹಿತ್ಯಿಕ,ವೈಚಾರಿಕತೆಗಳಿಂದ ವಿಮುಖಗೊಳಿಸುವ ಹತ್ತಾರು ಪ್ರಯತ್ನಗಳನ್ನು ಮಾಡುತ್ತಿರುವಾಗ ಕನ್ನಡ ಸಾಹಿತ್ಯ ಸಮ್ಮೇಳನವು ಸ್ವಲ್ಪವಾದರೂ ಜನಪರವಾಗಿ ಸ್ಪಂದಿಸುವುದು, ಚಿಂತಕರನ್ನು ತೊಡಗಿಸುವುದು ಸ್ವಾಗತಾರ್ಹ. ನಮ್ಮ ಆಶಯ ಅದು ಮತ್ತಷ್ಟೂ ಜನಮುಖಿಯಾಗಲಿ, ಕಾಲದ ಸವಾಲುಗಳನ್ನು ಎತ್ತಿಕೊಳ್ಳಲು ಚೈತನ್ಯ ನೀಡಲಿ ಎಂಬುದು.

●

ಕೇಳಿಸಿದ್ದು

ಕನ್ನಡಕ್ಕೆ ಸಾವಿಲ್ಲ; ಸವಾಲುಗಳಿವೆ. ಈ ಸವಾಲುಗಳನ್ನು ಎದುರಿಸುವ ಶಕ್ತಿಯನ್ನು ಕನ್ನಡಿಗರಿಗೆ ಕೊಟ್ಟರೆ ಕನ್ನಡದ ಕಂಟಕಗಳಿಗೆ ಅವರೇ ಸವಾಲು ಎಸೆಯುತ್ತಾರೆ. ಹಾಗಾದರೆ ಕನ್ನಡಿಗರಿಗೆ ನಾವು ಕೊಡಬೇಕಾದ ಶಕ್ತಿ ಯಾವುದು? ಬದುಕುವ ಶಕ್ತಿ; ಸಾಮಾಜಿಕ ಶಕ್ತಿ; ಆರ್ಥಿಕ ಶಕ್ತಿ; ಶಿಕ್ಷಣದ ಶಕ್ತಿ; ಉದ್ಯೋಗ ಶಕ್ತಿ; ಹಸಿವುಮುಕ್ತ ಶಕ್ತಿ; ಸಮಾನತೆಯ ಶಕ್ತಿ. ಅಂದರೆ ನಮ್ಮ ಭಾಷಾ ಹೋರಾಟಗಳು ಸಾಮಾಜಿಕ ಹೋರಾಟಗಳೂ ಆಗಬೇಕು. ಬದುಕಿನ ಅಗತ್ಯಗಳಿಗೂ ಭಾಷೆಗೂ ಇರುವ ಅಂತರ್ ಸಂಬಂಧವನ್ನು ಗ್ರಹಿಸಿದ ತಾತ್ವಿಕತೆ ಕೇಂದ್ರಪ್ರಜ್ಞೆಯಾಗಬೇಕು. ಸಮೂಹ ಸನ್ನಿಯಾಗದ ಸಮೂಹ ಪ್ರಜ್ಞೆ ಬೇಕು.

-ಡಾ. ಬರಗೂರು ರಾಮಚಂದ್ರಪ್ಪ 82ನೇ ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರ ಭಾಷಣದಲ್ಲಿ

ಬೆಳಗಾವಿ ಸುವರ್ಣ ಸೌಧಕ್ಕೆ ಸಾಗರೋಪಾದಿಯಲ್ಲಿ ಬಂದ ಕಾರ್ಮಿಕರು



ಸರ್, ನಮ್ಮ ಸಾಲ್ಯಾಗ ಹುಡುಗರ ಸಂಖ್ಯೆ 20 ಇತ್ತಿರಿ! ನಾವು ಇಬ್ಬರು ಅಡುಗೆ ಕೆಲಸ ಮಾಡ್‌ತ್ತಿದ್ದಿವಿ. ಈಗ 5 ಹುಡುಗರು ಕಮ್ಮಿ ಆಗ್ಯಾರಂತ ನನಗ ಕೆಲಸದಿಂದ ತಗೆದಾರಂತ ಗೋಕಾಕ ತಾಲೂಕಿನ ಕುಲಗೋಡ ಗ್ರಾಮದ ತೋಟದ ಶಾಲೆಯ ಬಡ ಹೆಣ್ಣು ಮಗಳು ಕಣ್ಣೀರಿಟ್ಟಳು.

ಸರ್, ನಾವು ಪಂಚಾಯತ್‌ನಲ್ಲಿ ಕಸ ಗೂಡಿಸುವ ಕೆಲಸ ಮಾಡ್ತೇವಿ, ಸಂಘದ ಬಲ ಹಾಗೂ ಹೋರಾಟದಿಂದ ನಮಗ 12,870 ರೂಪಾಯಿ ಪಗಾರ ಕೊಡಬೇಕಂತ ಸರಕಾರ ಹೇಳೆತಂತ, ಆದರ ನಮಗ, ರೂಪಾಯಿ 3,000 ಪಗಾರ ಕೊಡಾಕತ್ಯಾರ ಅಂತ ಹುಕ್ಕೇರಿ ತಾಲೂಕಿನ ದಡ್ಡಿ ಗ್ರಾಮ ಪಂಚಾಯತ್‌ನ ಕಸ ಗುಡಿಸುವ ದಲಿತ ಹೆಣ್ಣು ಮಕ್ಕಳು ತಮ್ಮ ಗೋಳನ್ನು ತೋಡಿಕೊಳ್ಳುತ್ತಿದ್ದರು.

ಈ ರೀತಿಯ ತಮ್ಮ ಗೋಳು ತೋಡಿ-ಕೊಂಡ ಕಾರ್ಮಿಕರು ಒಬ್ಬಿಬ್ಬರಲ್ಲಾ, ಬದಲಾಗಿ ಬೆಳಗಾವಿಯಲ್ಲಿ ಅಧಿವೇಶನ ನಡೆಯುವ ಸಂದರ್ಭದಲ್ಲಿ ಸಾಗರೋಪಾದಿಯಲ್ಲಿ ಹರಿದು ಬಂದ ಕಾರ್ಮಿಕರು 'ಸುವರ್ಣಸೌಧ' ಮೈದಾನದಲ್ಲಿ ನಡೆದ ಧರಣಿಯಲ್ಲಿ ಭಾಗವಹಿಸಿದ ಗ್ರಾಮ ಪಂಚಾಯತಿ ನೌಕರರು, ಅಂಗನವಾಡಿ ನೌಕರರು, ಬಿಸಿಯೂಟ ಅಡುಗೆ ನೌಕರರು ಹಾಗೂ ಪಟ್ಟಣ ಪಂಚಾಯತಿ ಸಿಬ್ಬಂದಿಗಳು ತಮ್ಮ ಪ್ರಮುಖ ಬೇಡಿಕೆಗಳನ್ನು ಬಗೆಹರಿಸಬೇಕೆಂದು ಆಕ್ರಂದನ ವ್ಯಕ್ತಪಡಿಸಿದರು.

ಸುಮಾರು 7,000 ಕಾರ್ಮಿಕರ ಬೃಹತ್ 'ಸುವರ್ಣಸೌಧ ಚಲೋ' ಕಾರ್ಯಕ್ರಮ ಡಿಸೆಂಬರ್ 2ರಂದು ಬೆಳಗಾವಿಗೆ ಕೆಂಪು ಸಾಗರವೇ ಹರಿದು ಬಂದಂತಿತ್ತು. ಜಿಲ್ಲೆಯ 10 ತಾಲೂಕುಗಳಿಂದ ವಾಹನಗಳ ಮೂಲಕ, ಪೊಲೀಸ್ ಇಲಾಖೆಯವರು ವ್ಯವಸ್ಥೆ ಮಾಡಿದ ಬಸ್‌ಗಳ ಮೂಲಕ ಸಾಗರದಂತೆ ಜನ ಹರಿದು ಬಂದಿದ್ದು ನೋಡಿದರೆ ಜನ ಬೆರಗಾಗಿ ನೋಡುವಂತಾಗಿತ್ತು. ಪೋಲೀಸ್ ಅಧಿಕಾರಿಗಳು ಜನಸಾಗರವನ್ನು ನೋಡಿ, ಸರ್ ಯಾವ ಮಂತ್ರಿಯನ್ನು, ಯಾವ ಅಧಿಕಾರಿಯನ್ನು ಕರೆಸಬೇಕೆಂದು ದುಂಬಾಲು ಬಿದ್ದಿದ್ದರು.

ಕಾರ್ಮಿಕ ಹೃದಯಾಂತರಾಳದಿಂದ ಹೊರ ಬಂದ ಘೋಷಣೆಗಳು ಇಡೀ ಸುವರ್ಣಸೌಧದ ಸುತ್ತಮುತ್ತಲು ನೆರದಿದ್ದ ಜನತೆಯನ್ನು ನಿಬ್ಬೆರಗಾಗುವಂತೆ ಮಾಡಿತು. ಸರಕಾರವೇ ಹೊರಡಿಸಿದ ಆದೇಶಗಳನ್ನು, ಸರಕಾರದ ಅಧಿಕಾರಿಗಳೇ ಜಾರಿ ಮಾಡದೇ ಇರುವುದಕ್ಕೆ ಕಾರ್ಮಿಕರು ಘೋಷಣೆಗಳ ಮೂಲಕ ಆಕ್ರೋಶ ವ್ಯಕ್ತಪಡಿಸುತ್ತಿದ್ದರು.

ಸರಕಾರ ಒಂದು ಕಡೆ ಪಂಚಾಯತ್ ನೌಕರರಿಗೆ ಕನಿಷ್ಟ ವೇತನ ಜಾರಿ ಮಾಡಿ ಆದೇಶ ಹೊರಡಿಸಿದೆ. ಈ ಕುರಿತು ಆದೇಶ ಜಾರಿಯಾಗಿದ್ದರ ಬಗ್ಗೆ ಕೇಳುವ ಗೋಜಿಗೆ ಹೋಗದೇ ಇರುವುದು ವಿಷಾದನೀಯ. ಕೇವಲ ಆದೇಶ ಮಾಡಿ ಕೈಕಟ್ಟಿ ಕುಳಿತುಕೊಳ್ಳುವುದಕ್ಕಿಂತ ಆದೇಶ ಜಾರಿ ಮಾಡುವುದರ ಬಗ್ಗೆ ಯೋಚಿಸಬೇಕೆಂದು ಸಿಐಟಿಯುವಿನ ಜಿಲ್ಲಾಧ್ಯಕ್ಷರಾದ ವ್ಹಿ.ಪಿ.ಕುಲಕರ್ಣಿಯವರು ಧರಣಿ ನಿರತ ಸ್ಥಳಕ್ಕೆ ಬಂದ ಆರ್.ಡಿ.ಪಿ.ಆರ್ ಇಲಾಖೆಯ ಅಧಿಕಾರಿಗಳಿಗೆ ಪಂಚಾಯತ ನೌಕರರಿಗೆ ವೇತನ ಸಿಗದೆ ಇರುವ ಬಗ್ಗೆ ಮನದಟ್ಟು ಮಾಡಿಕೊಟ್ಟರು.

15-20 ವರ್ಷಗಳಿಂದ ಪಂಚಾಯತಿಗಳಲ್ಲಿ ಕೆಲಸ ನಿರ್ವಹಿಸಿದ ನೌಕರರ ಅನುಮೋದನೆ ನೀಡಲು ಸರ್ಕಾರ ಹಾಗೂ ಜಿಲ್ಲಾ ಪಂಚಾಯತನವರು ಆದೇಶ ಹೊರಡಿಸಿದ್ದರೂ, ನೇಮಕಾತಿ ವಿಧಾನದ ನೆಪ ಮಾಡಿಕೊಂಡು ಸಿಬ್ಬಂದಿಗಳ ಅನುಮೋದನೆ ನೀಡುವ ಕೆಲಸ ನಡೆದಿಲ್ಲ. ಮನವಿ ತೆಗೆದುಕೊಂಡ ಅಧಿಕಾರಿಗಳು ನಮ್ಮ ಬೇಡಿಕೆಗೆ ಸ್ಪಂದಿಸಿ ಈ ಬಗ್ಗೆ ಪ್ರಧಾನ ಕಾರ್ಯದರ್ಶಿಗಳ ಜೊತೆ ಚರ್ಚಿಸಿ ಕ್ರಮ ಕೈಗೊಳ್ಳುತ್ತೇವೆ ಎಂದು ಭರವಸೆ ನೀಡಿದರು.

1975 ರಿಂದ ಪ್ರಾರಂಭವಾದ ಐ.ಸಿ.ಡಿ.ಎಸ್ ಯೋಜನೆಯಲ್ಲಿ ಕೆಲಸ ನಿರ್ವಹಿಸುತ್ತಿರುವ ಅಂಗನವಾಡಿ ನೌಕರರು ಇದುವರೆಗೆ ಗೌರವಧನದಲ್ಲಿ ದಿನಗಳನ್ನು ಕಳೆಯುತ್ತಿದ್ದಾರೆ. ಇವರೆಲ್ಲರೂ ಶಿಕ್ಷಿತರಾಗಿದ್ದರಿಂದ ಮೇಲ್ವಿಚಾರಿಕಿ ಹುದ್ದೆಗೆ ಶೇ.100 ರಷ್ಟು ಮೀಸಲಾತಿ ನೀಡಿ ಇವರ ಜೇಷ್ಠತೆಯನ್ನು ಜಿಲ್ಲಾಮಟ್ಟದಲ್ಲಿ ಪರಿಗಣಿಸಿ ಬಡ್ತಿ ನೀಡುವಂತಾಗಬೇಕು.

ಅಂಗನವಾಡಿ ಕೇಂದ್ರಗಳಿಗೆ ಬರುವ 3 ರಿಂದ 6 ವರ್ಷದ ಮಕ್ಕಳು, 6ನೇ ವರ್ಷಕ್ಕೆ ಮಗು ಪ್ರಾಥಮಿಕ (ಖಾಸಗಿ ಶಾಲೆ ಒಳಗೊಂಡ) ಶಾಲೆಗೆ ಪ್ರವೇಶ ಪಡೆಯುವಾಗ ಅಂಗನವಾಡಿ ಕಾರ್ಯಕರ್ತೆಯಿಂದ ಪ್ರಮಾಣಪತ್ರ ಪಡೆದು ಪ್ರಾಥಮಿಕ ಶಾಲೆಗೆ ಪ್ರವೇಶ ಪಡೆಯುವ ಹಾಗೆ ಆದರೆ ಕಡ್ಡಾಯವಾಗಿ ಮಕ್ಕಳನ್ನು ಅಂಗನವಾಡಿ ಕೇಂದ್ರಕ್ಕೆ ಕಳಿಸುವ ವ್ಯವಸ್ಥೆ ಬರಬಹುದು ಎಂದು ಧರಣಿ ಸ್ಥಳಕ್ಕೆ ಆಗಮಿಸಿದ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಜಂಟಿ ನಿರ್ದೇಶಕರಿಗೆ ವಿವರಿಸಲಾಯಿತು.

ನಿವೃತ್ತಿ ಹೊಂದುವ ಕಾರ್ಯಕರ್ತೆ ಹಾಗೂ ಸಹಾಯಕಿಗೆ ರೂ 50,000 ಮತ್ತು 30,000 ಇಡಗಂಟು ನೀಡಲಾಗುತ್ತಿತ್ತು. ಇತ್ತೀಚಿಗೆ ಇದು ನಿಲ್ಲಿಸಲಾಗಿದೆ. ಕೂಡಲೇ ಇದನ್ನು ಮೊದಲಿನಂತೆ ಮುಂದುವರಿಸ ಬೇಕೆಂದು ವಿವರಿಸಲಾಗಿ ಅಧಿಕಾರಿಗಳು ನಿಮ್ಮ ಬೇಡಿಕೆಗಳು ಸಮಂಜಸವಾಗಿದ್ದು ಮೇಲಾಧಿಕಾರಿಗಳ ಜೊತೆ ಮಾತನಾಡಿ ಪರಿಹಾರ ನೀಡಲಾಗುವದೆಂದು ಭರವಸೆ ನೀಡಿದರು.

ಬಿಸಿ ಅಡುಗೆ ನೌಕರರಿಗೆ ಸಂಬಂದಪಟ್ಟ ಸಾರ್ವಜನಿಕ ಶಿಕ್ಷಣ ಇಲಾಖೆಯ ನಿರ್ದೇಶಕರಿಗೆ ಮನವಿ ಕೊಟ್ಟು 5-6 ಮಕ್ಕಳ ಸಂಖ್ಯೆ ಕಮ್ಮಿ ಆದರೆ ಧಿಡೀರಾಗಿ ಮಹಿಳೆಯರನ್ನು ಕೆಲಸದಿಂದ ತೆಗೆಯುವುದು ಅಮಾನವಿಯ. ದಯವಿಟ್ಟು ಮಕ್ಕಳ ಸಂಖ್ಯೆ ಕಡಿಮೆಯಾದರೆ ಯಾರನ್ನೂ ಕೆಲಸದಿಂದ ತೆಗೆಯಬಾರದೆಂದು ಹಾಗೂ ಈಗಾಗಲೇ ಕೆಲಸದಿಂದ ತೆಗೆದಿರುವ ನೌಕರರನ್ನು ಮಕ್ಕಳ ಸಂಖ್ಯೆ ಹೆಚ್ಚಿರುವ ಶಾಲೆಗೆ ವರ್ಗಾಯಿಸಬೇಕೆಂಬ ಮನವಿ ತೆಗೆದುಕೊಂಡ ನಿರ್ದೇಶಕರು ವೇತನ ಹೆಚ್ಚಳ, ತಮ್ಮ ಮನವಿಯಲ್ಲಿರುವ ಅಂಶಗಳ ಬಗ್ಗೆ ಸರ್ಕಾರದ ಗಮನಕ್ಕೆ ತಂದು ಕ್ರಮ ವಹಿಸಲಾಗುವದೆಂದು ಭರವಸೆ ನೀಡಿದರು.

ನಾವು ಮೊದಲು ಪಂಚಾಯತ ಒಳಗೆ ಕೆಲಸ ಮಾಡತ್ತಿದ್ದಿವಿ, ಈಗ ನಮ್ಮ ಪಂಚಾಯತಿ ಮುನ್ಸಿಪಾಲಿಟಿ ಆಗೆತಿ. ಹಿಂದ ಯಾರದ ಅನುಮೋದನೆ ಆಗೆತಿ ಸರ್ಕಾರ ಅವರಿಗೆ ಕಾಯಂ ಮಾಡೆತಿ. ಅವರ ಜೊತೆ ನಾವು ಕೆಲಸ ಮಾಡಿವಿ, ನಮ್ಮ ಅನುಮೋದನೆ ಆಗಿಲ್ಲ ಅಂತ ನಮಗ ಕಾಯಂ ಮಾಡಿಲ್ಲ ಅಂತ ಮೇಲ್ದರ್ಜೆಗೇರಿದ ಪಟ್ಟಣ ಪಂಚಾಯತ ಸಿಬ್ಬಂದಿಗಳು ಗೋಳು ತೋಡಿ-ಕೊಂಡರು.

ಪ. ಪಂಚಾಯತ್, ಪುರಸಭೆಯಲ್ಲಿ ಪೌರಸೇವಾ ನೌಕರರೆಂದು ಪರಿಗಣಿಸಬೇಕೆಂದು ನಗರಾಭಿವೃದ್ಧಿ ಇಲಾಖೆಯ ಪ್ರಧಾನ ಕಾರ್ಯದರ್ಶಿಯವರಿಗೆ ವಿವರಿಸಲಾಯಿತು. ಈ ಸಮಸ್ಯೆಯನ್ನು ಅರಿತ ಅಧಿಕಾರಿಗಳು ಈಗಾಗಲೇ ಈ ಕುರಿತು ಹೊಸದಾಗಿ ಮೇಲ್ದರ್ಜೆಗೇರಿದ ಪ.ಪಂಚಾಯತ್, ಪುರಸಭೆಗೆ ನೇಮಕಾತಿ, ಕಸ ಗೂಡಿಸುವವರ ನೇಮಕಾತಿ ಬಗ್ಗೆ ಚರ್ಚೆ ನಡೆದಿದ್ದು, ಉಳಿದ ಸಿಬ್ಬಂದಿಗಳ ದಾಖಲೆ ಸಮೇತ ನಮ್ಮನ್ನು ಬೇಟಿಯಾಗಿ ಎಂದು ಅಧಿಕಾರಿಗಳು ತಿಳಿಸಿದಾಗ ಸಿಬ್ಬಂದಿಗಳಿಗೆ ನಮಗೆ ಒಂದು ಹಾದಿ ಸಿಗಬಹುದೆಂದು ತಮ್ಮ ತಮ್ಮಲ್ಲಿಯೇ ಮಾತನಾಡಿಕೊಂಡರು.

ಒಟ್ಟಾಗಿ ಸುವರ್ಣ ಸೌಧ ಮೈದಾನದಲ್ಲಿ ಕೆಂಬಾವುಟಗಳ ಹಾರಾಟ ಸ್ಥಳೀಯ ಅಧಿಕಾರಿಗಳಿಗೆ ಒಂದು ಥರಾ ಸಂಚಲನ ಮೂಡಿಸಿತು. ಸಂಜೆ 5 ಗಂಟೆಗೆ ಕಾರ್ಯಕ್ರಮ ಮುಗಿದಾಗ ಪೋಲೀಸರೇ ಬಸ್ಸುಗಳನ್ನು ತಂದು ನಮ್ಮ ಜನರನ್ನು ಬಸ್ ನಿಲ್ದಾಣಕ್ಕೆ ಬಿಟ್ಟರು.

ಧರಣಿಯ ಪ್ರಾರಂಭದಲ್ಲಿ ನವೆಂಬರ್ 26ರಂದು ನಿಧನರಾದ ಫಿಡಲ್ ಕ್ಯಾಸ್ಟ್ರೋ ರವರಿಗೆ ಶ್ರದ್ಧಾಂಜಲಿ ಸಲ್ಲಿಸಲಾಯಿತು. ಸಿಐಟಿಯು ಸಂಘಟನೆಯ ಮುಖಂಡರು ಮಾತನಾಡಿದರು. ನಂತರದಲ್ಲಿ ಧರಣಿಯು ಪ್ರಾರಂಭಿಸಲಾಯಿತು.

ಈ ಕಾರ್ಯಕ್ರಮದಲ್ಲಿ ಸಿ.ಐ.ಟಿ.ಯುನ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಗೈಬು ಜೈನೆಖಾನ, ಪಂಚಾಯತ್ ನೌಕರರ ಸಂಘದ ಜಿಲ್ಲಾಧ್ಯಕ್ಷರು ಟಿ.ಎ.ಬಬಗೌಡ, ಬಿ.ಎನ್.ಪಾಟೀಲ, ಬಿ.ಕೆ.ಕಟ್ಟಿ, ಎಂ.ಬಿ.ಚೌಗಲಾ, ಸುರೇಶ ವಡ್ಡರ, ಅಂಗನವಾಡಿ ನೌಕರರ ಸಂಘದ ಮುಖಂಡರಾದ ಮಂದಾ ನೇವಗಿ, ಸಿ.ಎಸ್.ಮಗದುಮ್, ಚೆನ್ನಮ್ಮ ಗಡಕರಿ, ಸರಸ್ವತಿ ಮಾಳಶೆಟ್ಟಿ, ಶೈಲಾ ಕೋಳಿ, ಬಿಸಿ ಅಡುಗೆ ನೌಕರರ ಸಂಘದ ಅಧ್ಯಕ್ಷರಾದ ಎಲ್.ಎಸ್.ನಾಯಕ್, ತುಳಸಮ್ಮ ಮಾಳದಕರ, ಶಾಂತಾ ಗೊರವನಕೊಳ್ಳ, ವೆಂಕವ್ವ ಕಾನಟ್ಟಿ ಮತ್ತು ಭಾರತಿ ಜೋಗನ್ನವರ ಭಾಗವಹಿಸಿದ್ದರು.

ವರದಿ: ಗೈಬು ಜೈನೆಖಾನ್

"ವಕೀಲರು ಸಾಮಾಜಿಕ ಸಮಸ್ಯೆಗಳಿಗೂ ಗಮನ ಹರಿಸಬೇಕು"

ವಕೀಲರ ಸಂಘದ ಬೆಂಗಳೂರು ಜಿಲ್ಲಾ ಸಮ್ಮೇಳನ

ಅಖಿಲ ಭಾರತ ವಕೀಲರ ಸಂಘ(ಎ.ಐ.ಎಲ್.ಯು)ದ ಬೆಂಗಳೂರು ಜಿಲ್ಲೆಯ 4ನೇ ಜಿಲ್ಲಾ ಸಮ್ಮೇಳನವು ನವೆಂಬರ್ 27ರಂದು ಸರ್ಕಾರಿ ಕಲಾ ಕಾಲೇಜಿನ ಬಾಪೂಜಿ ಸಭಾಂಗಣದಲ್ಲಿ ನಡೆಯಿತು.ಸಮ್ಮೇಳನವನ್ನು ಉದ್ಘಾಟನೆ ಮಾಡಿದ ಹೈಕೋರ್ಟ್‌ನ ನ್ಯಾಯಮೂರ್ತಿಗಳಾದ ಎಲ್.ನಾರಾಯಣಸ್ವಾಮಿರವರು "ದೇಶದಲ್ಲಿ ಸುಮಾರು 836 ಮಿಲಿಯನ್ ಜನಗಳು ಇಂದು ಬಡತನದಿಂದ ನರಳುತ್ತಿದ್ದಾರೆ. ಸ್ವಾತಂತ್ರ್ಯ ಗಳಿಸಿ 7ದಶಕಗಳು ಕಳೆದರೂ ಬಡತನ ನಿರ್ಮೂಲನೆ ಮಾಡಲು ಸಾಧ್ಯವಾಗಿಲ್ಲ" ಎಂದು ಕಳವಳ ವ್ಯಕ್ತಪಡಿಸಿದರು. ವಕೀಲರು ಕೇವಲ ಹಣ ಸಂಪಾದನೆ ಮಾಡಿ ಹೆಸರು ಮಾಡುವ ಬದಲು ಸಾಮಾಜಿಕ ನ್ಯಾಯಕ್ಕಾಗಿ ದುಡಿಯಬೇಕು, ಆಗ ಮಾತ್ರ ಒಬ್ಬ ವಕೀಲ ಯಶಸ್ಸು ಕಾಣಲು ಸಾಧ್ಯ ಎಂದರು. ಸಾಮಾಜಿಕ ನ್ಯಾಯದ ಜಾರಿಯಿಂದಾಗಿ ಇಡೀ ದೇಶದ ಚಿತ್ರಣವನ್ನೇ ಬದಲಾಯಿಸಬಹುದು ಎಂದು ನ್ಯಾಯಮೂರ್ತಿ ಎಲ್.ನಾರಾಯಣಸ್ವಾಮಿರವರು ಉದ್ಘಾಟನಾ ಮಾತುಗಳನ್ನಾಡಿದರು.

ಎ.ಐ.ಎಲ್.ಯುವಿನ ಗೌರವಾಧ್ಯಕ್ಷರು ಹಾಗೂ ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷರಾದ ಶ್ರೀ ಹೆಚ್.ಕಾಂತರಾಜರವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಮಾತನಾಡಿ'ನಮ್ಮ ವೃತ್ತಿಗೆ ಗೌರವ ಬರಬೇಕೆಂದರೆ ನಾವು ಸಂವಿಧಾನದ ಮೌಲ್ಯಗಳನ್ನು ಉಳಿಸಬೇಕು, ಕೇಂದ್ರ ಸರ್ಕಾರ ಮಾಡಿರುವ ಅನಾಣ್ಯೀಕರಣದಿಂದಾಗಿ ವಿಮಾನದಲ್ಲಿ ಪ್ರಯಾಣಿಸುವವರಿಗೆ ಯಾವುದೇ ರೀತಿಯ ತೊಂದರೆಯಾಗಿಲ್ಲ, ಬದಲಾಗಿ ಹಣ್ಣು ತರಕಾರಿ ಮಾರುತ್ತಿರುವವರಿಗೆ, ಜನಸಾಮಾನ್ಯರಿಗೆ ಮತ್ತು ಮಧ್ಯಮವರ್ಗದವರಿಗೆ ಸಾಕಷ್ಟು ತೊಂದರೆ-ಯಾಗುತ್ತಿದೆ ಎಂದು ವಿಷಾದ ವ್ಯಕ್ತಪಡಿಸಿದರು.

ಸ್ವಾತಂತ್ರ್ಯ ಗಳಿಸಿ ದಶಕಗಳಾದರೂ ಸಂವಿಧಾನದ ಆಶಯಗಳು ಈಡೇರದೇ ಇರುವುದು ದುರಂತದ ವಿಷಯ. ಪ್ರಸ್ತುತ ಸಮಾಜದಲ್ಲಿ ಅಸಮಾನತೆ ಹೆಚ್ಚುತ್ತಿದೆ ಇದರ ವಿರುದ್ಧ ವಕೀಲರು ಹೆಚ್ಚು ಕೆಲಸ ಮಾಡಬೇಕಿದೆ ಎಂದರು. ಈ ದಿಸೆಯಲ್ಲಿ ಎ.ಐ.ಎಲ್.ಯು ಸಮಾಜದಲ್ಲಿ ಆಗುತ್ತಿರುವ ಬದಲಾವಣೆಗೆ ಬೆಳಕು ಚೆಲ್ಲುವ ಕೆಲಸ ಹಿಂದಿನಿಂದಲೂ ಮಾಡುತ್ತಿದೆ ಎಂದು ಹೆಚ್.ಕಾಂತರಾಜ ಅವರು ಹೇಳಿದರು.



ಅಖಿಲ ಭಾರತ ವಕೀಲರ ಸಂಘದ ರಾಜ್ಯಾಧ್ಯಕ್ಷರಾದ ಎಸ್.ಶಂಕರಪ್ಪರವರು ಮಾತನಾಡಿ, 1982ರಲ್ಲಿ ಎ.ಐ.ಎಲ್.ಯು ಪ್ರಾರಂಭವಾಗಿ ಇಂದು 18 ಜಿಲ್ಲೆಗಳಲ್ಲಿ ವಿಸ್ತಾರಗೊಂಡಿದೆ. ನಾನು 2004ರಲ್ಲಿ ಕ್ಯೂಬಾಗೆ ಹೋಗಿದ್ದೆ. ಫಿಡೆಲ್ ಕ್ಯಾಸ್ಟ್ರೋ ವಕೀಲನಾಗಿ, ಶ್ರೀಮಂತ ಕುಟುಂಬದಲ್ಲಿ ಹುಟ್ಟಿ ಬಡವರ ಪರವಾಗಿ 1956ರಲ್ಲಿ ವಕೀಲ ವೃತ್ತಿ ಬಿಟ್ಟು ಶೋಷಿತರ ಪರ ಧ್ವನಿ ಎತ್ತಲು ಮುಂದಾದರು, ಹೀಗಾಗಿ ವಕೀಲರು ಶೋಷಿತರ ಪರವಾಗಿ ಧ್ವನಿ ಎತ್ತಬೇಕೆಂದರು.

ಬೆಂಗಳೂರು ವಕೀಲರ ಸಂಘದ ಹೆಚ್.ಸಿ.ಶಿವರಾಮು ಮಾತನಾಡಿ ಬದಲಾವಣೆ ಆಗುವಾಗ ಸಾಕಷ್ಟು ಸಮಸ್ಯೆಗಳು ಆಗುತ್ತವೆ. ಅದನ್ನು ಸಹಿಸಿಕೊಳ್ಳಬೇಕೆಂದು ಕೇಂದ್ರ ಸರ್ಕಾರ ಜನರ ಕಣ್ಣೊರೆಸುವ ಮಾತುಗಳನ್ನಾಡುತ್ತಿದೆ ಇದು ಸರಿಯಾದ ಕ್ರಮ ಅಲ್ಲ ಎಂದು ಹೇಳಿದರು. ಮುಂದಿನ ದಿನಗಳಲ್ಲಿ ಎ.ಐ.ಎಲ್.ಯು ಜೊತೆಗೂಡಿ ಕೆಲಸ ಮಾಡೋಣ ಎಂದು ಹೇಳಿ ಸಮ್ಮೇಳನಕ್ಕೆ ಶುಭಕೋರಿದರು.

ಉದ್ಘಾಟನಾ ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿದ್ದ ಟಿ.ನಾರಾಯಣಸ್ವಾಮಿಯವರು ನ್ಯಾಯಾಂಗದಲ್ಲಿ ಭ್ರಷ್ಟಾಚಾರ ತಾಂಡವಾಡುತ್ತಿದೆ. ನ್ಯಾಯಾಲಯಗಳಲ್ಲಿ ನ್ಯಾಯಾಧೀಶರ ಕೊರತೆ ಉಲ್ಬಣಗೊಳ್ಳುತ್ತಿದೆ. ನ್ಯಾಯಾಂಗ ವ್ಯವಸ್ಥೆಯ ಮೇಲೆ ರಾಜಕೀಯ ಹಿಡಿತ ಸಾಧಿಸಲು ಹೊರಟಿರುವುದು ಪ್ರಜಾಪ್ರಭುತ್ವ ವ್ಯವಸ್ಥೆಯನ್ನೇ ಬುಡಮೇಲು ಮಾಡುವ

ಸಂವಿಧಾನ ಉಳಿಸಿ, ದಲಿತರನ್ನು ರಕ್ಷಿಸಿ' – ಪ್ರತಿಜ್ಞಾ ಸ್ವೀಕಾರ





ಹಾಸನ ನಗರದ 'ಶ್ರಮ'ದಲ್ಲಿ ದಲಿತ ಹಕ್ಕುಗಳ ಸಮಿತಿ (ಡಿಎಚ್‌ಎಸ್) ನೇತೃತ್ವದಲ್ಲಿ ಡಿಸೆಂಬರ್ 06 ರಂದು ಡಾ.ಬಿ.ಆರ್.ಅಂಬೇಡ್ಕರ್‌ರವರ 60ನೇ ಪರಿನಿರ್ವಾಣ ದಿನದ ಅಂಗವಾಗಿ ನಡೆದ "ಸಂವಿಧಾನ ಉಳಿಸಿ, ದಲಿತರನ್ನು ರಕ್ಷಿಸಿ ಮತ್ತು ಭಾರತ ಉಳಿಸಿ" ಪ್ರತಿಜ್ಞಾ ಸ್ವೀಕಾರ ಸಮಾರಂಭ ಹಮ್ಮಿಕೊಳ್ಳಲಾಗಿತ್ತು. ಇದನ್ನು ಉದ್ದೇಶಿಸಿ ಮಾತನಾಡಿದ ಪ್ರಾಂಶುಪಾಲರಾದ ಪಿ.ಭಾರತಿ ದೇವಿಯವರುಈ ದೇಶದಲ್ಲಿ ಸಂವಿಧಾನ ಜಾರಿಗೆ ಬಂದು 66 ವರ್ಷಗಳಾದರೂ ತಮ್ಮ ಕನಿಷ್ಠ ಅಗತ್ಯಗಳಿಗಾಗಿ ಇನ್ನೂ ಜನಸಾಮಾನ್ಯರು ಹೋರಾಟ ಮಾಡಬೇಕಾದ ಸ್ಥಿತಿ ಉಂಟಾಗಿದೆ ಎಂದು ಹೇಳಿದರು.

'ಸಂವಿಧಾನದ ಪ್ರಜಾಸತ್ತಾತ್ಮಕ ಹಕ್ಕುಗಳನ್ನು ಕೇಳುವುದೇ ಅಪರಾಧವೆಂಬಂತೆ ಅಪಪ್ರಚಾರಗಳನ್ನು ನಡೆಸಲಾಗುತ್ತಿದೆ ಅಸಹಿಷ್ಣುತೆಯನ್ನು ಸೃಷ್ಟಿಯಾಗುತಿತದೆ ಮತ್ತು ಒಂದು ರೀತಿಯ ಅಘೋಷಿತ ತುರ್ತು ಪರಿಸ್ಥಿತಿ ನಿರ್ಮಾಣವಾಗಿದೆ. ಎಲ್ಲರಲ್ಲೂ ಭಯ ಮತ್ತು ಆತಂಕದ ಸನ್ನಿವೇಶ ಸೃಷ್ಟಿಯಾಗಿದೆ. ಕೇಂದ್ರ ಸರ್ಕಾರದ ನೀತಿಗಳನ್ನು ಪ್ರಶ್ನೆ ಮಾಡುವುದೇ ದೇಶದ್ರೋಹವೆಂಬಂತೆ ಅಭಿಪ್ರಾಯವನ್ನು ಮೂಡಿಸುತ್ತಿದ್ದಾರೆ ಎಂದು ಮುಂದುವರೆದು ಅವರು ಹೇಳಿದರು.

ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಸಿಐಟಿಯು ಜಿಲ್ಲಾಧ್ಯಕ್ಷರಾದ ಧರ್ಮೇಶ್‌ರವರು ನಮ್ಮೆಲ್ಲರ ಆದರ್ಶವಾಗಿರುವ ಭಾರತದ ಸಂವಿಧಾನ ಇಂದು ಅಪಾಯಕ್ಕೆ ಸಿಲುಕಿದ್ದು, ದೇಶಕ್ಕೆ ಸಮಾನತೆ, ಸಮಾಜವಾದದ ಹಾದಿ ತೋರಿಸಿಕೊಟ್ಟಿರುವ ನಮ್ಮೆಲ್ಲರ ಸಂವಿಧಾನವನ್ನು ಉಳಿಸಿಕೊಳ್ಳುವ ಮತ್ತು ಅಂಬೇಡ್ಕರವರ ಕನಸುಗಳನ್ನು ಸಾಕಾರಗೊಳಿಸುವ ಪ್ರತಿಜ್ಞೆಯೊಂದಿಗೆ ಎಲ್ಲರೂ ಒಟ್ಟಿಗೆ ಸೇರಿ ಚಳುವಳಿಗಳನ್ನು ಮುನ್ನಡೆಸಬೇಕಿದೆ ಎಂದರು.

ದಲಿತ ಹಕ್ಕುಗಳ ಸಮಿತಿಯ ಜಿಲ್ಲಾ ಸಂಚಾಲಕರಾದ ಎಂ.ಜಿ.ಪೃಥ್ವಿ ಕಾರ್ಯಕ್ರಮವನ್ನು ನಿರ್ವಹಿಸಿದರು. ಕಾರ್ಯಕ್ರಮದ ಮೊದಲಿಗೆ ಅಂಬೇಡ್ಕರ್‌ರವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಲಾಯಿತು. ಕಾರ್ಯಕ್ರಮದಲ್ಲಿ ಡಿಎಚ್‌ಎಸ್‌ನ ಮುಖಂಡರಾದ ಮಂಜುನಾಥ್ ಕೆ.ಎಸ್., ಸಿಗರನಹಳ್ಳಿ ರಾಜು, ಶಶಿಕುಮಾರ್, ಎಸ್‌ಎಫ್‌ಐನ ಆಶಾ, ಕೆಪಿಆರ್‌ಎಸ್‌ನ ಹೆಚ್.ಆರ್.ನವೀನಕುಮಾರ್, ವಸಂತ್‌ಕುಮಾರ್ ಮತ್ತಿತರರು ಭಾಗವಹಿಸಿದ್ದರು.

ಅಂಬೇಡ್ಕರ್ ಕನಸುಗಳು ಕನಸಾಗಿಯೇ ಇವೆ

ಅಂಬೇಡ್ಕರ್‌ರವರ ಪರಿನಿರ್ವಾಣ ದಿನದ ಅಂಗವಾಗಿ ಬಳ್ಳಾರಿ ಜಿಲ್ಲೆಯ ಹೊಸಪೇಟೆ ನಗರದಲ್ಲಿ ದಲಿತ ಹಕ್ಕುಗಳ ಸಮಿತಿ, ಡಿವೈಎಫ್‌ಐ, ಸಿಐಟಿಯು, ಸಮುದಾಯ ಸಂಘಟನೆಗಳು ಜಂಟಿಯಾಗಿ ವಿಚಾರ ಸಂಕಿರಣವನ್ನು ಕಾರ್ಯಕ್ರಮವನ್ನು ಹಮ್ಮಿಕೊಂಡಿತ್ತು. ವಿಚಾರ ಸಂಕಿರಣವನ್ನು ಉದ್ಘಾಟಿಸಿ ಮಾತನಾಡಿದ ಹಂಪಿ ಕನ್ನಡ ವಿಶ್ವವಿದ್ಯಾಲಯದ ಪಿ.ಡಿ.ಎಫ್. ಸಂಶೋಧಕರಾದ ಡಾ.ಮಲ್ಲಿಕಾರ್ಜುನ್ ರವರು ಸ್ವಾತಂತ್ರ್ಯ ಬಂದು ದಶದಗಳು ಕಳೆದರೂ ಸಹ ಸಂವಿಧಾನದ ಆಶಯಗಳು ಏನಾಗಿವೆ ಎಂದು ನಾವು ಇಂದು ವಿಮರ್ಶೆ ಮಾಡಿಕೊಳ್ಳಬೇಕಾಗಿದೆ ಅಲ್ಲದೇ ಅಂಬೇಡ್ಕರ್‌ರವರ ಕನಸುಗಳು ಇಂದಿಗೂ ಸಹ ಕನಸುಗಳಾಗಿಯೇ ಇವೆ. ಅದರಲ್ಲಿಯೂ ಸ್ವಾತಂತ್ರ್ಯದ ನಂತರದ ದಲಿತರ ಪರಿಸ್ಥಿತಿಗಳನ್ನು ನೋಡಿದರೆ ಯಾವುದೇ ರೀತಿಯಾದ ಬದಲಾವಣೆ ಕಂಡಿಲ್ಲವೆಂಬುದನ್ನು ನಾವು ಅರಿತ್ತಿದ್ದೇವೆ. ಇಂದು ಸ್ವಾತಂತ್ರ್ಯವು ಶ್ರೀಮಂತರ ಪರವಾಗಿ ಮಾತ್ರ ಉಳಿದಿದೆ ಎಂದು ಡಾ.ಮಲ್ಲಿಕಾರ್ಜುನ್‌ರವರು ಕ್ರೋಧ ವ್ಯಕ್ತಪಡಿಸಿದರು.

ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ಕರ್ನಾಟಕ ಪ್ರಾಂತ ರೈತ ಸಂಘದ ಪ್ರಧಾನ ಕಾರ್ಯದರ್ಶಿ ಯು.ಬಸವರಾಜ್‌ರವರು 'ಇಂದು ಅಂಬೇಡ್ಕರ್ ರವರು ಪ್ರತಿಪಾದಿಸಿದ ಶಿಕ್ಷಣ, ಸಂಘಟನೆ, ಹೋರಾಟದ ಸೂತ್ರಗಳನ್ನು ನಾವುಗಳು ಅಳವಡಿಸಿಕೊಂಡಾಗ ಮಾತ್ರ ನಮ್ಮ ಹಕ್ಕುಗಳನ್ನು ಪಡೆಯಲು ಸಾಧ್ಯ. ದಲಿತರ ಉದ್ಧಾರವಾಗದೆ ದೇಶ ಉದ್ಧಾರವಾಗದು ಎಂಬುವುದು ಸತ್ಯ, ಆದರೆ ಇಂದು ನಮ್ಮನಾಳುವ ಸರ್ಕಾರಗಳ ದಲಿತರಿಗಾಗಿ ಮಾಡುತ್ತಿರುವ ಕಾರ್ಯಕ್ರಮಗಳು, ಯೋಜನೆಗಳು ಉಪಯೋಗವಾಗುವುದಿಲ್ಲ. ಎಲ್ಲಿಯವರೆಗೆ ದಲಿತರಿಗೆ ಭೂಮಿಯ ಹಕ್ಕನ್ನು ನೀಡುವುದಿಲ್ಲವೋ ಅಲ್ಲಿಯವರೆಗೂ ದಲಿತರ ಸ್ಥಿತಿಗತಿ ಬದಲಾಗುವುದಿಲ್ಲ, ಸ್ವಾತಂತ್ರ ನಂತರದಲ್ಲಿ ಬಂದ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ದಲಿತರನ್ನು ವೋಟ್ ಬ್ಯಾಂಕ್‌ಗಳಾಗಿ ಮಾತ್ರವೇ ಉಪಯೋಗಿಸಿವೆ. ಇದಕ್ಕೆ ಭಿನ್ನವಾಗಿ 1957ರಲ್ಲಿ ಬಂದ ಕೇರಳದ ಕಮ್ಯೂನಿಸ್ಟ್ ಸರ್ಕಾರ ಮೊಟ್ಟಮೊದಲ ಬಾರಿಗೆ ಭೂರಹಿತರಿಗೆ ಭೂಮಿಯನ್ನು ಹಂಚುವ ಮೂಲಕ ನಿಜ ಅಭಿವೃದ್ಧಿಗೆಯನ್ನು ಮಾಡಿದೆ ಎಂದರು.

ವಿಚಾರ ಸಂಕಿರಣದ ವಿಷಯವಾದ 'ಸಂವಿಧಾನದ ಆಶಯಗಳು–ಪ್ರಸ್ತುತ ದಲಿತರ ಸ್ಥಿತಿ–ಗತಿಗಳು' ಎಂಬ ವಿಷಯದ ಮಂಡನೆಯನ್ನು ಕನ್ನಡ ವಿಶ್ವವಿದ್ಯಾಲಯದ ಸಂಶೋಧಕರಾದ ದೊಡ್ಡ ಹನುಮಂತರವರು ಮಂಡಿಸುತ್ತಾ ಇಂದು ನಮ್ಮ ಪ್ರಜಾಪ್ರಭುತ್ವದ ಸ್ವರೂಪ ಖಾಸಗೀಕರಣದ ಸ್ವರೂಪವಾಗಿದೆ, ಹೀಗಾಗಿ, ನಮ್ಮ ದಲಿತರ ಪರಿಸ್ಥಿತಿಯನ್ನು ನಾವುಗಳು ಆರ್ಥಿಕ, ಸಾಮಾಜಿಕ ಪರಿಸ್ಥಿತಿಗಳ ಮೇಲೆ ಗುರುತಿಸಬೇಕು, ಕೇವಲ ಮೀಸಲಾತಿಯಿಂದ ದಲಿತರ ಅಭಿವೃದ್ಧಿ ಸಾಧ್ಯವಾಗುವುದಿಲ್ಲ ಎಂಬ ಅಭಿಪ್ರಾಯವನ್ನು ಮಂಡಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಎಂ.ಜಂಬಯ್ಯ ನಾಯಕ ವಹಿಸಿದರು, ವೇದಿಕೆ ಮೇಲೆ ಡಿವೈಎಫ್‌ಐನ ಬಿಸಾಟಿ ಮಹೇಶ್, ವಿ.ಸ್ವಾಮಿ, ನಾಗರಾಜ್ ಪತ್ತಾರ್, ಬಿಸಾಟಿ ತಾಯಪ್ಪ ನಾಯಕ, ಬಿಜಿವಿಎಸ್‌ನ ಸೌಭಾಗ್ಯಲಕ್ಷ್ಮೀ, ಡಿಹೆಚ್‌ಎಸ್‌ನ ತೋರಣಗಲ್ಲಿನ ಮುಖಂಡರಾದ ಲೋಕೇಶ್ ಇದ್ದರು.

ನಂತರ ಸಾಂಸ್ಕೃತಿಕ ಸಮುದಾಯ ಸಂಘಟನೆಯಿಂದ 'ಸಾಂಸ್ಕೃತಿಕ ಸಂಜೆ' ಕಾರ್ಯಕ್ರಮವನ್ನು ನಾಗರಾಜ್ ಪತ್ತಾರ್, ಶ್ರೀಧರ್ ಮರೋಳ್ ನಡೆಸಿಕೊಟ್ಟರು. ಪ್ರಸ್ತಾವಿಕತೆಯನ್ನು ಕಲ್ಯಾಣಯ್ಯ ನೆರವೇರಿಸಿದರು. ಜೆ.ಶಿವಕುಮಾರ್ ಸ್ವಾಗತಿಸಿದರು, ಕಾರ್ಯಕ್ರಮದ ನಿರೂಪಣೆಯನ್ನು ಕೆ.ರಮೇಶ್ ನಡೆಸಿಕೊಟ್ಟರು.

ಸಂವಿಧಾನವೇ ಶ್ರೇಷ್ಠ ಗ್ರಂಥ

ವಿಜಯಪುರದಲ್ಲಿ ಡಾ. ಬಿ.ಆರ್. ಅಂಬೇಡ್ಕರ್ ವೃತ್ತದಲ್ಲಿ ಸಂವಿಧಾನ ಉಳಿಸಿ, ದಲಿತರನ್ನು ರಕ್ಷಿಸಿ, ಭಾರತ ಉಳಿಸಿ, ಕೋಮುವಾದ, ಜಾತಿವಾದ ತೊಲಗಲಿ ಎಂದು ಪ್ರತಿಜ್ಞೆ ಮಾಡುವ ಮೂಲಕ ಪರಿನಿರ್ವಾಣ ದಿನವನ್ನು ಆಚರಿಸಲಾಯಿತು.

ದಲಿತ ಸಂಘರ್ಷ ಸಮಿತಿ ಜಿಲ್ಲಾ ಮುಖಂಡರಾದ ಸುರೇಶ ಮಣೂರ ಮಾತನಾಡಿ 'ಕ್ರಿಶ್ಚಿಯನ್‌ರಿಗೆ ಬೈಬಲ್, ಮುಸ್ಲಿಂರಿಗೆ ಖುರಾನ್, ಹಿಂದುಗಳಿಗೆ ಭಗವದ್ಗೀತೆ ಹೇಗಿದಿಯೋ ಹಾಗಿಯೇ ನಮ್ಮ ದೇಶಕ್ಕೆ ಸಂವಿಧಾನವೇ ಶ್ರೇಷ್ಠ ಗ್ರಂಥ. ಕೋಮುವಾದ ಜಾತಿವಾದ ತೊಲಗಿಸಿ, ಅಂಬೇಡ್ಕರವರು ಸಂವಿಧಾನ ರಚಿಸಿ ಜಗತ್ತಿಗೆ ಮಾದರಿಯಾಗಿದ್ದಾರೆ. ಇವರ ಆದರ್ಶವನ್ನು ನಮ್ಮಲ್ಲಿ ಅಳವಡಿಸಿಕೊಂಡು ಹೋಗಬೇಕೆಂದು' ಹೇಳಿದರು.

ದಲಿತ ಹಕ್ಕುಗಳ ಸಮಿತಿ ಜಿಲ್ಲಾ ಸಂಚಾಲಕ ಎಸ್.ಎಸ್.ನಾಲ್ಕಮಾನ ಮಾತನಾಡಿ 'ಅಂಬೇಡ್ಕರ ಸಂವಿಧಾನವನ್ನು ಬರೆದರು ಸಹ ದಲಿತರ ಮೇಲೆ ಅವ್ಯಾಹಾತ ದಾಳಿ ನಡೆಯುತ್ತಲೆ ಇದೆ, ಇವರ ಮೇಲೆ ಕಾನೂನು ಕ್ರಮ ತಗೆದುಕೊಳ್ಳಲಿಕ್ಕೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ವಿಫಲವಾಗಿವೆ. ಈ ಶೋಷಣೆ ವಿರುದ್ಧ ಒಗ್ಗಟ್ಟಾಗಿ ಹೋರಾಟ ಮಾಡಬೇಕೆಂದು' ಹೇಳಿದರು.

ರೈತ ಮುಖಂಡರಾದ ಭೀಮಸಿ ಕಲಾದಗಿ ಮಾತನಾಡಿ 'ಇನ್ನು ಗ್ರಾಮಂತರ ಪ್ರದೇಶದಲ್ಲಿ ಕುಡಿಯುವ ನೀರು, ಚಹದಂಗಡಿಯಲ್ಲಿ 2 ಕಪಾಬಸಿ, ದಲಿತರಿಗೆ ದೇವಾಲಯ ಪ್ರವೇಶ, ದಲಿತರಿಗೆ ಭೂಮಿ ನಿವೇಶನದ ಜಾಗವನ್ನು ಅಕ್ರಮ ಸಕ್ರಮಗೊಳಿಸದೇ ದಲಿತರಿಗೆ ಅನ್ಯಾಯ ಮಾಡುತ್ತಿದ್ದಾರೆ. ಇದರ ವಿರುದ್ಧ ಸಂಘಟನೆ ಮಾಡಿ ಹೋರಾಟ' ಮಾಡಬೇಕೆಂದರು.



ಜನವಾದಿ ಮಹಿಳಾ ಸಂಘದ ರಾಜ್ಯದ ಉಪಾಧ್ಯಕ್ಷೆ ಸುರೇಖಾ ರಜಪೂತ, ಸಿಪಿಐ ಪ್ರಕಾಶ ಹಿಟ್ನಳ್ಳಿ ಹಾಗೂ ಸಿಐಟಿಯು ಜಿಲ್ಲಾ ಪ್ರಧಾನ ಕಾರ್ಯದರ್ಶಿ ಲಕ್ಷ್ಮಣ ಹಂದ್ರಾಳ, ಯಲಗೂರದಪ್ಪ ಸಂ. ಚಲವಾದಿ, ಯಶವಂತ ರಣದೇವಿ ಮಾತನಾಡಿದರು.

ಈ ಸಂದರ್ಭದಲ್ಲಿ ಜಿ.ಎಸ್.ಇಂಗಳೆ, ಡಿವೈಎಫ್‌ಐ ಸಂಚಾಲಕ ಬಸಲಿಂಗ ಕಪಾಲಿ, ಸುರೇಶ ಬರಗಾಲ, ಚಿದಾನಂದ ಬೆಳ್ಳೆನವರ, ರಾಜು ಜಾಧವ, ರಂಗಪ್ಪ ದಳವಾಯಿ, ರಫೀಕ ವಾಲಿಕಾರ, ಜುಬೇದಾ ಹಣಗಿ, ಈರಾಬಾಯಿ ಹಜೇರಿ, ಕುಸ್ಮಾ ಹಜೇರಿ, ಶಕೀಲಾ ಜಮಾದಾರ, ರಾಜ್ಮಾ ನಧಾಫ್, ಶಿವರಾಜ ಅದಗಲ್ ಹಾಗೂ ನೂರಾರು ಜನ ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದರು.

ಕೋಲಾರದಲ್ಲಿ ಅಂಬೇಡ್ಕರ್‌ರವರ ಕಂಚಿನ ಪ್ರತಿಮೆಗೆ ಮಾಲಾರ್ಪಣೆ ಮಾಡಿದ ನಂತರದಲ್ಲಿ ಪ್ರತಿಜ್ಞಾ ವಿಧಿ ಸ್ವೀಕರಿಸುವ ಮೂಲಕ ಬಾಬಾಸಾಹೇಬ್‌ರವರ ಪರಿನಿರ್ವಾಣ ದಿನವನ್ನು ಆಚರಿಸಲಾಯಿತು.

ಚಿಕ್ಕಬಳ್ಳಾಪುರ ಜಿಲ್ಲೆಯ ಗುಡಿಬಂಡೆ, ಗೌರಿಬಿದನೂರು, ಬಾಗೇಪಲ್ಲಿ, ಕೋಲಾರ ಮತ್ತು ಕೆಜಿಎಫ್, ಬೆಂಗಳೂರಿನ ಕೃಷ್ಣನಂದನಗರ, ಬಾಣಸವಾಡಿ, ಮಂಡ್ಯ, ಬಳ್ಳಾರಿಯ ಹಗರಿಬೊಮ್ಮನಹಳ್ಳಿ, ಕೊಪ್ಪಳದ ಗಂಗಾವತಿ, ಕಲಬುರಗಿ, ಆಳಂದ ಇತ್ಯಾದಿ ಹಲವು ಕಡೆಗಳಲ್ಲಿ ವಿವಿಧ ಸಂಘಟನೆಗಳು ಪ್ರತಿಜ್ಞಾ ವಿಧಿ ಸ್ವೀಕರಿಸುವ ಮೂಲಕ ಅಂಬೇಡ್ಕರ್‌ರವರು ಪರಿನಿರ್ವಾಣ ದಿನವನ್ನು ಆಚರಿಸಲಾಯಿತು.

ಎಸ್‌ಎಫ್‌ಐ ಸಂಘಟನೆಯು ಮೈಸೂರು ವಿಶ್ವವಿದ್ಯಾಲಯ ಮತ್ತು ಕೊಪ್ಪಳ, ರಾಯಚೂರು, ಹಾವೇರಿ, ಗದಗ ಜಿಲ್ಲೆಯ ಗಜೇಂದ್ರಗಢದಲ್ಲಿ ಸಭೆಗಳನ್ನು ಹಮ್ಮಿಕೊಂಡಿತ್ತು.







ಕ್ರಮವಾಗಿದೆ ಎಂದರು. ಬೆಂಗಳೂರಿನಲ್ಲಿ ಸುಮಾರು 18,000 ವಕೀಲರಿದ್ದಾರೆ. ಇವರನ್ನು ಸಂಘಟಿತರನ್ನಾಗಿ ಮಾಡಲು ನಾವೆಲ್ಲರೂ ತಲುಪಬೇಕಿದೆ ಎಂದರು.

ಎ.ಐ.ಎಲ್.ಯು ಕೇವಲ ವಕೀಲರ ಸಮಸ್ಯೆಗಳನ್ನಷ್ಟೇ ತೆಗೆದುಕೊಳ್ಳದೇ, ಸಮಾಜದಲ್ಲಿ ಎದ್ದುಬರುವ ಸಾಮಾಜಿಕ, ಶೈಕ್ಷಣಿಕ, ಆರ್ಥಿಕ, ಸಾಂಸ್ಕೃತಿಕ ಹಾಗೂ ರಾಜಕೀಯ ಪ್ರಶ್ನೆಗಳಿಗೂ ಪರಿಹಾರವನ್ನು ಸೂಚಿಸುವ ಕೆಲಸ ಮಾಡುತ್ತಿದೆ ಎಂದರು.

ಸಮ್ಮೇಳನದ ಕರಡು ವರದಿಯನ್ನು ಪ್ರಧಾನ ಕಾರ್ಯದರ್ಶಿ ಟಿ.ಎಂ.ಚೌಡರೆಡ್ಡಿರವರು ಮಂಡಿಸಿದರು. ವರದಿಯ ಮೇಲೆ 22ಜನ ಪ್ರತಿನಿಧಿಗಳು ಚರ್ಚಿಸಿದರು. ನಂತರ ವರದಿಯನ್ನು ಅಂಗೀಕರಿಸಲಾಯಿತು. 14 ಜನರ ಪದಾಧಿಕಾರಿಗಳು ಹಾಗೂ 22 ಜನರ ಸದಸ್ಯರುಗಳನ್ನೊಳಗೊಂಡ ಒಟ್ಟು 36ಜನರ ನೂತನ ಸಮಿತಿ ಅವಿರೋಧವಾಗಿ ಆಯ್ಕೆಯಾಯಿತು.

ನೂತನ ಜಿಲ್ಲಾ ಸಮಿತಿಯ ಗೌರವಾಧ್ಯಕ್ಷರಾಗಿ ಹೆಚ್. ಕಾಂತರಾಜು, ಅಧ್ಯಕ್ಷರಾಗಿ ಹರೀಂದ್ರ, ಪ್ರಧಾನ ಕಾರ್ಯದರ್ಶಿಯಾಗಿ ಟಿ.ಎನ್ ಶಿವಾರೆಡ್ಡಿ, ಖಜಾಂಚಿಯಾಗಿ ವೆಂಕಟರಮಣಬಾಬು ಆಯ್ಕೆಯಾದರು.

ವರದಿ: ಚಿಕ್ಕರಾಜು.ಎಸ್

ಜನವಾದಿ 35-11 ನೇ ರಾಷ್ಟ್ರೀಯ ಸಮ್ಮೇಳನದ ಮುನ್ನೋಟ



ಪ್ರಸಕ್ತ

ಕೆ.ಎಸ್. ವಿಮಲಾ

ಜನವಾದಿಗೀಗ 35. ಸ್ವಾತಂತ್ರದ ಗರ್ಭದಲ್ಲಿಯೇ ಸಮಾನತೆಯ ಆಶಯಗಳನ್ನು ಹೊತ್ತು ಶ್ರಮಿಸಿದ ಹಲವು ಹೆಂಗಳೆಯರ ಕನಸಿನ ಕೂಸು ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆಯಾಗಿ ರೂಪು ತಳೆದು ಮೂರೂವರೆ ದಶಕಗಳೇ ಕಳೆದವು. ಕಟ್ಟಿದ ಕನಸುಗಳನ್ನು ನನಸು ಮಾಡುವ ದಾರಿ ಏನೂ ಸುಗಮದ್ದಿರಲಿಲ್ಲ. 'ದೇಶಕ್ಕೆ ಬರುವ ರಾಜಕೀಯ ಸ್ವಾತಂತ್ರ ಸಾಮಾಜಿಕ ಆರ್ಥಿಕ ಬದಲಾವಣೆಯನ್ನು ತರದ ಹೊರತೂ ಪೂರ್ಣವಾಗುವುದಿಲ್ಲ'ಎಂಬ ಡಾ.ಬಿ.ಆರ್. ಅಂಬೇಡ್ಕರ್ ರವರ ನುಡಿ ಸತ್ಯವಾಗಿರುವ ಕಾಲಘಟ್ಟದಲ್ಲಿ ನಾವು ನಮ್ಮ 35 ವರ್ಷಗಳ ಅನುಭವಗಳ ಜೊತೆ ತುಲನೆ ಮಾಡಿಕೊಳ್ಳುವ ಕಾಲವಿದು. ಕಾಲಗರ್ಭದಲ್ಲಿ ಹುಗಿದು ಹೋದ 75 ರ ತು ರ್ತು ಪರಿಸ್ಥಿತಿಯ ನೆನಪು ಆ ದಿನಗಳನ್ನು ನೋಡಿದವರ ಎದೆಯಿಂದ ಮಾಸುವುದೇ ಇಲ್ಲ. ಈಗಂತೂ ಅದನ್ನೂ ಮೀರಿಸುವ ಅಘೋಷಿತ ತುರ್ತು ಪರಿಸ್ಥಿತಿ ಮರೆಯಲು ಅವಕಾಶವೂ ನೀಡುವುದಿಲ್ಲ. 80 ರ ದಶಕ ತುರ್ತುಪರಿಸ್ಥಿತಿಯ ನಂತರದ ಬಿಸಿ ಬುಗ್ಗೆಯ ಕಾಲ. ದಾಸ್ಯ ಶ್ರಂಖಲೆಯನ್ನು ಕಿತ್ತೆಸೆದ ದೇಶದಲ್ಲಿ ನಾವೇ ಆಯ್ಕೆ ಮಾಡಿದ ಸರ್ಕಾರ ನಮ್ಮ ಅಭಿವ್ಯಕ್ತಿಯನ್ನೇ ಕಿತ್ತುಕೊಳ್ಳುವುದರ ವಿರುದ್ಧ ಸೆಣಸಿದ ಮನಸ್ಸುಗಳಿಗೆ ಪ್ರಜಾಪ್ರಭುತ್ವ ಹಕ್ಕುಗಳನ್ನು ಉಳಿಸಿಕೊಳ್ಳುವ ಬಗ್ಗೆ ತೀವ್ರ ಭಾವನೆ ಇದ್ದ ಕಾಲದಲ್ಲಿ ಹುಟ್ಟಿದ ಜನವಾದಿ ದೇಶದ ಮುಂಚೂಣಿ ಮಹಿಳಾ ಸಂಗಟನೆಯೆಂದರೆ ಅತಿಶಯೋಕ್ತಿಯಲ್ಲ.

ಅಲ್ಲಿಂದ ಇಲ್ಲಿಗೆ ಹರಿದು ಬಂದ ಹೋರಾಟದ ಗಾಥೆ, ವಿವಿಧ ರಾಜ್ಯಗಳಲ್ಲಿ ವಿಪರೀತ ಪರಿಸ್ಥಿತಿಗಳ ಮಧ್ಯೆಯೇ ಚಳುವಳಿ ಕಟ್ಟಿದ ಪರಿ.ಎದುರಿಸಿದ ಸವಾಲುಗಳು, ಮನಸಿನೊಳಗಿನ ಭಾವನೆಗಳ ಕಟ್ಟು ಬಿಚ್ಚಿದರೆ, ನೆನಪುಗಳಿಗೊಂದು ಚಿಕ್ಕ ಅವಕಾಶ ನೀಡಿದರೆ ಬಿಚ್ಚಿದ ಸುರುಳಿಯನ್ನು ಕಟ್ಟಲಾರೆವು ಮತ್ತೆ ಎನ್ನುವಷ್ಟು ಅದು.

ಈಗ 35 ರ ಸಂದರ್ಭದಲ್ಲಿ ನಡೆಯುತ್ತಿದೆ 11 ನೇ ರಾಷ್ಟ್ರೀಯ ಸಮ್ಮೇಳನ. ಡಿಸೆಂಬರ್ 10 ರಿಂದ 14 ರವರೆಗೆ ಮಧ್ಯಪ್ರದೇಶದ ಭೂಪಾಲ್ ನಲ್ಲಿ.

ಹಿಂಸೆ: ಜಗದ್ವ್ಯಾಪಿ :

ಅಭಿವೃದ್ದಿಯ ಪಥದಲ್ಲಿ ನಾಗಾಲೋಟದಲ್ಲಿ ಜಗತ್ತು ಮುನ್ನಡೆಯುತ್ತಿದೆ. ಆದರೆ ಆ ಅಭಿವೃದ್ದಿಯ ಮಾದರಿಯಲ್ಲಿ ಹೆಣ್ಣು ಎಲ್ಲೋ ಮೂಲೆಯಲ್ಲಿ. ಇದನ್ನು ವಿಶ್ವ ಸಂಸ್ಥೆ ಕೂಡ ಗುರುತಿಸಿದೆ. ಹಾಗೆಂದೇ 70 ರ ದಶಕದಿಂದಲೇ ಮಹಿಳಾ ವಿಷಯಗಳತ್ತ ಸದಸ್ಯ



ರಾಷ್ಟ್ರಗಳ ಗಮನ ಸೆಳೆಯಲು ಪ್ರಯತ್ನಿಸುತ್ತ ಹತ್ತು ಹಲವು ನಿರ್ದೇಶನಗಳನ್ನು ನೀಡುತ್ತಲೇ ಇದೆ. ಮತ್ತು ದೇಶ ದೇಶಗಳಲ್ಲಿ ಈ ವಿಷಯಗಳನ್ನು ಪ್ರಮುಖವಾಗಿ ಕೈಗೆತ್ತಿಕೊಳ್ಳಲು ಸೂಚನೆಯನ್ನೂ ನೀಡಿದೆ. ಅದರ ಭಾಗವಾಗಿಯೇ ಈ ದೇಶದಲ್ಲಿಯು ಮಹಿಳಾ ಪರ ಯೋಜನೆಗಳ ಘೋಷಣೆಯಾಗುತ್ತಿರುವುದು. ಹಲವುಬಾರಿ ಅವು ಕೇವಲ ಬಾಹ್ಯೋಪಚಾರದ ಘೋಷಣೆಗಳೇ ಆಗಿ ಉಳಿದಿವೆಯಾದರೂ ಅದರ ಹಿಂದೆ ಇರುವುದು ವಿಶ್ವ ಸಂಸ್ಥೆಯ ಆಗ್ರಹ. ಹಾಗಾಗಿ ಯಾರೂ ನಮ್ಮ 56" ಘೋಷಿಸುವ 'ಬೇಟಿ ಬಚಾವ್ ಬೇಟೀ ಪಡಾವ್' ಮುಂತಾದವುಗಳು ಸ್ವಯಂಪ್ರೇರಿತ ಮಹಿಳಾ ಪರತೆ ಎಂದೇನೂ ಅಂದುಕೊಳ್ಳಬೇಕಿಲ್ಲ. ಅದರ ಹಿಂದೆ ದೇಶ ಸಹಿ ಹಾಕಿದ ವಿಶ್ವಸಂಸ್ಥೆಯ ಗೊತ್ತುವಳಿಗಳು ಕೆಲಸ ಮಾಡುತ್ತವೆ. 93 ರಿಂದ ಹಿಂಸೆ ನಿರ್ಮೂಲನೆ ಮಾಡಲು ನಿರ್ದಿಷ್ಟ ಕಾರ್ಯಸೂಚಿಗಳನ್ನು ನಿಗದಿ ಪಡಿಸಿಕೊಳ್ಳಲು ಒತ್ತಾಯ ಮಾಡುತ್ತಿರುವ ವಿಶ್ವಸಂಸ್ಥೆ ನವೆಂಬರ್ 26 ನ್ನು 'ಅಂತರ ರಾಷ್ಟ್ರೀಯ ಮಹಿಳೆಯರ ಮೇಲಿನ ಲಿಂಗಾಧಾರಿತ ಹಿಂಸೆ ನಿರ್ಮೂಲನಾ ದಿನ'ವನ್ನಾಗಿ ಘೋಷಣೆ ಮಾಡಿದೆ. ಈ ಬಾರಿಯ ನವೆಂಬರ್ 26 ರಂದು ಜನವಾದಿ ತನ್ನ 11 ನೇ ಸಮ್ಮೇಳನದ ಅನಾವರಣವನ್ನು ದೇಶದಾದ್ಯಂತ ಸಂಘಟನೆಯ ಬಾವುಟ ಹಾರಿಸುವ ಮೂಲಕ ಮಾಡಿದೆ. ಪ್ರತಿ ರಾಜ್ಯಗಳಲ್ಲಿ ಕನಿಷ್ಟ ನೂರು ಕಡೆ ಬಾವುಟ ಹಾರಿಸಿ ಹಿಂಸೆ ನಿರ್ಮೂಲನೆಯ ಪ್ರತಿಜ್ಞೆ ಕೈಗೊಳ್ಳುವ ಮೂಲಕ ಕಳೆದ 35 ವರ್ಷಗಳಿಂದ ನಾವು ನಡೆಸಿದ ಎಲ್ಲ ಕ್ರಿಯಾತ್ಮಕ ಚಟುವಟಿಕೆಗಳಿಗೆ ಸಿಕ್ಕ ಸಂಘಟನಾ ಸಾಮರ್ಥ್ಯವನ್ನು ಬಿಚ್ಚಿಡಲಾಯಿತು.

ದೇಶ ಕಂಡ ಘನಘೋರ ಕೋಮುವಾದೀ ಸಂಘಟನೆಗಳು ಹದ್ದು ಮೀರಿ ನಡೆಯುತ್ತಿರುವ ಸಂದರ್ಭವನ್ನು ಗುಜರಾತಿನಲ್ಲಿ ಮೋದಿ ಸರ್ಕಾರ ಬಂದಾಗಿನಿಂದ ನಾವೆಲ್ಲರೋ ನೋಡಿದ್ದೇವೆ. ಇದನ್ನು ಪ್ರತಿಭಟಿಸಿ ದೇಶದ ಸಂವಿಧಾನವನ್ನು ಅದರ ಜಾತ್ಯಾತೀತ ಆಶಯಗಳ ಪ್ರತಿಪಾದನೆಗೆ ನಿರಂತರವಾಗಿ ಕೆಲಸ ಮಾಡುತ್ತಿರುವ ಜನವಾದಿಯ 11 ನೇ ಸಮ್ಮೇಳನದ ಘೋಷವಾಕ್ಯವೇ 'ಏಳಿ ಎದ್ದೇಳಿ ಒಗ್ಗಟ್ಟಾಗೋಣ,ಸಂವಿಧಾನದ ಹಕ್ಕುಗಳ ರಕ್ಷಣೆಗೆ ಪಣತೊಡೋಣ'.

ಸಂವಿಧಾನದ ಪ್ರಮುಖ ಆಶಯಗಳನ್ನು ದೇಶದ ಜನರಿಗೆ ಬಿತ್ತರಿಸು ಮತ್ತು ಸಂಗಟನೆಯ ನಿಲುವು ನಿರ್ಧಾರಗಳನ್ನು ಪ್ರಕಟಿಸುವ ಸಲುವಾಗಿ ಈ ಬಾರಿ ವಿಶೇಷ ಕಾರ್ಯಕ್ರಮಗಳನ್ನು ಸಂಘಟಿಸಲಾಗಿದೆ.

ಆಡು ಮುಟ್ಟ ದ ಸೊಪ್ಪಿಲ್ಲ ಜನವಾದಿ ಕೈಗೆತ್ತಿಕೊಳ್ಳದ ವಿಷಯಗಳಿಲ್ಲ. ಹಾಗಿದ್ದೂ ಈ ಸಮ್ಮೇಳನಕ್ಕೆ ಪೂರ್ವಭಾವಿಯಾಗಿ ನಾಲ್ಕು ಪ್ರಮುಖ ಅಂಶಗಳನ್ನು ಮುಂದಿಟ್ಟುಕೊಂಡು ದೇಶದ ಹಲವು ರಾಜ್ಯಗಳನ್ನು ಸುತ್ತಿ ಭೂಪಾಲ್ ತಲುಪುವ ರಿಲೇ ಜಾತಾ ಡಿಸೆಂಬರ್ 1 ರಿಂದ 10 ರ ವರೆಗೆ ಪರ್ಯಟನೆ ಮಾಡುತ್ತಿದೆ.

ಮೇರೆ ಮೀರಿದ ರಾಜಕೀಯ ಹಿಂಸೆಯನ್ನು ಪ್ರಚೋದಿಸುತ್ತಿರುವ,ಪ್ರತಿನಿತ್ಯ ಜನರನ್ನು ಬಲಿ ತೆಗೆದ 'ಕೊಳ್ಳುತ್ತಿರುವ,ಮಹಿಳೆಯರು ಮಕ್ಕಳ ಜೀವನವನ್ನೇ ದುರ್ಭರಗೊಳಿಸುತ್ತಿರುವ ಪಶ್ಚಿಮ ಬಂಗಾಲದ ಕೋಲ್ಕತ್ತದಿಂದ ಹಿಂಸೆ ಯನ್ನು ವಿರೋಧಿಸುವ ರಿಲೇ ಜಾಥಾ ಅಕ್ಕಪಕ್ಕದ ರಾಜ್ಯಗಳಲ್ಲಿ ಸಂಚರಿಸಿ ಹಿಂಶೆಯ ವಿರುದ್ಧ ದ ಜನರ ಜೊತೆ ಸಂವಾದ ನಡೆಸುತ್ತ 10 ರಂದು ಭೂಪಾಲ್ ತಲುಪಲಿದೆ.

ಕೋಮುವಾದದ ಪ್ರಯೋಗಶಾಲೆ ಗುಜರಾತಿನಿಂದ ಕೋಮುವಾದ ವಿರೋಧೀ ಜಾತಾ ಕೋಮುವಾದದ ಕೆನ್ನಾಲಗೆಯಲ್ಲಿ ಬೆಂದ ಮನಸ್ಸುಗಳ ಜೊತೆ ಮಾತನಾಡುತ್ತ, ಬಣ್ಣದ ಮಾತುಗಳ ಸರದಾರನೀಗ ಕೇಂದ್ರದಲ್ಲಿ ಅಧಿಕಾರ ಹಿಡಿದಾತ. ಆದರೆ ಕೋಮುವಾದವೆಂಬುದು ಮಾನವತಾವಾದ ಕ್ಕೆ ವಿರೋಧಿ ಎಂಬ ಸಂದೇಶ ಸಾರುತ್ತ ಪಶ್ಚಿಮದ ರಾಜ್ಯಗಳಲ್ಲಿ ಸಂಚರಿಸಿ 10 ರಂದು ಭೂಪಾಲ್ ತಲುಪಲಿದೆ.

ಸುಧಾರಣೆಯ ಕನಸು ಬಿತ್ತಿ ಜನರ ಕೈಯಿಂದ ಅನ್ನ ರೊಟ್ಟಿ ಕಿತ್ತುಕೊಂಡ ನೀತಿಗಳು ಜಾಗತೀಕರಣ ಖಾಸಗೀಕರಣ ನೀತಿಗಳು. ಉದಾರವಾಗಿ ಧನಿಕರ ಪರವಾಗಿ ನಿಂತ ನೀತಿಗಳಿಂದ ಕೋಟ್ಯಂತರ ಜನ ಕೆಲಸ ಕಳೆದುಕೊಂಡಿದ್ದಾರೆ. ಕಾರ್ಮಿಕರಾಗಿ ಸ್ವತಃ ಮತ್ತು ಕುಟುಂಬದವರಾಗಿಯೂ ಮಹಿಳೆಯರು ಇದರ ನೇರ ಬಲಿಗಳು. ಹಾಗಾಗಿ ಕೆಲಸದ ಹಕ್ಕು ನಮ್ಮ ಹಕ್ಕು ಎಂಬ ಘೋಷಣೆಯಲ್ಲಿ ಪಂಜಾಬಿನಿಂದ ಹೊರಟ ರಿಲೇ ಜಾತಾ ಸುತ್ತಲಿನ ರಾಜ್ಯಗಳ ಮೂಲಕ 10 ರಂದು ಭೂಪಾಲಿನಲ್ಲಿ.

ಇನ್ನು ಸರಿ ಸುಮಾರು ರಾಜಕೀಯ ಪಕ್ಷಗಳು ಕೈ ಬಿಟ್ಟಿರುವ ಮತ್ತು ಜನ ನಿಧಾನವಾಗಿ ಮರೆಯುತ್ತಿರುವ ಶಾಸನ ಸಭೆಗಳಲ್ಲಿ ಮಹಿಳಾ ಮೀಸಲಾತಿ ಮಸೂದೆಯ ಕುರಿತ ಜಾಥಾ ದಕ್ಷಿಣ ರಾಜ್ಯಗಳಲ್ಲಿ ನಡೆಯಿತು. ಸ್ಥಳೀಐ ಸಂಸ್ಥೆಗಳಲ್ಲಿ ಪ್ರತಿಶತ 50% ಮೀಸಲಾತಿಯ ಯಶಸ್ಸು ರಾಜಕೀಯ ಪಕ್ಷಗಳ ಕಣ್ಣು ತೆರೆಸಬೇಕಿತ್ತು. ಆದರೆ ಮಹಿಳೆಯರೇ ಮುಖ್ಯಸ್ಥರಾಗಿರುವ ಪಕ್ಷಗಳೂ ಕೂಡ ಈ ವಿಷಯದಲ್ಲಿ ಮಾತ್ರ ತಾತ್ಸಾರವನ್ನೇ ಹೊಂದಿದ್ದಾರೆ. ಇದುವರೆಗಿನ 33% ಬದಲಾಗಿ ನೋಡಿ ಅಲ್ಲಿ ಯಶಸ್ಸು ಕಂಡಿರುವುದನ್ನು ಇಲ್ಲಿಯೂ ಜಾರಿಗೊಳಿಸಿ ಎಂದು ಶಾಸನ ಸಭೆಗಳಲ್ಲಿ 50% ಪ್ರತಿಶತ ಮಹಿಳಾ ಮೀಸಲಾತಿಗಾಗಿ ಒತ್ತಾಯಿಸಿ ಕೇರಳದ ಪಾಲಕ್ಕಾಡಿನಿಂದ ಡಿಸೆಂಬರ್ 1 ರಂದು ಹೊರಟು ತಮಿಳ್ನಾಡು ಮಾರ್ಗವಾಗಿ ಕರ್ನಾಟಕವನ್ನು ಪ್ರವೇಶಿಸಿತು. ಡಿಸೆಂಬರ್ 3 ಮತ್ತು 4 ರಂದು ಕನಾಟಕದ ಬೆಂಗಳೂರು ಚಿಕ್ಕಬಳ್ಳಾಪುರದಲ್ಲಿ ವಿವಿಧ ಪ್ರದೇಶಗಳಲ್ಲಿ ಸಭೆ ನಡೆಸಿ ಆಂದ್ರದ ಅನಂತಪುರಕ್ಕೆ ತೆರಳಿತು. ಅಲ್ಲಿಂದ ತೆಲಂಗಾಣದ ಮೂಲಕ ಭುಪಾಲ್ ಗೆ 10 ರಂದು ತಲುಪುತ್ತದೆ. ನಾಲ್ಕೂ ವಿಷಯಗಳ ಸಂಕೇತವಾಗಿ ರಿಲೇ ಜಾತಾದಲ್ಲಿ ಸಂಚರಿಸಿದ ಸಂಘಟನೆಯ ಬಾವುಟಗಳನ್ನು ಪ್ರತಿ ರಾಜ್ಯದ ಒಬ್ಬ ಸಂಗಾತಿ ಅದನ್ನು ಭೂಪಾಲಿನಲ್ಲಿ ಕೇಂದ್ರಸಮಿತಿಗೆ ಹಸ್ತಾಂತರ ಮಾಡುತ್ತಾರೆ. ವಾಡಿಕೆಯಂತೆ ಜನ ಚಲಿಸುವ ಬದಲು ಈ ಜಾತಾದಲ್ಲಿ ವಿಷಯಗಳ ಸಂಚಾರ ಮತ್ತು ಬಾವುಟ ಅದರ ಸಂಕೇತ.

ಸಮ್ಮೇಳನದ ಉದ್ಘಾಟನೆಯಲ್ಲಿ ಅಂಧಶ್ರದ್ಧೆ ನಿರ್ಮೂಲನೆಗಾಗಿ ಶ್ರಮಿಸುತ್ತ ಪ್ರಾಣತೆತ್ತ ನರೇಂದ್ರ ದಾಬೋಲ್ಕರ್ ರವರ ಮಗಳೂ ಮತ್ತು ಸ್ವತಃ ಅಂಧಶ್ರದ್ಧೆ ನಿರ್ಮೂಲನೆಯ ಚಳುವಳಿಯಲ್ಲಿ ತೊಡಗಿಕೊಂಡ ಮುಕ್ತಾ ದಾಬೋಲ್ಕರ್, ರೋಹಿತ್ ವೇಮುಲನ ತಾಯಿ ರಾಧಿಕ ವೇಮುಲ ಪಾಲ್ಗೊಳ್ಳಲಿದ್ದಾರೆ. ಬಹಿರಂಗ ಸಭೆಯಲ್ಲಿ ಕೇರಳದ ಮುಖ್ಯಮಂತ್ರಿ ಪಿಣ್ಣರಾಯ್ ವಿಜಯನ್ ಪಾಲ್ಗೊಳ್ಳುತ್ತಿದ್ದಾರೆ.

35 ರ ನೆನಪಿನ ಸಂಚಿಕೆ ಬಿಡುಗಡೆಯಾಗಲಿದೆ. ನಡೆಯುವ ಗೋಷ್ಟಿಗಳು ಕಲಾಪಗಳು ಮುಂದಿನ ನಡೆಯನ್ನು ನಿರ್ಧರಿಸಲಿವೆ. ಹಾದಿಗೆ ಹರವು ನೀಡಲಿದೆ. ●

ಈ ವಾರ ಚರಿತ್ರೆಯಲ್ಲಿ

3 ಡಿಸೆಂಬರ್ 1984

ಭೋಪಾಲ್ ಅನಿಲ ದುರಂತ



ಭೋಪಾಲದಲ್ಲಿದ್ದ ಅಮೆರಿಕನ್ ಕಂಪನಿ ಯೂನಿಯನ್ ಕಾರ್ಬೈಡ್‌ನ ಸ್ಥಾವರದಲ್ಲಿ 40 ಟನ್ ವಿಷಕಾರಿ ಅನಿಲ ಎಂಐಸಿ ಸೋರಿ ತಕ್ಷಣವೇ 3000 ಮಂದಿಯ ಸಾವು ಉಂಟಾಯಿತು.

ಮುಂದಿನ ಮೂರು ದಿನಗಳಲ್ಲಿ ಸಾವಿ ಸಂಖ್ಯೆ 8000 ಕ್ಕೇರಿತು. ನಂತರ ಅದು 20000 ಕೇರಿತು. ಸುಮಾರು 2 ಲಕ್ಷ ಮಂದಿ ನಗರ ಬಿಟ್ಟೋಡಬೇಕಾಯಿತು.

ಬದುಕುಳಿದವರಲ್ಲಿ ಸುಮಾರು 5.2 ಲಕ್ಷ ಮಂದಿಯ ಬದುಕನ್ನು ಇದು ನರಕ ಮಾಡಿದೆ ತಟ್ಟಿದೆ. ಕ್ಯಾನ್ಸರ್, ಕ್ಷಯ, ಜನನಾಂಗಗಳ ಸಮಸ್ಯೆಗಳು, ದೃಷ್ಟಿ ಮಾಂದ್ಯ, ಹಸಿವುಹೀನತೆ ಹೀಗೆ ಹಲವಾರು ಕಾಯಲೆಗಳು ಇವರನ್ನು ಬಾಧಿಸುತ್ತಲೇ ಇವೆ. ಹಿರೋಶಿಮಾ ಅಣುಬಾಂಬು ದುರಂತವನ್ನು ನೆನಪಿಸುವ ಅತಿ ದೊಡ್ಡ ಕೈಗಾರಿಕಾ ಅನರ್ಥ ಎಂದು ದಾಖಲಾಗಿದೆ.

ಇನ್ನೊಂದೆಡೆಯಲ್ಲಿ ಇದು ಭಾರತದ ಆಳುವ ಮಂದಿ ಅಮೆರಿಕಾದ ಆಳುವ ಮಂದಿಯೆದುರು ಮಂಡಿಯೂರಿದ ನ್ಯಾಯದ ಅತಿದೊಡ್ಡ ಅಣಕ ಎಂದೂ ದಾಖಲಾಗಿದೆ.

ಹಿಂಸೆ ಸಹಿಸುವುದಿಲ್ಲ- 'ಮೌನ ಮುರಿಯಿರಿ': ಮಹಿಳೆಯರ ಮೇಲಿನ ಹಿಂಸಾಚಾರ ನಿರ್ಮೂಲನಾ ದಿನಾಚರಣೆ

ಮಹಿಳೆ ಎಂಬ ಕಾರಣಕ್ಕೆ ತಾರತಮ್ಯ ಅನುಭವಿಸುವ ಮಹಿಳೆಯರು ವಿವಿಧ ರೀತಿಯ ಸಾಮಾಜಿಕ ಕ್ರೌರ್ಯಕ್ಕೆ ನಿರಂತರವಾಗಿ ಬಲಿಯಾಗುತ್ತಿರುತ್ತಾರೆ. ಇಂತಹ ಕ್ರೌರ್ಯಕ್ಕೆ ಒಂದು ವಿರಾಮ ಹಾಕಲೇಬೇಕು. ಹಿಂಸೆ ಮುಕ್ತ ಬದುಕಿಗಾಗಿ, ಸಮ ಸಮಾಜದ ನಿರ್ಮಾಣಕ್ಕೆ ಕಂಕಣ ಬದ್ಧರಾಗಿ ಮಹಿಳೆಯರು ಸಂಘಟಿತರಾಗಬೇಕು ಎಂದು ಆಶಯದೊಂದಿಗೆ ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆಯು "ಮೌನ ಮುರಿಯಿರಿ" ಮಾತನಾಡಿ ಇನ್ನೆಂದಿಗೂ ಹಿಂಸೆ ಸಹಿಸುವುದಿಲ್ಲ ಎಂದು ಗಟ್ಟಿ ಧನಿಯಲ್ಲಿ ಹೇಳಿ ಎಂಬ ಘೋಷಣೆಯೊಂದಿಗೆ ನವೆಂಬರ್ 25ರಂದು ಹಿಂಸೆ ನಿರ್ಮೂಲನಾ ದಿನವನ್ನು ಆಚರಿಸಲಾಯಿತು.

ಬೆಂಗಳೂರು ಜಿಲ್ಲೆಯ 13 ಪ್ರದೇಶಗಳಲ್ಲಿ ಧ್ವಜಾರೋಹಣ ಕಾರ್ಯಕ್ರಮ ಹಮ್ಮಿಕೊಳ್ಳುವ ಮೂಲಕ ಮಹಿಳೆಯರ ಮೇಲಿನ ಹಿಂಸೆಯನ್ನು ಮೂಕ ಪ್ರೇಕ್ಷಕನಾಗಿ/ಳಾಗಿ ನೀಡಿಕೊಂಡು ಸುಮ್ಮನಿರುವುದಿಲ್ಲ, ಪ್ರತಿ ಹೆಣ್ಣು ಮಗಳನ್ನು ಮತ್ತು ಮಹಿಳೆಯನ್ನು ಗೌರವಿಸುತ್ತೇನೆ. ಎಲ್ಲೇ ಆಗಲಿ ಹೆಣ್ಣು ಮಕ್ಕಳ ಮತ್ತು ಮಹಿಳೆಯರ ಮೇಲೆ ಅತ್ಯಾಚಾರ, ಹಿಂಸೆ ನಡೆದ-ರೆ ವಿರೋಧಿಸುತ್ತೇವೆ, ನಿಲ್ಲಿಸುತ್ತೇನೆ. ಹಿಂಸೆ ಮುಕ್ತ ಸಮಾಜಕ್ಕಾಗಿ ದುಡಿಯುತ್ತೇನೆ ಎಂದು ಪ್ರತಿಜ್ಞೆ ಮಾಡುವುದರ ಮೂಲಕ ಅರ್ಥಪೂರ್ಣ ರೀತಿಯಲ್ಲಿ ಸಂಘಟನೆಯ ಸಂದೇಶವನ್ನು ಮಹಿಳೆಯರ ಮಧ್ಯೆ ಕೊಂಡೊಯ್ಯಲು ಪಣತೊಡಲಾಯಿತು.

ಕೆ.ಆರ್.ಪುರಂ ಪ್ರದೇಶದ ಸರ್ಕಾರಿ ಫ್ರೌಢಶಾಲೆಯಲ್ಲಿ 168 ಮಕ್ಕಳಿಗೆ ಪ್ರಬಂಧ ಸ್ಪರ್ಧೆ ಹಾಗೂ ಚಿತ್ರಕಲಾ (ಡ್ರಾಯಿಂಗ್) ಸ್ಪರ್ಧೆ ನಡೆಸಲಾಗಿದೆ. ಕಾರ್ಯಕ್ರಮದಲ್ಲಿ ಜನವಾದಿ ಮಹಿಳಾ ಸಂಘಟನೆಯ ರಾಜ್ಯ ಪ್ರಧಾನ ಕಾರ್ಯದರ್ಶಿ ಗೌರಮ್ಮ ಹಾಗೂ ರಾಜ್ಯ ಉಪಾಧ್ಯಕ್ಷರಾದ ವಿಮಲಾ ಕೆ.ಎಸ್. ಭಾಗವಹಿಸಿದ್ದರು.

ಕಮಲಾನಗರದಲ್ಲಿ ನಡೆದ ಧ್ವಜಾರೋಹಣ ಕಾರ್ಯಕ್ರಮದಲ್ಲಿ ದುಡಿಯುವ ಮಹಿಳೆಯರ ಸಮನ್ವಯ ಸಮಿತಿಯ ಮುಖಂಡರಾದ ಲಲಿತಾ ಶೆಣೈ ಭಾಗವಹಿಸಿದ್ದರು.

ರವೀಂದ್ರ ನಗರ ಘಟಕದಲ್ಲಿ ನಡೆದ ಧ್ವಜಾರೋಹಣ ಕಾರ್ಯಕ್ರಮದಲ್ಲಿ ಮನೆ ಕೆಲಸಗಾರರ ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ವಿಜಯಲಕ್ಷ್ಮಿ ಭಾಗವಹಿಸಿದ್ದರು.

ಬೆಂಗಳೂರಿನ ಉದಯನಗರ, ವಿಜಿನಾಪುರ, ಪಿಳ್ಳಾರೆಡ್ಡಿನಗರ, ಬಿ.ಚೆನ್ನಸಂದ್ರ, ದೇವಸಂದ್ರ. ಕಮಲಾನಗರ,ನಾಗರಭಾವಿ ವಿಲೇಜ್,ಹೊಯ್ಸಳನಗರ ಕಮಲಾನಗರ, ಇಟ್ಟುಮಡು, ಜೆಪಿನಗರ, ಉತ್ತರಹಳ್ಳಿ ಪ್ರದೇಶಗಳಲ್ಲಿ ಧ್ವಜಾರೋಹಣ ಮಾಡುವುದರ ಮೂಲಕ ಪ್ರತಿಜ್ಞೆ ಸ್ವೀಕರಿಸಲಾಗಿದೆ.

ಈ ಧ್ವಜಾರೋಹಣ ಹಾಗೂ ಪ್ರತಿಜ್ಞಾ ಸ್ವೀಕಾರ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಎಲ್ಲಾ ಮಹಿಳೆಯರೂ ಈ ಒಂದು ವಿನೂತನ ಕಾರ್ಯಕ್ರಮ ನಿಜಕ್ಕೂ ನಮಗೆ ಸ್ಫೂರ್ತಿ ನೀಡಿದೆ ಎಂದು ಹರ್ಷವ್ಯಕ್ತ ಪಡಿಸಿದರು.

– ಕೆ.ಎಸ್. ಶಾರದಾ

ನ್ಯಾಯಾಂಗದ ಸ್ವಾತಂತ್ರ್ಯದ ಮೇಲೆ ದಾಳಿ ಜೀ ಹುಜೂರ್ ಎನ್ನದವರನ್ನು ಹೊರಗಿಡುವ ಹುನ್ನಾರ





ಪ್ರಭುತ್ವದ ವಿವಿಧ ಸಂಸ್ಥೆಗಳ ಸ್ವಾತಂತ್ರ್ಯ ಮತ್ತು ಸಮಗ್ರತೆಯನ್ನು ಹಾಳುಗೆಡವಲು ಮೋದಿ ಸರಕಾರ ವ್ಯವಸ್ಥಿತ ರೀತಿಯಲ್ಲಿ ಕೆಲಸ ಮಾಡುತ್ತಿದೆ. ಈ ಪೈಕಿ ನ್ಯಾಯಾಂಗಕ್ಕೆ ಮೂಗುದಾರ ಹಾಕುವ ಪ್ರಯತ್ನವಂತೂ ಅತ್ಯಂತ ಅಪಾಯಕಾರಿಯಾದುದು. ನ್ಯಾಯಾಂಗವನ್ನು ನಿಯಂತ್ರಿಸಬೇಕೆಂಬ ಕುತ್ಸಿತ ಪ್ರಯತ್ನಗಳನ್ನು ದೇಶದ ಪ್ರಜಾಸತ್ತಾತ್ಮಕ ಅಭಿಮತ ಸಹಿಸಿಕೊಳ್ಳುವುದಿಲ್ಲ ಎನ್ನುವುದನ್ನು ಮೋದಿ ಸರಕಾರ ಅರಿಯಬೇಕು.

ಪ್ರಕಾಶ ಕಾರಟ್

ಸುಪ್ರೀಂ ಕೋರ್ಟ್ ಪ್ರತಿನಿಧಿಸುವ ಉನ್ನತ ನ್ಯಾಯಾಂಗ ಮತ್ತು ನರೇಂದ್ರ ಮೋದಿ ಸರಕಾರದ ನಡುವಿನ ಬಿಕ್ಕಟ್ಟು ಕಳೆದ ಕೆಲವು ತಿಂಗಳುಗಳಲ್ಲಿ ಬಿಗಡಾಯಿಸಿದೆ. ಹೈಕೋರ್ಟ್‌ಗಳ ನ್ಯಾಯಾಧೀಶರ ನೇಮಕಕ್ಕಾಗಿ ಕೊಲೆಜಿಯಂ ಪ್ರಸ್ತಾವಿಸಿದ 77 ಹೆಸರುಗಳ ಪೈಕಿ ಸರಕಾರ 34 ಹೆಸರುಗಳನ್ನು ಮಾತ್ರ ಅಂಗೀಕರಿಸಿದ್ದು ಉಳಿದ 43 ಹೆಸರುಗಳನ್ನು ವಾಪಸ್ ಕಳಿಸಿದೆ ಎಂದು ಅಟಾರ್ನಿ ಜನರಲ್ ಅವರು ಸುಪ್ರೀಂ ಕೋರ್ಟ್‌ಗೆ ಕಳೆದ ತಿಂಗಳು ತಿಳಿಸಿದ್ದಾರೆ. ಸರಕಾರದ ಈ ಅಭೂತಪೂರ್ವ ಕ್ರಮವು ಸರ್ವೋನ್ನತ ನ್ಯಾಯಾಲಯದೊಂದಿಗಿನ ಸಂಘರ್ಷ ತಾರಕಕ್ಕೇರುವಂತೆ ಮಾಡಿದೆ.

ರಾಜ್ಯಗಳ ಹೈಕೋರ್ಟ್‌ಗಳಲ್ಲಿ ಭಾರಿ ಸಂಖ್ಯೆಯಲ್ಲಿ ನ್ಯಾಯಾಧೀಶರ ಹುದ್ದೆಗಳು ಖಾಲಿಯಿರುವ ಹಿನ್ನೆಲೆಯಲ್ಲಿ ಹೈಕೋರ್ಟ್‌ಗಳಿಗೆ ನ್ಯಾಯಾಧೀಶರ ನೇಮಕದ ಸಂಬಂಧವಾಗಿ ಈ ತಿಕ್ಕಾಟ ಏರ್ಪಟ್ಟಿದೆ. ದೇಶದ ಎಲ್ಲಾ ಹೈಕೋರ್ಟ್‌ಗಳಿಗೆ ಮಂಜೂರಾಗಿರುವ ನ್ಯಾಯಾಧೀಶರ ಸಂಖ್ಯೆ 1079. ಆದರೆ ಭರ್ತಿಯಾಗಿರುವ ಹುದ್ದೆಗಳ ಸಂಖ್ಯೆ ಕೇವಲ 478. ಅಂದರೆ ಶೇಕಡಾ 44.3ರಷ್ಟು ಹುದ್ದೆಗಳು ಖಾಲಿಯಿವೆ.

ನ್ಯಾಯಾಧೀಶರ ನೇಮಕ ವಿಚಾರದಲ್ಲಿ ಕಾನೂನುಬಾಹಿರವಾಗಿ ಮತ್ತು ರಾಜಕೀಯವಾಗಿ ಅನುಮಾನಕ್ಕೆಡೆ ಮಾಡುವ ರೀತಿಯಲ್ಲಿ ಮಧ್ಯಪ್ರವೇಶ ಮಾಡುವುದು ಮೋದಿ ಸರಕಾರದ ಬಯಕೆ-ಯಾಗಿದೆ. ಕೊಲೆಜಿಯಂ ಶಿಫಾರಸು ಮಾಡುವ ನ್ಯಾಯಾಧೀಶರ ನೇಮಕಕ್ಕೆ ಸಂಬಂಧಿಸಿದ ನಿಜವಾದ ನಿಯಮಾವಳಿಗಳನ್ನು ರೂಪಿಸುವುದಕ್ಕೆ ಸಂಬಂಧಿಸಿದ ಮೆಮೊರಾಂಡಮ್ ಆಫ್ ಪ್ರೊಸೀಜರ್ (ಎಂಒಪಿ) ಅನ್ನು ಕೊಲೆಜಿಯಂ ಶಿಫಾರಸು ಮಾಡಿದ ನ್ಯಾಯಾಧೀಶರ ನೇಮಕವನ್ನು ತಡೆಯಲಿಕ್ಕಾಗಿ ಬಳಸಿಕೊಳ್ಳುವುದು ಸರಕಾರದ ಉದ್ದೇಶವಾಗಿದೆ. ನ್ಯಾಯಾಧೀಶರ ನೇಮಕ ಕುರಿತ ರಾಷ್ಟ್ರೀಯ ಆಯೋಗ (ಎನ್‌ಜೆಎಸಿ) ಕಾನೂನು ಸಂವಿಧಾನ ಬಾಹಿರ ಎಂದು ಸುಪ್ರೀಂ ಕೋರ್ಟ್‌ನ ಸಂವಿಧಾನ ಪೀಠ 2014ರ ಅಕ್ಟೋಬರ್‌ನಲ್ಲಿ ರದ್ದು ಮಾಡಿದ್ದನ್ನು ಇಲ್ಲಿ ನೆನೆಯಬಹುದು. ಕೊಲೆಜಿಯಂ ವ್ಯವಸ್ಥೆಯನ್ನು ಸಮರ್ಥಿಸಿಕೊಂಡಿದ್ದ ಸುಪ್ರೀಂ ಕೋರ್ಟ್ ಸೂಕ್ತ ನಿಯಮಾವಳಿಗಳನ್ನು ರೂಪಿಸಲು ಹಾಗೂ ವ್ಯವಸ್ಥೆಯನ್ನು ಹೆಚ್ಚು ಪಾರದರ್ಶಕಗೊಳಿಸಲು ಎಂಒಪಿಯನ್ನು ಸಿದ್ಧಪಡಿಸುವಂತೆ ಸರಕಾರಕ್ಕೆ ಸೂಚಿಸಿತ್ತು ಕೂಡ.

ಎಂಒಪಿಯನ್ನು ರೂಪಿಸುವ ಪ್ರಕ್ರಿಯೆ ವೇಳೆ ನ್ಯಾಯಾಧೀಶರ ನೇಮಕದಲ್ಲಿ ಆಡಳಿತಾತ್ಮಕ ಮಧ್ಯಪ್ರವೇಶಕ್ಕೆ ಅನುಕೂಲವಾಗುವ ರೀತಿಯಲ್ಲಿ ನಿಯಮಗಳನ್ನು ಸೇರಿಸುವುದು ಸರಕಾರದ ಬಯ-ಕೆಯಾಗಿದೆ. ಉದಾಹರಣೆಗೆ, ಮೂವರು ನಿವೃತ್ತ ನ್ಯಾಯಾಧೀಶರ ಸಮಿತಿಯೊಂದು ಸೂಚಿಸಿದ ಹೆಸರುಗಳನ್ನು ಮಾತ್ರವೇ ಕೊಲೆಜಿಯಂ ಪರಿಶೀಲಿಸಬೇಕು ಎಂಬ ನಿಯಮವನ್ನು ಎಂಒಪಿಯಲ್ಲಿ ಸೇರಿಸಲು ಸರಕಾರ ಬಯಸಿದೆ. ನಿವೃತ್ತ ಮುಖ್ಯ ನ್ಯಾಯಾಧೀಶರ ಸಮಿತಿಯನ್ನು ಕೇಂದ್ರ ಸರಕಾರ ನೇಮಿಸುತ್ತದೆ. ಈ ರೀತಿಯಾಗಿ ಕೊಲೆಜಿಯಂ ಪರಿಶೀಲಿಸಬೇಕಾದ ಹೆಸರುಗಳನ್ನು ನಿರ್ದೇಶಿಸಲು ಸರಕಾರಕ್ಕೆ ಅವಕಾಶ ಕಲ್ಪಿಸಲಾಗುತ್ತದೆ.

ಕೊಲೆಜಿಯಂ ಶಿಫಾರಸು ಮಾಡಿದ ಹೆಸರುಗಳನ್ನು ರಾಷ್ಟ್ರೀಯ ಭದ್ರತೆಯ ನೆಲೆಯಲ್ಲಿ ತಿರಸ್ಕರಿಸುವ ಅವಕಾಶ ನೀಡುವುದು ಸರಕಾರ ಪ್ರಸ್ತಾವಿಸಿರುವ ಇನ್ನೊಂದು ಆಕ್ಷೇಪಾರ್ಹ ಅಂಶವಾಗಿದೆ. ಬಿಜೆಪಿ-ಆರ್‌ಎಸ್‌ಎಸ್ ಕೂಟದ 'ರಾಷ್ಟ್ರವಾದ'ದ ಅಭಿಪ್ರಾಯಗಳಿಗೆ ಸರಿಹೊಂದದ ಹೆಸರುಗಳಿಗೆ ನಿಷೇಧಾಧಿಕಾರ ಚಲಾಯಿಸುವುದು ಇದರ ಉದ್ದೇಶ ಎನ್ನುವುದು ಸ್ಪಷ್ಟ. ಹಾಗೂ ಆ ರೀತಿಯಲ್ಲಿ ಸರಿಹೊಂದದವರನ್ನು 'ರಾಷ್ಟ್ರ-ವಿರೋಧಿ' ಎಂದು ಬ್ರಾಂಡ್ ಮಾಡಿ ಅಂಥವರು ರಾಷ್ಟ್ರೀಯ ಭದ್ರತೆಗೆ ಅಪಾಯಕಾರಿಯಾದವರು ಎಂದು ಘೋಷಿಸುವುದು ಅದರ ಹುನ್ನಾರ.

ಕಳೆದ ವಾರ ಸಂಸತ್ತಿನಲ್ಲಿ ಪ್ರಶ್ನೆಯೊಂದಕ್ಕೆ ಉತ್ತರಿಸಿದ ಸರಕಾರ, 'ಬೇಹುಗಾರಿಕೆ ಪಡೆಗಳ ವ್ಯತಿರಿಕ್ತ' ವರದಿಗಳನ್ನು ಆಧರಿಸಿ ಹಾಗೂ ಅವರ ವಿರುದ್ಧವಿರುವ 'ಗಂಭೀರ ಆರೋಪಗಳ' ಕಾರಣದಿಂದ ಕೊಲೆಜಿಯಂಗೆ 43 ಹೆಸರುಗಳನ್ನು ಮರಳಿಸಲಾಯಿತು ಎಂದು ತಿಳಿಸಿತು. ಕೊಲೆಜಿಯಂ ಶಿಫಾರಸು ಮಾಡಿದ ಇಷ್ಟು ದೊಡ್ಡ ಸಂಖ್ಯೆಯ ವ್ಯಕ್ತಿಗಳನ್ನು ಬೇಹುಗಾರಿಕೆ ದಳ (ಐಬಿ) ಅನರ್ಹ ಎಂದು ಹೇಳಿತ್ತು ಎನ್ನುವುದನ್ನು ನಂಬಲು ಸಾಧ್ಯವೇ ಇಲ್ಲ. ಜೀ ಹುಜೂರ್ ಹೇಳಲು ಸಿದ್ಧವಿಲ್ಲದವರು ಅಥವಾ ಸರಕಾರದ ಸಿದ್ಧಾಂತದೊಂದಿಗೆ ಕೈಜೋಡಿಸಲು ತಯಾರಿಲ್ಲದವರನ್ನು ಕೈಬಿಡುವುದು ಬಿಜೆಪಿ ಸರಕಾರದ ಉದ್ದೇಶವೆನ್ನುವುದು ಸ್ಫಟಿಕದಷ್ಟೇ ಸ್ಪಷ್ಟ.

ಉನ್ನತ ನ್ಯಾಯಾಂಗ ವ್ಯವಸ್ಥೆಯಲ್ಲಿ ನ್ಯಾಯಾಧೀಶರ ನೇಮಕಕ್ಕೆ ಸಂಬಂಧಿಸಿದ ಕೊಲೆಜಿಯಂ ವ್ಯವಸ್ಥೆ ದೋಷಗಳಿಂದ ಕೂಡಿದೆ ಎಂದು ಸಿಪಿಐ (ಎಂ) ಹೇಳುತ್ತಲೇ ಬಂದಿದೆ. ಹಾಗಾಗಿ, ನ್ಯಾಯಾಧೀಶರ ನೇಮಕಕ್ಕಾಗಿ ಒಂದು ಸ್ವತಂತ್ರ ಹಾಗೂ ವಿಶಾಲ ತಳಹದಿಯ ರಾಷ್ಟ್ರೀಯ ನ್ಯಾಯಾಂಗ ಆಯೋಗವನ್ನು ರಚಿಸಬೇಕೆಂಬುದು ಅದರ ಬೇಡಿಕೆಯಾಗಿದೆ.

ಹಿಂದಿನ ಕಾನೂನನ್ನು ಸುಪ್ರೀಂ ಕೋರ್ಟ್ ರದ್ದು ಪಡಿಸಿರುವುದರಿಂದ, ಹಿಂದಿನ ಕಾನೂನಿನಲ್ಲಿನ ದೋಷಗಳನ್ನು ಸರಿಪಡಿಸುವಂಥ ಒಂದು ಹೊಸ ಕಾಯಿದೆಯನ್ನು ರೂಪಿಸುವುದೇ ಸಂಸತ್ತಿಗೆ ಉಳಿದಿರುವ ಏಕೈಕ ಮಾರ್ಗವಾಗಿದೆ. ಆಯೋಗದಲ್ಲಿ ಕಾರ್ಯಾಂಗದ ಪ್ರತಿನಿಧಿಗಳು ಇರುವರಾದರೂ ಅವರು ಮೇಲುಗೈ ಸಾಧಿಸುವಂಥ ಅಥವಾ ವಿಟೋ(ನಿಷೇಧ) ಅಧಿಕಾರ ಚಲಾಯಿಸುವಂಥ ಅವಕಾಶ ಇರಕೂಡದು.

ಇದನ್ನು ಮಾಡುವವರೆಗೆ ಕೊಲೆಜಿಯಂ ವ್ಯವಸ್ಥೆಯೇ ಜಾರಿಯಲ್ಲಿರಬೇಕು. ಪ್ರಭುತ್ವದ ವಿವಿಧ ಸಂಸ್ಥೆಗಳ ಸ್ವಾತಂತ್ರ್ಯ ಮತ್ತು ಸಮಗ್ರತೆಯನ್ನು ಹಾಳುಗೆಡವಲು ಮೋದಿ ಸರಕಾರ ವ್ಯವಸ್ಥಿತ ರೀತಿಯಲ್ಲಿ ಕೆಲಸ ಮಾಡುತ್ತಿದೆ. ಈ ಪೈಕಿ ನ್ಯಾಯಾಂಗಕ್ಕೆ ಮೂಗುದಾರ ಹಾಕುವ ಪ್ರಯತ್ನವಂತೂ ಅತ್ಯಂತ ಅಪಾಯಕಾರಿಯಾದುದು. ಒಂದು ವೇಳೆ ಸುಪ್ರೀಂ ಕೋರ್ಟ್ ನೇಮಕಕ್ಕಾಗಿ 43 ಹೆಸರುಗಳನ್ನು ಮತ್ತೆ ಸರಕಾರಕ್ಕೆ ಕಳಿಸಿದರೆ ಆ ಶಿಫಾರಸನ್ನು ಜಾರಿ ಮಾಡದೆ ಸರಕಾರಕ್ಕೆ ಅನ್ಯ ಮಾರ್ಗವಿಲ್ಲ. ಹಾಗೆ ಮಾಡದಿದ್ದರೆ ಅದು ಉನ್ನತ ನ್ಯಾಯಾಂಗ ಸ್ವರೂಪದ ಮೇಲಿನ ಗಂಭೀರ ಆಕ್ರಮಣವಾಗುತ್ತದೆ. ನ್ಯಾಯಾಂಗವನ್ನು ನಿಯಂತ್ರಿಸಬೇಕೆಂಬ ಕುತ್ಸಿತ ಪ್ರಯತ್ನಗಳನ್ನು ದೇಶದ ಪ್ರಜಾಸತ್ತಾತ್ಮಕ ಅಭಿಮತ ಸಹಿಸಿಕೊಳ್ಳುವುದಿಲ್ಲ ಎನ್ನುವುದನ್ನು ಮೋದಿ ಸರಕಾರ ಅರಿಯಬೇಕು.

ಅನು: ವಿಶ್ವ

'50 ದಿನಗಳಾದವು ನಜೀಬ್ ನಾಪತ್ತೆಯಾಗಿ' ಪತ್ತೆಗಾಗಿ ಒತ್ತಾಯಿಸಿ ಎಸ್‌ಎಫ್‌ಐ ಪ್ರತಿಭಟನೆ



ದೆಹಲಿಯಲ್ಲಿರುವ ಜೆಎನ್‌ಯು ವಿದ್ಯಾರ್ಥಿ ನಜೀಬ್ ಅಹ್ಮದ್ ನಾಪತ್ತೆ ಆಗಿ ಡಿಸೆಂಬರ್ 5ಕ್ಕೆ 50 ದಿನ ಆಗಿದೆ. ನಾಪತ್ತೆ ಆದ ವಿದ್ಯಾರ್ಥಿಯನ್ನು ಪತ್ತೆ ಹಚ್ಚುವಲ್ಲಿ ವಿವಿ ಆಡಳಿತ ಮಂಡಳಿ ಹಾಗೂ ಕೇಂದ್ರ ಸರ್ಕಾರ ತಮ್ಮ ಜವಾಬ್ದಾರಿಯನ್ನು ಮರೆತು ನುಣಿಚಿಕೊಳ್ಳಲು ಪ್ರಯತ್ನಸುತ್ತಿವೆ ಎಂದು ಇದನ್ನು ಖಂಡಿಸಿ ಭಾರತ ವಿದ್ಯಾರ್ಥಿ ಫೆಡರೇಶನ್ (ಎಸ್‌ಎಫ್‌ಐ) ರಾಜ್ಯಾದ್ಯಂತ ಪ್ರತಿಭಟನೆ ಹಮ್ಮಿಕೊಂಡಿತ್ತು.

ಹಾವೇರಿಯಲ್ಲಿ ತಹಶೀಲ್ದಾರರ ಕಛೇರಿ ಮುಂದೆ ಪ್ರತಿಭಟನೆ ನಡೆಸಿದ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಎಸ್‌ಎಫ್‌ಐ ಜಿಲ್ಲಾ ಅಧ್ಯಕ್ಷರಾದ ರೇಣುಕಾ ಕಹಾರ ಮಾತನಾಡಿ 'ದೆಹಲಿಯ ಜವಾಹರಲಾಲ್ ನೆಹರೂ ವಿಶ್ವವಿದ್ಯಾಲಯದಲ್ಲಿ ಮತ್ತೊಮ್ಮೆ ಬೌದ್ಧಿಕತೆಯ ಮೇಲೆ ಫ್ಯಾಸಿಸ್ಟರ ಭಯೋತ್ಪಾದಕ ದಾಳಿ ಶುರುವಾಗಿದೆ. ಹೇಳಬೇಕೆಂದರೆ ಅದು ಕೆಲ ದಿನಗಳ, ತಿಂಗಳುಗಳಿಂದ ವಿರಾಮ ಪಡೆಯುತ್ತ ಸದ್ದಿಲ್ಲದೆ ಅವಿರತವಾಗಿ ದಾಳಿ ನಡೆಯುತ್ತಲೇ ಬಂದಿದೆ ಅದರ ಮುಂದುವರೆದ ಭಾಗವೇ ನಜೀಬ್ ಅಹ್ಮದ ನಾಪತ್ತೆ ಪ್ರಕರಣ ಎಂದರು.

ಸಂಘ ಪರಿವಾರ ಎಬಿವಿಪಿ ಯುವಕ ಯುವತಿಯರನ್ನು ಕ್ಯಾಂಪಸ್‌ಗಳಲ್ಲಿ ಛೂ ಬಿಟ್ಟಿರುವ ಸಂಗತಿ ರಹಸ್ಯವೇನು ಅಲ್ಲ. ಜೆಎನ್‌ಯು ನಜೀಬ್ ಪ್ರಕರಣದಲ್ಲಿ ಆಗಿರುವುದು ಇದೇ ಎಂದು ಆರೋಪಿಸಿದರು.

ಅಕ್ಟೋಬರ್ 14ರಂದು ಎಬಿವಿಪಿ ಗೂಂಡಾಗಳಿಂದ ಥಳಿತಕ್ಕೆ ಒಳಗಾಗಿದ್ದ ಈತ ಮಾರನೇ ದಿನದಿಂದ ಕ್ಯಾಂಪಸ್‌ನಲ್ಲಿ ಕಾಣುತ್ತಿಲ್ಲ ಎನ್ನಲಾಗಿದೆ. ನಜೀಬ್ ಹಾಗೆಲ್ಲ ಹೆದರಿ ಓಡುವವನಲ್ಲ. ಆತನ ನಾಪತ್ತೆಯ ಹಿಂದೆ ಎಬಿವಿಪಿ ಕೈವಾಡವಿದೆ, ತನಿಖೆಯಿಂದಲೂ ಅದು ಬಹಿರಂಗಗೊಂಡಿದೆ. ಎಬಿವಿಪಿಯ ವಿಕ್ರಾಂತ್ ಎಂಬಾತ ಕೇಸರಿ ಬ್ಯಾಂಡ್ ಕೈಗೆ ಕಟ್ಟಿಕೊಂಡಿದ್ದನ್ನು ನಜೀಬ್ ಗೇಲಿ ಮಾಡಿದ ಎನ್ನುವ ಕಾರಣ ಮುಂದಿಟ್ಟುಕೊಂಡು ಎಬಿವಿಪಿ ಗೂಂಡಾಗಳು ಆತನ ಮೇಲೆರಗಿದ್ದರು ಎಂದು ತಿಳಿಸಿದರು.

ಎಸ್‌ಎಫ್‌ಐ ಜಿಲ್ಲಾ ಕಾರ್ಯದರ್ಶಿ ಸುಭಾಸ ಎಂ., ಮಾತನಾಡಿ 'ಎಬಿವಿಪಿ ಈಗ ನಜೀಬ್ ಮತ್ತು ಎಡಪಂಥೀಯ ವಿದ್ಯಾರ್ಥಿಗಳ ಕುರಿತು ಅಪಪ್ರಚಾರ ನಡೆಸಲು ಶತಾಯಗತಾಯ ಪ್ರಯತ್ನಿಸುತ್ತಿದೆ. ನಜೀಬ್ ಒಬ್ಬ ಮಾವೋವಾದಿ ನಕ್ಸಲ್. ನಕ್ಸಲ್ ಬೆಂಬಲಿಗ ಎಂದೆಲ್ಲ ಬಿಂಬಿಸಲು ಹರಸಾಹಸ ಮಾಡುತ್ತಿದೆ. ಹಲ್ಲೆ ನಡೆಸಿರುವ ವಿದ್ಯಾರ್ಥಿ ಸಂಘಟನೆಯ ಸೊಗಿನಲ್ಲಿರುವ ಎಬಿವಿಪಿ ಗೂಂಡಾಗಳನ್ನು ಬಂಧಿಸಬೇಕು ಹಾಗೂ ಕೂಡಲೆ ನಜೀಬ್‌ರನ್ನು ಪತ್ತೆ ಹಚ್ಚಬೇಕು ಎಂದು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ಎಸ್‌ಎಫ್‌ಐ ಕಲ್ಲೇಶ್ವರ ಕಾಲೇಜು ಘಟಕದ ಅಧ್ಯಕ್ಷರಾದ ಪ್ರಭು ಪಿ. ಚೇತನ, ಮಹಾಲಿಂಗಯ್ಯ, ಶರಣ, ಮಹೇಶ ಬಿಎಚ್, ಸುರೇಶ ಆರ್, ಲಿಂಗರಾಜ, ವಿರೇಶ, ಶಿವರಾಜ, ದಕ್ಷ, ತೌಕೀರ್, ಕೃಷ್ಣ, ಚೇತನ ಡೊಳ್ಳಿನ, ಕಿರಣ ಬೆಳ್ಳಟ್ಟಿ ಹಾಗೂ ಮುಂತಾದವರಿದ್ದರು.

ಬೆಂಗಳೂರು. ಕೊಪ್ಪಳ, ಮೈಸೂರು ವಿ.ವಿ. ಹಾಗೂ ಕೋಲಾರದಲ್ಲಿ ಪ್ರತಿಭಟನೆಗಳು ನಡೆದಿವೆ.





'ನೈಸ್' ಸದನ ಸಮಿತಿ ವರದಿ: ಅಧಿಕಾರಸ್ಥರ ದುಷ್ಟಕೂಟದ ಅಕ್ರಮ ಬಯಲು



ಈ ಕಂಪೆನಿಯು ಮತ್ತು ಸರಕಾರದ ಅಧಿಕಾರಾ ರೂಢಾ ರಾಜಕಾರಣಿಗಳು, ಅಧಿಕಾರಿಗಳ ಶಾಮೀಲಾತಿಯ ದುಷ್ಟಕೂಟ ಸರಕಾರವನ್ನು ವಂಚಿಸಿ ಸಾರ್ವಜನಿಕ ಸಂಪನ್ಮೂಲದ ಕೊಳ್ಳೆಗೆ ನಿಂತುದು ಮಾತ್ರವೇ ಅಲ್ಲಾ, ವಾಸ್ತವವಾಗಿ, ರೈತರ ಪಟ್ಟಾ ಜಮೀನುಗಳು ಮತ್ತು ಸಾರ್ವಜನಿಕರ ಮನೆಗಳು ಹಾಗೂ ಆಸ್ತಿ ಪಾಸ್ತಿಗಳ ಕೊಳ್ಳೆಯಲ್ಲಿ ತೊಡಗಿಸಿ ಕೊಂಡಿರುವುದು ಈಗಾಗಲೇ ಬಯಲಾಗಿದೆ.

ಯು.ಬಸವರಾಜ್

ರಚನೆಗೊಂಡ ಸುಮಾರು ಎರಡು ವರ್ಷ 03 ತಿಂಗಳ ನಂತರ ಬಹು ನಿರೀಕ್ಷಿತ ನಂದಿ ಇನ್‌ಫ್ರಾಸ್ಟ್ರಕ್ಚರ್ ಕಾರಿಡಾರ್ ಎಂಟರ್‌ಪ್ರೈಸಸ್ (ನೈಸ್) ಭೂಕಬಳಿಕೆಯ ಹಗರಣದ ಕುರಿತ ಸದನ ಸಮಿತಿಯ ವರದಿಯನ್ನು ಕಳೆದ ಡಿಸೆಂಬರ್ 02,2016ರಂದು ಸದನ ಸಮಿತಿ ಅಧ್ಯಕ್ಷರಾದ ಶ್ರೀ ಟಿ ಬಿ ಜಯಚಂದ್ರರವರು ವಿಧಾನ ಸಭಾ ಆಧಿವೇಶನದಲ್ಲಿ ಮಂಡಿಸಿದ್ದಾರೆ. ಆ ಮೂಲಕ ಲೂಟಿಕೋರ ನೈಸ್ ಕಂಪೆನಿಯ ಜೊತೆ ಆಡಳಿತಾರೂಢ ರಾಜಕಾರಣಿಗಳು ಮತ್ತು ಉನ್ನತ ಆಧಿಕಾರಿಗಳ ಶಾಮೀಲಾತಿಯ ಬಹು ಸಾವಿರ ಕೋಟಿ ರೂಗಳ ಹಗರಣವನ್ನು ತೆರೆದಿಟ್ಟಿದ್ದಾರೆ. ನೈಸ್ ಕಂಪೆನಿಗೆ ಮೂಲ ಸೌಕರ್ಯದ ಅಭಿವೃದ್ಧಿ ಕೆಲಸಕ್ಕಿಂತ ರಿಯಲ್ ಎಸ್ಟೇಟ್ ವ್ಯವಹಾರವೇ ಮುಖ್ಯವಾಗಿತ್ತೆಂಬುದನ್ನು ಮತ್ತು ಅದಕ್ಕಾಗಿಯೇ ಈ ಶಾಮೀಲಾತಿ ಇರಬೇಕೆಂಬ ಶಂಕೆಯನ್ನು ವ್ಯಕ್ತ ಪಡಿಸಿದೆ. ಖಂಡಿತಾ ಇದೊಂದು ಶ್ಲಾಘನೀಯ ಕೆಲಸವೇ ಆಗಿದೆ.

ಇಂತಹದ್ದೇ ಅನುಭವವನ್ನು ಬಹುತೇಕ ಇತರೇ ಅಭಿವೃದ್ಧಿ ಕಾರ್ಯಗಳಲ್ಲಿ ನಾವು ನೋಡುತ್ತಿದ್ದೇವೆ. ಈ ಕುರಿತು ಈ ಭಾಗದ ನೊಂದ ಜನತೆ ಮತ್ತು ಪ್ರಗತಿಪರರು, ಪ್ರಗತಿಪರ ಸಂಘ ಸಂಸ್ಥೆಗಳು, 1997ರಲ್ಲಿ ರಾಜ್ಯ ಸರಕಾರ ನೈಸ್ ಕಂಪೆನಿ ಜೊತೆ ಮಾಡಿಕೊಳ್ಳಲಾದ ಬೆಂಗಳೂರು–ಮೈಸೂರು ವೇಗವರ್ಧಿತ ಹೆದ್ದಾರಿಯ ಕ್ರಿಯಾ ಒಪ್ಪಂದದ ಜಾರಿಯ ಆರಂಭದಿಂದಲೇ, ಪ್ರತಿಭಟನೆಗಳನ್ನು ಆರಂಭಿಸಿದ್ದರು. ಬಹಳ ಮುಖ್ಯವಾಗಿ, ಭಾರೀ ಪ್ರಮಾಣದಲ್ಲಿ ಆಗುತ್ತಿರುವ ಬಲವಂತದ ಭೂ ಸ್ವಾಧೀನ, ಭೂ ಬೆಲೆಯಲ್ಲಾದ ವಂಚನೆ, ಬೆದರಿಸಿ ಭೂಕಬಳಿಕೆಯಲ್ಲಿ ತೊಡಗಿದ ಭೂಮಾಫಿಯಾಗಳ ಬೆಳವಣಿಗೆ, ಕೆಐಎಡಿಬಿ ಅಧಿಕಾರಿಗಳು, ಸರಕಾರ ಮತ್ತು ನೈಸ್ ಕಂಪೆನಿಗಳ ದುಷ್ಟಕೂಟದ ವಂಚನೆಯು, ದುಬಾರಿ ಟೋಲ್ ಸಂಗ್ರಹ ಈ ಪ್ರತಿಭಟನೆಗಳಿಗೆ ಕಾರಣವಾಗಿತ್ತು. ಈ ದುಷ್ಟಕೂಟದ ಮೂಲಕ ಭೂ ಮಾಫಿಯಾ ನೈಸ್ ಕಂಪೆನಿಯು ಕ್ರಿಯಾ ಒಪ್ಪಂದವನ್ನು ಮೀರಿ ಈ ಭಾಗದ ಬಹು ಕೋಟಿ ಬೆಲೆಯ ಹಲವು ಸಾವಿರ ಎಕರೆ ಜಮೀನನ್ನು ಕಬಳಿಸಲು ಪ್ರಯತ್ನ ನಡೆಸಿತ್ತು. ಈ ಭಾರೀ ಅಕ್ರಮವನ್ನು ಪ್ರಶ್ನಿಸಿ ಹಲವಾರು ಜನರು, ನ್ಯಾಯಾಲಯದ ಮೆಟ್ಟಿಲನ್ನು ಏರಿದ್ದರು. ಅವರಲ್ಲಿ ಅಂದಿನ ಶಾಸಕರುಗಳಾಗಿದ್ದ, ಕರ್ನಾಟಕ ಪ್ರಾಂತ ರೈತ ಸಂಘದ ಹಾಲಿ ಉಪಾಧ್ಯಕ್ಷ ಶ್ರೀ ಜಿವಿ ಶ್ರೀರಾಮರೆಡ್ಡಿಯವರು, ಹಾಗೂ ಶ್ರೀ ಜೆ.ಸಿ. ಮಾದುಸ್ವಾಮಿ ಇದ್ದರು. ಸದನದಲ್ಲಿಯು ಈ ಕುರಿತು ಜಿ.ವಿ. ಶ್ರೀರಾಮರೆಡ್ಡಿಯವರು ಅನೇಕ ಬಾರಿ ಪ್ರಸ್ತಾಪಿಸಿ ಅಕ್ರಮವನ್ನು ತಡೆಯಲು ಒತ್ತಾಯಿಸಿದ್ದಾರೆ.

ಈ ಸದನ ಸಮಿತಿಯ ವರದಿಯ ಮೂಲಕ ಈ ಎಲ್ಲರ ಹೋರಾಟಕ್ಕೆ ಬಲ ಮತ್ತು ಜಯ ಸಿಕ್ಕಂತಾಗಿದೆ. ಈ ರೀತಿಯ ಜನಗಳ ಹೋರಾಟದ ಪರಿಣಾಮವಾಗಿಯೇ, ಈ ಭೂಮಾಫಿಯಾ ಕಂಪೆನಿಯ ಕ್ರಿಯಾ ಒಪ್ಪಂದವನ್ನು ಮೀರಿ ದುಷ್ಟ ಕೂಟದ ಮೂಲಕ ದಶ ಸಾವಿರಗಟ್ಟಲೇ ಎಕರೆ ಜಮೀನಿನ ಭಾರೀ ಭೂಕಬಳಿಕೆಯನ್ನು ತಡೆಯಲು ಕೊಂಚ ಮಟ್ಟಿಗಾದರೂ ಸಾಧ್ಯವಾಗಿತ್ತು. ಅದರ ಜೊತೆ ಇದೀಗ ಈ ಸದನ ಸಮಿತಿ ವರದಿಯ ಮೂಲಕ ಈ ದುಷ್ಟ ಕಂಪೆನಿಯ ಒಳ ಸಂಚು ಬಯಲುಗೊಂಡಿದೆ. ರಾಜ್ಯ ಸರಕಾರ ಈ ಅಕ್ರಮದಲ್ಲಿ ಪಾಲ್ಗೊಂಡವರ ಮೇಲೆ ಕಠಿಣವಾದ ಕ್ರಮಗಳನ್ನು ಕೈಗೊಂಡು ನೊಂದ ರೈತರಿಗೆ, ಜನತೆಗೆ ಮತ್ತಷ್ಟು ನ್ಯಾಯವನ್ನು ನೀಡಬೇಕಾಗಿದೆ.

ಏನಿದು ಕ್ರಿಯಾ ಒಪ್ಪಂದ?

ಬೆಂಗಳೂರು ಮತ್ತು ಮೈಸೂರಿನ ನಡುವೆ ಜನ ಸಂಚಾರದ ದಟ್ಟಣೆಯನ್ನು ಸರಿಪಡಿಸಲು 1995ರಲ್ಲಿ ಅಧಿಕಾರದಲ್ಲಿದ್ದ ರಾಜ್ಯ ಸರಕಾರವು ಈ ಮಾರ್ಗವನ್ನು ವೇಗವರ್ಧಿತ ಚತುಷ್ಪಥಗಳ ಹೆದ್ದಾರಿಯಾಗಿಸಲು ಉದ್ದೇಶಿಸಿತು. ಅದಕ್ಕಾಗಿ ಸರಕಾರಿ ಸಂಸ್ಥೆಗಳೊಡನೆ ವ್ಯವಹರಿಸಿ ಅದನ್ನು ನಿರ್ಮಿಸಲು ಅಗತ್ಯ ಕ್ರಮಗಳನ್ನು ವಹಿಸುವ ಬದಲು, ಅವ್ಯಕ್ತ ದುರಾಸೆಯಿಂದ ಈ ಭೂಮಾಫಿಯಾ ಕಂಪೆನಿಯೊಂದಿಗೆ 13.04.1997 ರಂದು ಒಪ್ಪಂದಕ್ಕೆ ಸಹಿಹಾಕಿತು. ನಿರ್ಮಿಸಿ, ಸ್ವಂತ ಮುನ್ನಡೆಸಿ, 30 ವರ್ಷಗಳ ನಂತರ ಅದನ್ನು ಸರಕಾರಕ್ಕೆ ವರ್ಗಾಯಿಸುವ (BOOT) ಒಪ್ಪಂದ ಮಾಡಿಕೊಳ್ಳಲಾಗಿದೆ. ಈ ಒಪ್ಪಂದದಂತೆ, ಬೆಂಗಳೂರು– ಮೈಸೂರು ಮಾರ್ಗವನ್ನು ಚತುಷ್ಪಥ ರಸ್ತೆಯನ್ನಾಗಿಸುವುದು ಮತ್ತು ಬೆಂಗಳೂರು ಸುತ್ತಲಿನ ವಾಹನದಟ್ಟಣೆಯನ್ನು ಚದುರಿಸಲು, ಸುತ್ತ ಮುತ್ತಲಿನ ಹೊಸೂರು–ಬೆಂಗಳೂರು, ಪುಣೆ–ಬೆಂಗಳೂರು, ಮಂಗಳೂರು–ಬೆಂಗಳೂರು ಮುಂತಾದ ಹೆದ್ದಾರಿಗಳನ್ನು ಸಂಪರ್ಕಿಸುವ ಪೆರಿಫೆರಲ್ ರಸ್ತೆ ನಿರ್ಮಿಸುವುದು ಹಾಗೂ ಬೆಂಗಳೂರು ಮತ್ತು ಮೈಸೂರುಗಳಿಗೆ ಲಿಂಕ್ ರಸ್ಥೆ ನಿರ್ಮಿಸಿ ಈ ಚತುಷ್ಪಥ ರಸ್ತೆಗೆ ಸೇರ್ಪಡೆ ಮಾಡುವುದು. ಅಲ್ಲದೇ, ಬೆಂಗಳೂರಿನ ಜನಸಾಂದ್ರತೆಯನ್ನು ತಡೆಯಲು ಐದು ನಗರ ಸಮುಚ್ಚಯಗಳಾದ 01. ಬಿಡದಿಯ ಬಳಿ ಕಾರ್ಪೋರೇಟ್ ಕೇಂದ್ರ 02. ಅದೇ ಬಿಡದಿಯ ಬಳಿ ವಾಣಿಜ್ಯ ಕೇಂದ್ರ 03. ರಾಮನಗರದ ಬಳಿ ಕೈಗಾರಿಕಾ ಕೇಂದ್ರ 04. ಅದೇ ರಾಮನಗರದ ಬಳಿ ಪಾರಂಪರಿಕ ಕೇಂದ್ರ ಹಾಗೂ 05. ಶ್ರೀರಂಗ ಪಟ್ಟಣದ ಬಳಿ ಪ್ರವಾಸಿ ಕೇಂದ್ರ ನಿರ್ಮಿಸಲು ಯೋಜಿಸಲಾಗಿತ್ತು. ಇದರಂತೆ ಒಟ್ಟು 162 ಕಿಮೀ ಚತುಷ್ಪಥವನ್ನು ಸಿಮೆಂಟ್ ರಸ್ಥೆಯಾಗಿ ಅಭಿವೃದ್ಧಿ ಪಡಿಸಬೇಕಿತ್ತು. ಈ ಎಲ್ಲಾ ಯೋಜನೆಗಳ ನಿರ್ವಹಣೆಗಾಗಿ 1,272 ಕೋಟಿ ರೂಗಳ ಯೋಜನಾ ವೆಚ್ಚವನ್ನು ಗುರುತಿಸಲಾಗಿತ್ತು.

ಕಂಪೆನಿಯು ತಾನು ತನ್ನ ಸ್ವಂತ ಖರ್ಚಿನಲ್ಲಿ ಈ ಅಭಿವೃದ್ಧಿಯ ಕೆಲಸದಲ್ಲಿ ತೊಡಗುವುದರಿಂದ, ಚತುಷ್ಪಥ ರಸ್ಥೆಗಾಗಿ ರಾಜ್ಯ ಸರಕಾರ ಸರಕಾರಿ ಜಮೀನನ್ನು ಒದಗಿಸಬೇಕು ಮತ್ತು ನಗರ ಸಮುಚ್ಚಯ ನಿರ್ಮಿಸಲು ಸುಮಾರು 13,237 ಎಕರೆ ಜಮೀನನ್ನು ಸ್ವಾಧೀನ ಪಡಿಸಿಕೊಡಬೇಕು. ಈ ಅಭಿವೃದ್ಧಿ ಪಡಿಸಿದ ಸಮುಚ್ಛಯದ ನಿವೇಶನದ ವ್ಯವಹಾರ ಮತ್ತು 30 ವರ್ಷಗಳ ಕಾಲ ರಸ್ತೆಯ ಟೋಲು ಸಂಗ್ರಹದ ಮೂಲಕ ಹಾಕಿದ ಬಂಡವಾಳ ಮತ್ತು ಲಾಭಾಂಶ ಪಡೆಯುವ ನೈಸ್ ಕಂಪೆನಿಯ ಇಂಗಿತದಂತೆ ಒಡಂಬಡಿಕೆಗೆ ಬರಲಾಗಿತ್ತು.

ಇದುವರೆಗೆ ಬೆಂಗಳೂರಿನ 41 ಕಿಮೀಗಳ ಫೆರಿಫೆರಲ್ ರಸ್ತೆ, 8 ಕಿಮೀ ಲಿಂಕ್‌ರಸ್ತೆ 5 ಕಿಮೀ ವೇಗವರ್ಧಿತ ಹೆದ್ದಾರಿಯನ್ನು ಭೌತಿಕವಾಗಿ ನಿರ್ಮಿಸಲಾಗಿದೆ. ಇದರಲ್ಲಿ 5 ಕಿಮೀ ಪೆರಿಫೆರಲ್ ರಸ್ತೆ ಮತ್ತು 8 ಕಿಮೀ ಲಿಂಕ್ ರಸ್ತೆಯನ್ನು ಮಾತ್ರ ಸಿಮೆಂಟ್ ರಸ್ತೆಯಾಗಿ ನಿರ್ಮಿಸಲಾಗಿದೆ. ಉಳಿದುದೆಲ್ಲಾ ಡಾಂಬರು ರಸ್ತೆ ಮಾತ್ರವೇ ಆಗಿದೆ. ಇದೀಗ ಕ್ರಿಯಾ ಒಪ್ಪಂದವಾಗಿ ಸರಿ ಸುಮಾರು 19 ವರ್ಷಗಳು ಸಂದಾಯವಾಗಿವೆ. ಇನ್ನೂ ಒಪ್ಪಂದದಂತೆ ಮೂಲ ಆಶಯವಾದ ಬೆಂಗಳೂರು– ಮೈಸೂರು ಚತುಷ್ಪಥ ರಸ್ತೆ ನಿರ್ಮಾಣವಾಗಲಿಲ್ಲವೆಂಬುದು ಇಲ್ಲಿ ಗಮನಿಸಬೇಕಾದ ಅಂಶವಾಗಿದೆ.

ಯೋಜನಾ ಭೂಸಂತ್ರಸ್ಥರಿಗೆ ಭೂದರದ ಜೊತೆಒಂದು ಉದ್ಯೋಗವನ್ನು ಒದಗಿಸುವ ಅಥವಾ ಪರ್ಯಾಯವಾಗಿ ಜಮೀನನ್ನು ಒದಗಿಸುವ ಮತ್ತು ಸಮರ್ಪಕ ವೆಚ್ಚದ ಮನೆ ನಿರ್ಮಾಣಕ್ಕೆ ಆರ್ಥಿಕ ಬೆಂಬಲ ನೀಡುವ ಅಂಶಗಳನ್ನು ಈ ಕ್ರಿಯಾ ಒಪ್ಪಂದ ಒಳಗೊಂಡಿತ್ತು. ಆದರೇ ಒಪ್ಪಂದದ ಅಂಶದಂತೆ ಇಲ್ಲಿಯವರೆಗೆ, ಕಂಪೆನಿಯಾಗಲೀ ಅಥವಾ ಸರಕಾರವಾಗಲೀ ಭೂಸಂತ್ರಸ್ಥರಿಗೆ ನೆರವಾಗಲಿಲ್ಲ.

ಸದನ ಸಮಿತಿ ಗುರುತಿಸಿದ ಕೆಲ ಮುಖ್ಯ ಅಕ್ರಮಗಳು:

1. ನೈಸ್ ಕಂಪೆನಿ ಒಪ್ಪಂದದಲ್ಲಿ ಹೇಳಿದಂತೆ ತಾನು 1,272 ಕೋಟಿ ಬಂಡವಾಳ ಹೂಡಲಿಲ್ಲ. ಬದಲಿಗೆ ಸರಕಾರದ ಗ್ಯಾರಂಟಿಯ ಮೇಲೆ ಐಸಿಐಸಿಐ ಬ್ಯಾಂಕಿನಲ್ಲಿ ಸರಕಾರಿ ಜಮೀನನ್ನು ಅಡಮಾನ ಮಾಡಿ ಸುಮಾರು 800 ಕೋಟಿ ಸಾಲ ಎತ್ತಿದೆ. ಮಾತ್ರವಲ್ಲಾ, ಸರಕಾರ ನೀಡಿದ 6,999 ಎಕರೆ ಜಮೀನಿಗೆ ಮಾರುಕಟ್ಟೆಯ ಅಥವಾ ಕನಿಷ್ಠ ಮಾರ್ಗ ಸೂಚಿದರವನ್ನು ನೀಡದೇ, ಆ ಒಟ್ಟು ಜಮೀನನ್ನು 30 ವರ್ಷಗಳ ಅವಧಿಗೆ, ಪ್ರತಿಎಕರೆಗೆ ತಲಾ 10 ರೂಪಾಯಿ ದರದಂತೆ ಗುತ್ತಿಗೆಗೆ ಪಡೆದಿದೆ.
2. ಈ ಕ್ರಿಯಾ ಒಪ್ಪಂದದಲ್ಲಿನ ದೋಷಗಳನ್ನು ಸರಿಪಡಿಸಲು ನ್ಯಾಯಾಲಯಕ್ಕೆ ತೆರಳಿದ್ದ ಲೋಕೋಪಯೋಗಿ ಇಲಾಖೆಯ ಮಾಜಿ ಮುಖ್ಯಅಭಿಯಂತರರಾದ ಶ್ರೀ ಸೋಮಶೇಖರರೆಡ್ಡಿಯವರ ಅಭಿಪ್ರಾಯದ ಪ್ರಕಾರ ಈ ಸುಮಾರು 111 ಕಿಮೀ ನ ಚತುಷ್ಪಥದ ರಸ್ತೆಗೆ ಅಗತ್ಯವಾದ ಜಮೀನು 2775 ಎಕರೆ ಮಾತ್ರವೇ ಅಗತ್ಯವಿದ್ದು, ಆದ–ರೇ ಕಂಪೆನಿಗೆ 6,999 ಎಕರೆ ನೀಡಲಾಗುತ್ತಿದೆ ಎಂದು ದಾವೆಯಲ್ಲಿ ಹೇಳಿದ್ದಾರಲ್ಲದೇ, ಪಾಲುದಾರರು ಹೆಚ್ಚುವರಿ ಜಮೀನನ್ನು ರಿಯಲ್ ಎಸ್ಟೇಟಿಗೆ ಬಳಸಿಕೊಳ್ಳಲಿದ್ದಾರೆಂಬ ಆತಂಕವನ್ನು ವ್ಯಕ್ತ ಪಡಿಸಿದ್ದಾರೆ. ಆದರೆ ನ್ಯಾಯಾಲಯವು ಸೋಮಶೇಖರರೆಡ್ಡಿಯವರ ಅಭಿಪ್ರಯವನ್ನು

ಪುಟ 11 ಕ್ಕೆ

ನೈಸ್ ಭೂಕಬಳಿಕೆಯ ಕುರಿತ ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಸಮಾವೇಶದಲ್ಲಿ ಕೇಳಿ ಬಂದ ಮಾತುಗಳು

ಸೋಮಾಪುರ ಗ್ರಾಮದ ರೈತ ಬಸಪ್ಪ ಅವರು ಈ ಸಮಾವೇಶದಲ್ಲಿ ಮಾತನಾಡಿ ನೈಸ್ ಯೋಜನೆಯಿಂದ ನಾನು ನನ್ನ ಮಗನನ್ನು ಕಳೆದುಕೊಂಡಿದ್ದೇನೆ. ಈ ಬಗೆಗೆ ಮಾತನಾಡಿದರೆ ಬಸಪ್ಪನಿಗೆ ತಲೆ ಸರಿಯಿಲ್ಲ ಎಂದು ಪ್ರಚಾರ ಮಾಡಲಾಗುತ್ತಿದೆ. ನೈಸ್ ಕಂಪನಿ ಒಂದು ಲೂಟಿಕೋರ ಕಂಪನಿ. ಅದರ ಲೂಟಿ ಪ್ರಶ್ನಿಸಿದವರ ಮೇಲೆ ಗೂಂಡಾಗಿರಿ ನಡೆಸಲಾಗುತ್ತದೆ. ಇದನ್ನು ಹೇಗಾದರೂ ತಡೆಯಬೇಕು ಎಂದರು. (ಬಸಪ್ಪ ಅವರ ಕುಟುಂಬದ ಸಿದ್ದಲಿಂಗ ಪ್ರಭು ಅವರು ಅಕ್ಟೋಬರ್ 17, 2011 ರಂದು ಕೊಲೆಗೀಡಾದರು. ಈ ಸಂಬಂಧ ನೈಸ್ ಕಂಪನಿ ಏಜೆಂಟ್ ಎನ್ನಲಾದ ರುದ್ರೇಶ್ ಮತ್ತು ಇತರ ಐವರ ಮೇಲೆ ಕೊಲೆ ಸಂಬಂಧ ಪ್ರಕರಣ ದಾಖಲಾಗಿದ್ದು ತನಿಖೆ ನಡೆಯುತ್ತಿದೆ.) ಬಸಪ್ಪ ಕುಟುಂಬದವರು ತಮ್ಮ ಕುಟುಂಬದ 17 ಎಕರೆ ಭೂಮಿಯನ್ನು ರಸ್ತೆ ನಿರ್ಮಾಣದ ಉದ್ದೇಶಕ್ಕೆಂದು ನೈಸ್ ಕಂಪನಿಗೆ ಭೂಮಿ ಕೊಟ್ಟಿದ್ದಾರೆ. ಆದರೆ ರಸ್ತೆಯಿಂದ ಒಂದು ಕಿ.ಮೀ. ದೂರವಿರುವ ಮತ್ತು ರಸ್ತೆಗೆ ಯಾವ ರೀತಿಯಲ್ಲೂ ಸಂಬಂಧ ಪಡದ ಉದ್ದೇಶಕ್ಕೆ ಕುಟುಂಬದ 18 ಎಕರೆ ಜಮೀನನ್ನು ಕೊಡಲೇ ಬೇಕೆಂದು ನೈಸ್ ಕಂಪನಿ ಕಿರುಕುಳ ಕೊಡಲು ಶುರುಮಾಡಿ ಉಪಟಳ ನೀಡತೊಡಗಿದಾಗ ಬಸಪ್ಪ ಮತ್ತು ಅವರ ಸಹೋದರರ ಕುಟುಂಬ ಸದಸ್ಯರು ನೈಸ್ ಕಂಪನಿಯ ಗೂಂಡಾಗಿರಿ ವಿರುದ್ಧ ಸೆಟೆದು ನಿಂತಿದ್ದಾರೆ. ನೈಸ್ ಕಂಪನಿಯ ಗೂಂಡಾಗಿರಿಗೆ ತಲೆ ಬಾಗದೇ ಹಲವಾರು ವರ್ಷಗಳಿಂದ ಭೂಮಿ ಒಪ್ಪಿಸದೇ ಹೋರಾಟ ನಡೆಸುತ್ತಿದ್ದಾರೆ.

ಇದೇ ಭಾಗದ ಗೋಣಿಪುರ ಗ್ರಾಮದ ರೈತ ಪುಟ್ಟರಾಜು ಅವರು ಮಾತನಾಡಿ ಬೆಂಗಳೂರು ನಗರದಿಂದ 18 ಕಿ.ಮೀ. ವ್ಯಾಪ್ತಿಯೊಳಗೆ ಬರುವ ಗೋಣಿಪುರ ಗ್ರಾಮದಲ್ಲಿ ಎಕರೆ ಭೂಮಿಗೆ 1.5 ಕೋಟಿ ಬೆಲೆ ಇರುವ ಕಡೆ ಹಿಂದೆ ಎಂದೋ ನಿಗದಿ ಮಾಡಿದ ಬೆಲೆಯಾದ ಎಕರೆಗೆ 88,401 ರೂ. ಪರಿಹಾರ ನೀಡಿ ಕೈತೊಳೆದುಕೊಳ್ಳುವ ಲೆಕ್ಕದಲ್ಲೇ ಖೇಣಿ ಇದ್ದಾನೆ. ರೈತರು ಅದಕ್ಕೆ ಸಿದ್ದವಿಲ್ಲ. ಇದಕ್ಕೆ ಅವಕಾಶ ನೀಡಬಾರದು ಎಂದರು. ತಮ್ಮ ಭೂಮಿಗೆ ನ್ಯಾಯವಾದ ಬೆಲೆ ನೀಡಲು ತಯಾರಿಲ್ಲದ ನೈಸ್ ಕಂಪನಿಯ ರೌಡಿಗಳು ರಾತ್ರೋ ರಾತ್ರಿ 50 ಮಾವಿನ ಮರ ಕಡಿದು ಹಾಕಿದ್ದಾರೆ ಎಂದು ರೈತ ರಹೀಂ ಅವರು ತಮ್ಮ ತೊಂದರೆಯನ್ನು ಸಮಾವೇಶದಲ್ಲಿ ತೋಡಿಕೊಂಡರು.

ಮೋದಿ ಸರ್ಕಾರದ ಮುಖವಾಡಗಳನ್ನು ಬಯಲುಗೊಳಿಸಿ ದುಡಿಯುವ ಜನಗಳ ಹಿತರಕ್ಷಣೆ ಮಾಡಬೇಕಾಗಿದೆ

ಸಿಐಟಿಯು 15ನೇ ರಾಷ್ಟ್ರೀಯ ಸಮ್ಮೇಳನದ ನಿರ್ಧಾರ

ನಮ್ಮ ಕಳೆದ ವಾರದ ಸಂಚಿಕೆಯಲ್ಲಿ ಈ ಪುಟದಲ್ಲಿ ವರದಿ ಮಾಡಿದಂತೆ ದೇಶದ ಪ್ರಮುಖ ಕಾರ್ಮಿಕ ಸಂಘಟನೆ ಸಿಐಟಿಯುವಿನ 15ನೇ ಅಖಿಲ ಭಾರತ ಸಮ್ಮೇಳನ ಒರಿಸ್ಸಾದ ಪುರಿಯಲ್ಲಿ ನವೆಂಬರ್ 26 ರಿಂದ 30ರತನಕ ಕಾ.ಸಮರ್ ಮುಖರ್ಜಿ ನಗರ, ಕಾ. ಉಮಾನಾಥ್‌ರವರ ವೇದಿಕೆಯಲ್ಲಿ 5 ದಿನಗಳ ಕಾಲ ನಡೆಯಿತು. ಈ ಸಮ್ಮೇಳನದ ಅಧ್ಯಕ್ಷರ ಭಾಷಣ ಮತ್ತು ಸಮ್ಮೇಳನದಲ್ಲಿ ಚರ್ಚಿಸಿದ ಅಂಶಗಳ ಸಾರಾಂಶವನ್ನು ಇಲ್ಲಿ ಸಿಐಟಿಯು ರಾಜ್ಯ ಅಧ್ಯಕ್ಷರು ಮತ್ತು ಈ ಸಮ್ಮೇಳನದಲ್ಲಿ ಅಖಿಲ ಭಾರತ ಉಪಾಧ್ಯಕ್ಷರಲ್ಲಿ ಒಬ್ಬರಾಗಿ ಚುನಾಯಿತರಾಗಿರುವ ಎಸ್.ವರಲಕ್ಷ್ಮಿಯವರು ಕೊಟ್ಟಿದ್ದಾರೆ.

ನವ ಉದಾರವಾದಿ ಕಾರ್ಯಸೂಚಿಯುಳ್ಳ ಅಂತರರಾಷ್ಟ್ರೀಯ ಹಣಕಾಸು ಬಂಡವಾಳ ಪ್ರೇರಿತ ಜಾಗತೀಕರಣ ವಿಶ್ವದಾದ್ಯಂತ ಕಾರ್ಮಿಕ ವರ್ಗದ ಮೇಲೆ ಹೆಚ್ಚು ಹೆಚ್ಚು ಭಾರವನ್ನು ಹೇರುತ್ತಿದೆಯೆನ್ನುವುದು ಈಗಾಗಲೇ ಗಮನಿಸಿರುವ ಸಂಗತಿ. ಬಿಕ್ಕಟ್ಟಿನಿಂದ ಹೊರ ಬರಲು ವಿಶ್ವ ಬಂಡವಾಳಶಾಹಿ ವ್ಯವಸ್ಥೆ ಮಾಡಿದ ಎಲ್ಲಾ ಪ್ರಯತ್ನಗಳು ಹೊಸ ಹಾಗೂ ಇನ್ನಷ್ಟು ಆಳವಾದ ಬಿಕ್ಕಟ್ಟನ್ನು ಸೃಷ್ಟಿಸಿವೆ.

ಆಳುವ ವರ್ಗಗಳು ಅನುಸರಿಸಿದ ಕಠಿಣ ಮಿತವ್ಯಯದ ನೀತಿಗಳು ಕಾರ್ಮಿಕರನ್ನು ಇನ್ನಷ್ಟು ಹಿಂಡಿವೆಯೇ ಹೊರತು ಬಿಕ್ಕಟ್ಟಿನಿಂದ ಹೊರ ಬರುವುದಕ್ಕೆ ಸಹಕಾರಿಯಾಗಿಲ್ಲ. ಲಾಭವನ್ನು ಗರಿಷ್ಠಗೊಳಿಸುವುದನ್ನೇ ಗುರಿಯಾಗಿಸಿರುವ ಈ ನೀತಿಗಳು ಕಾರ್ಮಿಕವರ್ಗದ ಬದುಕಿನ ಮೇಲೆ ತೀವ್ರ ಹಾವಳಿಯನ್ನು ಮಾಡಿವೆ.

ಇಂತಹ ಹೇರಲ್ಪಟ್ಟ 'ಕಠಿಣ ಮಿತವ್ಯಯದ' ನೀತಿಗಳು ಮತ್ತು ಹೆಚ್ಚುತ್ತಿರುವ ಆದಾಯ ಮತ್ತು ಸಂಪತ್ತಿನ ಅಸಮಾನತೆಯ ಸನ್ನಿವೇಶದಲ್ಲಿ ಕಾರ್ಮಿಕ ವರ್ಗ ತನ್ನ ಕೊಳ್ಳುವ ಶಕ್ತಿಯಲ್ಲಿ ನಿರಂತರವಾದ ಇಳಿಕೆಯನ್ನು ಎದುರಿಸುತ್ತಿದೆ. ಇದು ಆರ್ಥಿಕ ಅಭಿವೃದ್ಧಿ ಮತ್ತು ಬೆಳವಣಿಗೆಯ ವೇಗವನ್ನು ಕೂಡ ಕುಂಠಿತಗೊಳಿಸುತ್ತಿದೆ.

ಮೆಕಿನ್ಸ್ ಗ್ಲೋಬಲ್ ಇನ್ಸಿಟಿಟ್ಯೂಟ್ ಮಾಡಿರುವ ಅಂದಾಜಿನ ಪ್ರಕರ ಪ್ರಸ್ತುತ ಆರ್ಥಿಕ ಬಿಕ್ಕಟ್ಟಿನ ಕಳೆದ 8 ವರ್ಷಗಳ ಅವಧಿಯಲ್ಲಿ ಅಮೆರಿಕದ ಜನಸಂಖ್ಯೆ ಪ್ರತಿಶತ 81ರಷ್ಟು ಜನರು ಕಡಿಮೆಯಾಗಿರುವ ನಿವ್ವಳ ಆದಾಯದ ಗುಂಪಿನಲ್ಲಿದ್ದಾರೆ. ಇದು ಇಟಲಿಯಲ್ಲಿ ಪ್ರತಿಶತ 97, ಬ್ರಿಟನ್ 70, ಫ್ರಾನ್ಸ್ 63. ಲಾಭಗಳು ಗಗನಕ್ಕೇರುತ್ತಿದ್ದರೆ ಜನರ ಕೊಳ್ಳುವ ಶಕ್ತಿ ಇಳಿಮುಖವಾಗುತ್ತಿದೆ ಮತ್ತು ಉತ್ಪಾದನೆ ಹಾಗೂ ವ್ಯಾಪಾರ ತಡವರಿಸುತ್ತಿದೆ.ಈ ತೀವ್ರ ಬಿಕ್ಕಟ್ಟಿನಿಂದ ಎರಡು ಪ್ರಮುಖ ವಿಷಯಗಳು ಹೊರ ಹೊಮ್ಮುತ್ತಿವೆ– ಹೆಚ್ಚುತ್ತಿರುವ ಅಸಮಾನತೆ ಮತ್ತು ಹೆಚ್ಚುತ್ತಿರುವ ನಿರುದ್ಯೋಗ. ನವ ಉದಾರವಾದಿ ನೀತಿಗಳ ಹೆಚ್ಚಿನ ಪ್ರತಿಪಾದಕರು ಕೂಡ ಇದನ್ನು ಒಪ್ಪಿಕೊಳ್ಳುತ್ತಿದ್ದಾರೆ.

ಹಿಂದೆಂದೂ ಕಾಣದ ಪ್ರಮಾಣದಲ್ಲಿ ಬಹುರಾಷ್ಟ್ರೀಯ ಕಂಪನಿಗಳ ಶಕ್ತಿ ವರ್ಧನೆಯಾಗಿದೆ ಎಂದು ಜಗತ್ತಿನ ಬಹುರಾಷ್ಟ್ರೀಯ ಕಂಪನಿಗಳ ಅಧ್ಯಯನ ಮಾಡಿರುವ ಮೆಕಿನ್ಸ್ ಗ್ಲೋಬಲ್ ವರದಿ ಹೇಳಿದೆ. ಪರಿಸ್ಥಿತಿ ಇದೇ ತರದಲ್ಲಿ ಮುಂದುವರೆದರೆ ಮುಂದಿನ ಒಂದು ತಲೆಮಾರಿನೊಳಗೆ ದೊಡ್ಡ ದೊಡ್ಡ ಕಂಪನಿಗಳ ಪ್ರಭಾವ ಮಾತ್ರವಿರುವ ಪ್ರಪಂಚದಲ್ಲಿ ಬದುಕಲಿದ್ದೇವೆ ಎಂದು ಅದು ಹೇಳುತ್ತದೆ.ಶೆಲ್, ಆಪಲ್ ಮತ್ತು ವಾಲ್‌ಮಾರ್ಟ್ ಮುಂತಾದ ಬಹುರಾಷ್ಟ್ರೀಯ ಕಂಪನಿಗಳು ಐರ್‌ಲ್ಯಾಂಡ್, ಗ್ರೀಸ್, ಇಸ್ರೇಲ್, ದಕ್ಷಿಣ ಆಫ್ರಿಕಾ ಮತ್ತು ವಿಯೆಟ್ನಾಂ ಸೇರಿದಂತೆ ಪ್ರಪಂಚದ 180 ಅತೀ ಬಡ ರಾಷ್ಟ್ರಗಳಿಗಿಂತ ಹೆಚ್ಚಿನ ಆದಾಯವನ್ನು ಗಳಿಸಿವೆ.

ವಿಶ್ವದ ಅತೀ ಶ್ರೀಮಂತ 1% ರಷ್ಟು ಜನರು ಒಟ್ಟು ಸಂಪತ್ತಿನ ಸುಮಾರು ಅರ್ಧದಷ್ಟನ್ನು ತಮ್ಮ ಹಿಡಿತದಲ್ಲಿಟ್ಟುಕೊಂಡಿದ್ದಾರೆ ಮತ್ತು ಈ ಪಾಲು ಹೆಚ್ಚುತ್ತಲೇ ಇದೆ. ಆದರೆ, ಕಾರ್ಮಿಕ ವರ್ಗದ ಚಳುವಳಿ ಇಂದಿಗೂ ರಕ್ಷಣಾತ್ಮಕ ಹೋರಾಟಗಳಿಗೆ ಸೀಮಿತವಾಗಿದೆಯೆನ್ನುವುದು ವಸ್ತುಸ್ಥಿತಿ. ನಾವು ನೋಡಿದಂತೆ ವಿಶ್ವ ಆರ್ಥಿಕ ಸುಧೀರ್ಘ ಕುಸಿತವನ್ನೆದುರಿಸುತ್ತಿರುವಾಗ ಹಣದುಬ್ಬರ ಇಳಿಕೆ ಪರಿಸ್ಥಿತಿಯಲ್ಲಿ ಕೂಡಾ ಇರುವಾಗ ವ್ಯಾಪಾರದಲ್ಲಿ ಬಂಡವಾಳ ಹೂಡಿಕೆ ಮಂದಗತಿಯಲ್ಲಿರುವಾಗ ಮತ್ತು ಉತ್ಪಾದನೆಯ ಅಭಿವೃದ್ಧಿ ತೀರಾ ಬಲಹೀನವಾಗಿರುವಾಗ ಕಾರ್ಮಿಕರು ಹೋರಾಟಗಳ ಮೂಲಕ ಪಡೆದಿರುವ ವೇತನದ ಹಕ್ಕು ಸಾಮಾಜಿಕ ಭದ್ರತಾ ಸವಲತ್ತುಗಳು ಮತ್ತು ಕಾರ್ಮಿಕರ ದುಡಿಯುವ ಪರಿಸ್ಥಿತಿಯ ಮೇಲೆ ತೀವ್ರವಾದ ಮತ್ತು ಪೂರ್ವಯೋಜಿತ ಧಾಳಿಗಳು ನಡೆಯುತ್ತಿವೆ. ತೀವ್ರವಾದ ಆರ್ಥಿಕ ಮುಗ್ಗಟ್ಟಿನ ಎಲ್ಲಾ ಪರಿಣಾಮಗಳ ಹೊರೆಯನ್ನು ಕಾರ್ಮಿಕರ ಹೆಗಲ ಮೇಲೆ ಹಾಕಲಾಗುತ್ತಿದೆ.

ಅಂತರ ರಾಷ್ಟ್ರೀಯ ಮಟ್ಟದಲ್ಲಿ ಕಾರ್ಮಿಕರು ಎದುರಿಸುತ್ತಿರುವ ಇನ್ನೊಂದು ಗಂಭೀರ ವಿಷಯವೆಂದರೆ ಎಲ್ಲಾ ವಿಭಾಗಗಳಲ್ಲಿ ರೋಬೋಟ್‌ಗಳ ಬಳಕೆ. ಇತ್ತೀಚೆಗೆ ನಡೆದ ವಿವಿಧ ಅಧ್ಯಯನಗಳು ಗಣಕೀಕರಣದಿಂದ ಹಾಗೂ ಉತ್ಪಾದನಾ ರಂಗದಲ್ಲಿ ಮತ್ತು ವಿವಿಧ ಸೇವಾ ಕ್ಷೇತ್ರಗಳಲ್ಲಿ ಕೂಡಾ ರೋಬೋಟ್‌ಗಳ ಬಳಕೆಯಿಂದ ಹಲವಾರು ಉದ್ಯೋಗಗಳು ಕಳೆದು ಹೋಗುತ್ತಿವೆ. ವಿಶ್ವಬ್ಯಾಂಕಿನ ಅಧ್ಯಕ್ಷರಾದ ಜಿಮ್ ಕಿಮ್ ಅವರು ಹೊರ ತಂದಿರುವ ವರದಿಯಲ್ಲಿ ತಂತ್ರಜ್ಞಾನವು ಸಾಂಪ್ರದಾಯಿಕ ಆರ್ಥಿಕ ಪಥದ ಮಾದರಿಯನ್ನು "ಮೂಲಭೂತವಾಗಿ ಛಿದ್ರಗೊಳಿಸಲಿದೆ" ಎಂದು ಹೇಳಿದ್ದಾರೆ. ಭಾರತದಲ್ಲಿ ಉದ್ಯೋಗ ನಷ್ಟದ ಪ್ರಮಾಣ ಪ್ರತಿಶತ 60ರಷ್ಟಾಗಲಿದೆ ಎಂಬುದನ್ನು ಅಂದಾಜು ಮಾಡಲಾಗಿದೆ.

ಐಎಲ್‌ಓ ಅಧ್ಯಯನವೂ ಸೇರಿದಂತೆ ಮಾಡಿದ ಹಲವು ಅಧ್ಯಯನಗಳ ಪ್ರಕಾರ ಆದಾಯ ಅಸಮಾನತೆಯ ಹೆಚ್ಚಳಕ್ಕೆ ಕಾರ್ಮಿಕ ಸಂಘಟನೆಗಳ ಸದಸ್ಯರ ಇಳಿಮುಖವಾಗಿರುವುದು ಮತ್ತು ಚೌಕಾಸಿ ಸಾಮರ್ಥ್ಯವನ್ನು ಕುಂಠಿತಗೊಂಡಿರುವುದು ಕಾರಣ ಎಂಬುದು ಒಂದು ಗಮನಾರ್ಹ.

ಅಂತರರಾಷ್ಟ್ರೀಯ ಮಟ್ಟದಲ್ಲಿ ಕೂಡಾ ಆರ್ಥಿಕ ಬಿಕ್ಕಟ್ಟಿನ ಕುರಿತು ಮತ್ತು ಬಂಡವಾಳ ತನ್ನ ಲಾಭವನ್ನು ಅತಿ ಹೆಚ್ಚು ಮಾಡುವ ಎಲ್ಲಾ ಪ್ರಯತ್ನಗಳ ಬಗ್ಗೆ ಗಂಭೀರವಾದ ಮತ್ತು ವಿಮರ್ಶಾತ್ಮಕ ತಿಳುವಳಿಕೆಯನ್ನೊಂದಿರಬೇಕು. ವೈಜ್ಞಾನಿಕ ಮತ್ತು ತಂತ್ರಜ್ಞಾನದ ಬೆಳವಣಿಗೆಗಳನ್ನು ಇಡೀ ಮಾನವ ಜನಾಂಗದ ಅಭ್ಯುದಯಕ್ಕೆ ಉಪಯೋಗಿಸಿಕೊಳ್ಳಲಾಗುತ್ತಿಲ್ಲ. ಆದರೆ ಜನರ ಮೂಲಭೂತ ಹಕ್ಕುಗಳನ್ನು ಕಸಿದುಕೊಂಡು ಕೇವಲ ಕೆಲವರ ಅತಿ ಆಸೆಯನ್ನು ತಣಿಸುವುದಕ್ಕಾಗಿಯೇ ಬಳಸಿಕೊಳ್ಳಲಾಗುತ್ತಿದೆ ಎಂಬುದನ್ನು ಕಾರ್ಮಿಕ ಚಳುವಳಿ ವ್ಯಾಖ್ಯಾನಿಸಿದೆ. ಈ ಅಂತರರಾಷ್ಟ್ರೀಯ ಪರಿಸ್ಥಿತಿಯೂ ನಮ್ಮ ದೇಶದ ಮೇಲೆ ಹೆಚ್ಚಿನ ಪರಿಣಾಮ ಬೀರುತ್ತಿದೆ.



ವಿಶ್ವಬ್ಯಾಂಕ್, ಐಎಂಎಫ್, ವಿಶ್ವ ವಾಣಿಜ್ಯ ಸಂಘಟನೆ ಮತ್ತು ಹವಾಮಾನ ಬದಲಾವಣೆಗಿರುವ ವೇದಿಕೆಗಳ ಮುಖಾಂತರ ಸಾಮ್ರಾಜ್ಯವಾದಿಗಳ ಏಜೆಂಟರುಗಳ ಮೂಲಕ ಜನತೆಯ ಜೀವನಾಧಾರ ಮತ್ತು ಹಕ್ಕುಗಳ ಮೇಲೆ ನಿರಂತರ ಆಕ್ರಮಣ ನಡೆಯುತ್ತಿದೆ. ಹಲವು ದೇಶಗಳಲ್ಲಿ ಬಲಪಂಥೀಯ ಪಕ್ಷಗಳು ಅಧಿಕಾರಕ್ಕೆ ಬಂದಿವೆ.

ಭಾರತದಲ್ಲಿನ ಪರಿಸ್ಥಿತಿ

ಈ ಅಂತರ್‌ರಾಷ್ಟ್ರೀಯ ಹಿನ್ನೆಲೆಯಲ್ಲಿ ಭಾರತದಲ್ಲಿನ ಸನ್ನಿವೇಶದ ಸಾರಾಂಶ ಹೀಗಿದೆ:

* 2015ರಲ್ಲಿ ಮೋದಿ ಸರ್ಕಾರ ಅಮೆರಿಕಾದೊಡನೆ ಲಾಜಿಸ್ಟಿಕ್ (ಸಾಗಾಣಿಕೆ) ಬೆಂಬಲ ಒಪ್ಪಂದಕ್ಕೆ ಸಹಿ ಹಾಕಿದೆ. ಈ ಒಪ್ಪಂದದ ಪ್ರಕಾರ ಸೇನಾ ನೆಲೆಯು ತೃತೀಯ ದೇಶಗಳಲ್ಲಿ ಮಿಲಿಟರಿ ಕವಾಯತು ನಡೆಸುವಾಗ ಅಮೆರಿಕಾದ ತಮ್ಮ ಸಾಗಾಣಿಕೆಗೆ ಬೆಂಬಲ ಪಡೆಯಲು ಭಾರತದ ಸೇನಾ ನೆಲೆ, ಇಂಧನ ಪೂರೈಕೆ ಮತ್ತು ಇತರೆ ಸೇವೆಗಳನ್ನು ಬಳಸಿಕೊಳ್ಳಬಹುದು.
* ವಾತಾವರಣ ಬದಲಾವಣೆಯ ಮೇಲಿನ ಪ್ಯಾರೀಸ್ ಒಪ್ಪಂದಕ್ಕೆ ಸಹಿ ಹಾಕುವುದಾಗಿ ಘೋಷಿಸಿದೆ. ಇದರಿಂದಾಗಿ ಇಂದಿನ ಕಲುಶಿತ ವಾತಾವರಣಕ್ಕೆ ಕಾರಣವಾಗಿರುವ ಅಮೆರಿಕಾದಂತಹ ಇನ್ನಿತರ ಶ್ರೀಮಂತ ರಾಷ್ಟ್ರಗಳು ಅಪಾಯಕಾರಿ ಅನಿಲಗಳ ವಿಸರ್ಜನೆಯನ್ನು ನಿಯಂತ್ರಿಸುವ ಜವಾಬ್ದಾರಿಯಿಂದ ತಪ್ಪಿಸಿ, ಕಲುಶಿತ ವಾತಾವರಣಕ್ಕೆ ಕಡಿಮೆ ಕಾರಣರಾದ ಅಭಿವೃದ್ಧಿಶೀಲ ರಾಷ್ಟ್ರಗಳು ಅನಿಲ ವಿಸರ್ಜನೆಗಳನ್ನು ಇನ್ನು ಕಡಿಮೆ ಮಾಡಿಕೊಳ್ಳುವ ಒತ್ತಡಕ್ಕೆ ಒಳಗಾಗುವ ಒಪ್ಪಂದಕ್ಕೆ ಸಹಿ ಮಾಡಲು ನಮ್ಮ ಕೇಂದ್ರ ಸರ್ಕಾರ ತಯಾರಿ ನಡೆಸುತ್ತಿದೆ.
* ಯುಪಿಎ 2 ಸರ್ಕಾರ ಲಾಭದಾಯಿಕ ಸಾರ್ವಜನಿಕ ಕ್ಷೇತ್ರದ ಉದ್ಯಮಗಳ ಬಂಡವಾಳ ಹಿಂತೆಗೆತ, ಬ್ಯಾಂಕುಗಳ ಖಾಸಗೀಕರಣಕ್ಕೆ ಅವಕಾಶ ಮಾಡಿಕೊಡುವ ಬ್ಯಾಂಕಿಂಗ್ ಸೇವೆಗಳ ನಿಯಂತ್ರಣ ಕಾಯಿದೆ, ನೌಕರರ ಉಳಿತಾಯದ ಹಣವನ್ನು ಭವಿಷ್ಯನಿಧಿ ನಿಯಂತ್ರಣ ಮತ್ತು ಅಭಿವೃದ್ಧಿ ಪ್ರಾಧಿಕಾರದ ಕಾಯಿದೆ, ಚಿಲ್ಲರೆ ಮಾರಾಟದಲ್ಲಿ ವಿದೇಶಿ ನೇರ ಬಂಡವಾಳಕ್ಕೆ ಅವಕಾಶ ಮುಂತಾದ ಕಾಯಿದೆಗಳ ತಿದ್ದುಪಡಿಯನ್ನು ಅಂದಿನ ಬಿಜೆಪಿಯ ಸಹಾಯದಿಂದ ಜಾರಿಗೆ ತಂದಿತು.
* ಅದೇ ಉದಾರೀಕರಣ ನೀತಿಗಳನ್ನು ಮತ್ತಷ್ಟು ತೀವ್ರಗೊಳಿಸುತ್ತಿದೆ ಇಂದಿನ ದೇಶಪ್ರೇಮಿ ಬಿಜೆಪಿ ಸರ್ಕಾರ.

– ಕಲ್ಲಿದ್ದಲಿನ ಗಣಿಕಾರಿಕೆಯ ನಿಯಂತ್ರಣ ಮುಕ್ತಗೊಳಿಸಿದೆ, ವಿದೇಶಿ ನೇರ ಬಂಡವಾಳದ ಮಿತಿಯನ್ನು 3 ಸಾವಿರ ಕೋಟಿಯಿಂದ 5 ಸಾವಿರ ಕೋಟಿಗೆ ಏರಿಸಿದೆ. ರೈಲ್ವೆ (100%), ರಕ್ಷಣಾ (49%), ವಾಯುಯಾನ (49%), ಬ್ಯಾಂಕಿಂಗ್ (74%) ಇತ್ಯಾದಿ ಪ್ರಮುಖ ಮತ್ತು ಆಯಕಟ್ಟಿನ ಕ್ಷೇತ್ರಗಳಲ್ಲಿ, ಮಾಧ್ಯಮಗಳಲ್ಲಿ 49%, ಡೈರೆಕ್ಟ್ ಟು ಹೋಮ್ ಕೇಬಲ್ ಜಾಲದಲ್ಲಿ 100%, ವಿದೇಶಿಯರಿಗೆ ಮುಕ್ತ ಪ್ರವೇಶ ಇನ್ನು 32 ಆಯಕಟ್ಟಿನ ಕ್ಷೇತ್ರಗಳಲ್ಲಿ ವಿದೇಶಿ ಬಂಡವಾಳಕ್ಕೆ ಅವಕಾಶ ನೀಡಲಾಗಿದೆ. ವಿದೇಶಿ ಹಣಕ್ಕೆ ತೆರೆದಿಡುವ ಪ್ರಸ್ತಾಪಗಳನ್ನು ಮೋದಿ ಸರ್ಕಾರ 2015 ನವೆಂಬರ್‌ನಲ್ಲಿ 15 ದಿನ ಸಂಸತ್ತು ಸೇರಲು ಸಮಯ ನಿಗದಿಯಾಗಿದ್ದರೂ ಕೂಡಾ, ಸಂಸತ್ತಿನಲ್ಲಿ ಚರ್ಚಿಸದೇ ನೇರವಾಗಿ ಪ್ರಧಾ ನಿ ಸಚಿವಾಲಯವೇ ತೀರ್ಮಾನಿಸಿದೆ.

* ದೇಶದ ಒಟ್ಟು ಆಂತರಿಕ ಉತ್ಪನ್ನ 76% ಬೆಳವಣಿಗೆಯಾಗಿದೆ ಎಂದು ಅಂಕಿ ಅಂಶಗಳು ಪ್ರತಿಪಾದಿಸುತ್ತಿವೆ. ಈ ಪ್ರತಿಪಾದನೆಯ ಕೈಚಳಕವೇನೆಂದರೆ ಜಿಡಿಪಿ ಬೆಳವಣಿಗೆಯ ದರವನ್ನು ಲೆಕ್ಕ ಹಾಕುವ ವಿಧಾನದಲ್ಲಿ ಬದಲಾವಣೆಯಾಗಿದೆ.

ಒಟ್ಟು ಆಂತರಿಕ ಉತ್ಪನ್ನ ಅಂಕಿ ಅಂಶಗಳು (ಜಿಡಿಪಿಯ) ದರವನ್ನು ಲೆಕ್ಕ ಹಾಕುವುದು. **"ದೇಶದಲ್ಲಾಗಿರುವ ಉತ್ಪದನೆಯಾಗಿರುವ ಒಟ್ಟು**

ಪುಟ 10 ಕ್ಕೆ

ಹೋರಾಟಗಳಿಗೆ ಕರೆ

ಸಮ್ಮೇಳನದಲ್ಲಿ ಈ ಕೆಳಕಂಡಂತೆ ಹೋರಾಟಗಳಿಗೆ ಕರೆ ನೀಡಲಾಯಿತು.

* **22 ಡಿಸೆಂಬರ್ 2016** ರಂದು ಸುಪ್ರೀಂ ಕೋರ್ಟ್‌ನ ತೀರ್ಪಿನಂತೆ **ಸಮಾನ ಕೆಲಸಕ್ಕೆ ಸಮಾನ ವೇತನಕ್ಕೆ** ಆಗ್ರಹಿಸಿ ಗುತ್ತಿಗೆ, ಕ್ಯಾಶ್ಯೂವಲ್ ಮತ್ತು ಇತರ ಕಾರ್ಮಿಕರಿಗೆ ಜಾರಿ ಮಾಡಬೇಕೆಂದು ಆಗ್ರಹಿಸಿ;
* **19 ಜನವರಿ 2017** ರಂದು ರೈತ–ಕೃಷಿ ಕೂಲಿಗಾರರ ಹೋರಾಟಗಳಿಗೆ ಬೆಂಬಲಿಸಿ ಎಲ್ಲಾ ಹಂತಗಳಲ್ಲಿ ರೈತ, ಕೃಷಿ ಕಾರ್ಮಿಕರ ಜಂಟಿ ರ್‍ಯಾಲಿಗಳು;
* **20, ಜನವರಿ 2017** ರಂದು 45ನೇ ಐಎಲ್‌ಸಿ ತೀರ್ಮಾನಗಳ ಜಾರಿಗೆ ಒತ್ತಾಯಿಸಿ ಸ್ಕೀಂ ವರ್ಕರ್ಸ್‌ನ ಒಂದು ದಿನದ ಅಖಿಲ ಭಾರತ ಮುಷ್ಕರ.

ಪ್ರಮುಖ ನಿರ್ಣಯಗಳು

ಸಮ್ಮೇಳನದಲ್ಲಿ ತೆಗೆದುಕೊಂಡ ಪ್ರಮುಖ ನಿರ್ಣಯಗಳು

* **ಸಮಾಜದಲ್ಲಿ ತುಳಿತಕ್ಕೊಳಗಾದ ಆದಿವಾಸಿ, ದಲಿತ, ಅಲ್ಪಸಂಖ್ಯಾತ ಮತ್ತು ಮಹಿಳೆಯರ ಮೇಲೆ ಹೆಚ್ಚಾಗುತ್ತಿರುವ ದಬ್ಬಾಳಿಕೆಗಳ ಖಂಡನೆ**
* **ಸಮಾನ ಕೆಲಸಕ್ಕೆ ಸಮಾನ ವೇತನದ ಜಾರಿಗಾಗಿ ಆಗ್ರಹ**
* **ಹಿಮಾಚಲ ಪ್ರದೇಶ ರಾಜ್ಯದಲ್ಲಿರುವ ಶಾಂಗ್ ಟಾಂಗ್ ಹೈಡಲ್ ಪ್ರಾಜೆಕ್ಟ್‌ನ ಸಂಘಟನೆಯ ಕಾರ್ಮಿಕರನ್ನು ಜೈಲಿನಿಂದ ಬಿಡುಗಡೆ ಮಾಡಬೇಕು ಹಾಗೂ ಆ ಕಾರ್ಮಿಕರ ನ್ಯಾಯಯುತ ಬೇಡಿಕೆಗಳನ್ನು ಈಡೇರಿಸಬೇಕೆಂದು ಒತ್ತಾಯ**
* **ಸರ್ಕಾರದ ಸ್ಕೀಮುಗಳಲ್ಲಿ ಕೆಲಸ ಮಾಡುತ್ತಿರುವ ನೌಕರರನ್ನು ಮತ್ತು ಫಲಾನುಭವಿಗಳನ್ನು ರಕ್ಷಿಸಲು ಒತ್ತಾಯ**

ಮೋದಿ ಸರ್ಕಾರದ ಮುಖವಾಡಗಳನ್ನು........ ಪುಟ 9 ರಿಂದ

ಸರಕುಗಳ ಮತ್ತು ಸೇವೆಗಳ ಮಾರುಕಟ್ಟೆ ಮೌಲ್ಯದ ಮೊತ್ತ"ದ ಆಧಾರದಲ್ಲಿ ಆದರೆ ಇಂದಿನ ಸರ್ಕಾರ ಕೈಗಾರಿಕಾ ಬೆಳವಣಿಗೆ 2.3% ಇಳಿಕೆ, ಕೃಷಿ ಮತ್ತು ಸೇವೆಗಳ ಉತ್ಪಾದನೆ ಕಡಿಮೆಯಾಗಿರುವುದನ್ನು ಒಪ್ಪದೇ ಮೌಲ್ಯವರ್ಧನೆಯ ಮುಖಾಂತರ ಲೆಕ್ಕ ಹಾಕಿ ಜಿಡಿಪಿಯ 7.6%ಕ್ಕೆ ಆಗಿದೆ ಎಂಬುದನ್ನು ವಾದಿಸುತ್ತಿದೆ.

ಆದರೂ, ಇನ್ನೊಂದು ಕಡೆ ದ್ವಿದಳ ಧಾನ್ಯ ಬೆಳೆಯುವ ಪ್ರದೇಶದಲ್ಲಿ 5 ಹೆಕ್ಟೇರ್ ಕಡಿಮೆಯಾಗಿದೆ. 13 ರಾಜ್ಯಗಳಲ್ಲಿ 54 ಕೋಟಿ ಜನ ಬರಗಾಲವನ್ನು ಅನುಭವಿಸುತ್ತಿದ್ದಾರೆ. 2015ರಲ್ಲಿ 500ಕ್ಕೂ ಹೆಚ್ಚು ಜನರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಲಕ್ಷಾಂತರ ಜನ ಕೃಷಿಯನ್ನು ತ್ಯಜಿಸಿ ವಲಸೆ ಹೋಗಿದ್ದಾರೆ. ನಗರದ ಆರ್ಥಿಕತೆಯೂ ಅಂಧಕಾರದಲ್ಲಿದೆ ಮತ್ತು ಅರೆ ಉದ್ಯೋಗ–ನಿರುದ್ಯೋಗಿಗಳ ಸೈನ್ಯ ಹೆಚ್ಚಾಗತೊಡಗಿದೆ.

ಕೃಷಿ ಆರ್ಥಿಕತೆಯ ಬಿಕ್ಕಟ್ಟು ಕೃಷಿ ಸಂಬಂಧಿತ ಕೈಗಾರಿಕೆಗಳಾದ ಕಬ್ಬು ಬೆಳೆಗಾರರು, ಸಣಬು ಬೆಳೆಗಾರರು ಮತ್ತು ಕಾರ್ಮಿಕರು ಬಳಲುತ್ತಿದ್ದಾರೆ. ಜ್ಯೂಟ್ ಪ್ಯಾಕೇಜಿಂಗ್ ಕಾಯ್ದೆಯನ್ನು ಉಲ್ಲಂಘಿಸಿ ಬಹುರಾಷ್ಟ್ರೀಯ ಕಂಪನಿಗಳೇ ಇರುವ ಸಿಂಥೆಟಿಕ್ ಪ್ಯಾಕೇಜಿಂಗ್ ಲಾಭಿಗೆ ಅನುಕೂಲ ಕಲ್ಪಿಸಿದೆ.

* ಪ್ಲಾಂಟೇಶನ್ ಕ್ಷೇತ್ರದಲ್ಲಿ ರಬ್ಬರ್ ಬೆಲೆಗಳು ಕುಸಿದಿವೆ. ವಿದೇಶದಿಂದ ರಬ್ಬರ್ ಆಮದು 77 ಸಾವಿರ ಟನ್‌ಗಳಿಂದ 4.5 ಲಕ್ಷ ಟನ್‌ಗಳಿಗೆ ಮೀರಿ ಹೆಚ್ಚಿದೆ. ಪಶ್ಚಿಮ ಬಂಗಾಲ ಮತ್ತಿತರೆಡೆಯಲ್ಲಿ 29 ಚಹಾ ತೋಟಗಳನ್ನು ಮುಚ್ಚಲಾಗಿದೆ.

2015–16ರಲ್ಲಿ ಸರಕುಗಳ ರಫ್ತು ಪ್ರಮಾಣ 15.85% ರಷ್ಟು ಕಡಿಮೆಯಾಗಿದೆ.

ಹೀಗೆ ಆರ್ಥಿಕ ಕ್ಷೇತ್ರದ ಪ್ರಮುಖ ಉತ್ಪಾದನಾ ಕ್ಷೇತ್ರಗಳು ಸ್ಥಗಿತತೆ ಅನುಭವಿಸುವ ಸಂದರ್ಭದಲ್ಲಿ ಜಿಡಿಪಿ ಬೆಳವಣಿಗೆ 7.6%, ಹಾಗಿದ್ದು ಅಂಕಿ ಸಂಖ್ಯೆಗಳ ಪ್ರತಿಪಾದನೆ ಕೇವಲ ಕೈಚಳಕ ಎಂದು ಸಿಐಟಿಯು 15ನೇ ರಾಷ್ಟ್ರೀಯ ಸಮ್ಮೇಳನ ವಿಶ್ಲೇಷಿಸಿದೆ.

ಹಣದುಬ್ಬರ ಹತೋಟಿಯಲ್ಲಿದೆ ಮತ್ತು ಬೆಲೆ ಏರಿಕೆ ನಿಯಂತ್ರಣದಲ್ಲಿದೆ ಎನ್ನುವುದು ಸಹ ಜನರಿಗೆ ಮಾಡಿರುವ ಮೋಸ ಮತ್ತು ಕೃತ್ರಿಮವೂ ಆಗಿದೆ. ಜೀವನಾವಶ್ಯಕ ಬೆಲೆಗಳು ಏರುತ್ತಲೇ ಇವೆ. ದ್ವಿದಳ ಧಾನ್ಯಗಳಲ್ಲಿ 35.56%, ತರಕಾರಿ 12.92%, ಸಕ್ಕರೆ 22.3% ಏರಿಕೆಯಾಗಿವೆ. ಆಹಾರ ಧಾನ್ಯಗಳು 8.23% ತುಟ್ಟಿಯಾಗುವುದರೊಂದಿಗೆ ಆಹಾರ ಸಂಬಂಧಿತ ಎಲ್ಲಾ ಸರಕುಗಳ ಬೆಲೆ ಏರಿಕೆಗೆ ಕಾರಣವಾಗಿದೆ. ಪೆಟ್ರೋಲ್–ಡೀಸೆಲ್ ಅಂತರಾಷ್ಟ್ರೀಯ ಮಾರುಕಟ್ಟೆಯಲ್ಲಿ ಒಂದು ಬ್ಯಾರೆಲ್‌ಗೆ 2014ರಲ್ಲಿ 108 ಡಾಲರ್ ಇದ್ದಾಗ ಭಾರತದಲ್ಲಿ ಪೆಟ್ರೋಲ್ ಬೆಲೆ 66.65, 2016 ಅಕ್ಟೋಬರ್‌ನಲ್ಲಿ ಕಚ್ಚಾ ತೈಲ ಬೆಲೆ 49.37 ಡಾಲರ್‌ಗೆ ಕುಸಿದಾಗಲೂ ಅದೇ ಬೆಲೆಯಿದೆ. ಮೋದಿ ಸರ್ಕಾರ ಡೀಸೆಲ್ ಬೆಲೆ 20 ಬಾರಿ, ಪೆಟ್ರೋಲ್ ಬೆಲೆ 17 ಬಾರಿ ಹೆಚ್ಚಳ ಮಾಡಿದೆ. ಅಂತರರಾಷ್ಟ್ರೀಯ ಕಚ್ಚಾ ತೈಲ ಬೆಲೆ ಇಳಿಕೆ ನಮ್ಮ ಬೆಲೆಯೇರಿಕೆಯಲ್ಲಿ ಪ್ರತಿಫಲನವನ್ನುಂಟು ಮಾಡಿಲ್ಲ ಏಕೆಂದರೆ 2 ವರ್ಷ 10 ಬಾರಿ ಅಬಕಾರಿ ಸುಂಕವನ್ನು ಪೆಟ್ರೋಲ್–ಡೀಸೆಲ್ ಮೇಲೆ ಹೆಚ್ಚಿಸಿದೆ.

ನವ ಉದಾರವಾದಿ ಆಳ್ವಿಕೆಯಲ್ಲಿ ಬೆಲೆಯೇರಿಕೆ ವಿರೋಧಾಭಾಸದ ಪರಿಸ್ಥಿತಿಯನ್ನು ತೋರಿಸುತ್ತಿದೆ. ಆಹಾರ ಪದಾರ್ಥಗಳನ್ನು ಕೊಳ್ಳುವ ಜನಸಾಮಾನ್ಯರು ಹೆಚ್ಚು ಬೆಲೆ ಕೊಡಬೇಕು ಹಾಗೆಯೇ ಬೆಳೆಗಳನ್ನು ಬೆಳೆಯುವ ರೈತ ತಮ್ಮ ಉತ್ಪನ್ನಗಳ ಉತ್ಪಾದನೆಗೆ ತೊಡಗಿಸಿದ ಬೆಲೆಯೂ ಸಿಗದೆ ವಲಸೆ ಹೋಗುವ ಅಥವಾ ಆತ್ಮಹತ್ಯೆ ಮಾಡಿಕೊಳ್ಳುವಂತಹ ದಾರಿ ಹಿಡಿದಿದ್ದಾನೆ. ಈ ಸಣ್ಣ, ಮಧ್ಯಮ ರೈತರು ಪೂರ್ತಿಯಾಗಿ ಖಾಸಗಿ ಲೇವಾದಾರರು, ವ್ಯಾಪಾರಿಗಳು –ದೊಡ್ಡ ಭೂಮಾಲೀಕರ ಮೇಲೆ ಅವಲಂಬಿತರಾಗಿದ್ದಾರೆ.

ಬಹುತೇಕ ಜೀವನಾವಶ್ಯಕ ಅಗತ್ಯ ವಸ್ತುಗಳ ಸಟ್ಟಾ ಮಾರುಕಟ್ಟೆಗಳಲ್ಲಿ ಅನಧಿಕೃತ ಭಾರಿ ಕಾರ್ಪೋರೇಟ್‌ಗಳು ಕ್ರಿಯಾಶೀಲವಾಗಿರುವ ಸಟ್ಟಾದಾರರು ಮತ್ತು ವ್ಯಾಪಾರಿಗಳ ಲಾಭವನ್ನು ನಡೆಯಲು ಸರ್ಕಾರ ಯಾವ ಕ್ರಮಗಳನ್ನು ತೆಗೆದುಕೊಂಡಿಲ್ಲ.

ಸಾರ್ವತ್ರಿಕ ರೇಷನ್ ಪದ್ಧತಿಯನ್ನು ಜಾರಿಗೊಳಿಸಲು ಮತ್ತು ಸರಕು ವ್ಯಾಪಾರದಲ್ಲಿ ಸಟ್ಟಾ ವ್ಯವಹಾರವನ್ನು ಪೂರ್ತಿಯಾಗಿ ನಿರ್ಬಂಧಿಸಲು ಸಿಐಟಿಯು ರಾಷ್ಟ್ರೀಯ ಸಮ್ಮೇಳನ ಒತ್ತಾಯಿಸಿದೆ.

ನಿಜವಾದ ಆರ್ಥಿಕತೆ ಎಂದರೆ ಉತ್ಪಾದನಾ ಚಟುವಟಿಕೆಗಳಲ್ಲಿ ಖಾಸಗಿ ಬಂಡವಾಳವನ್ನು ಹೆಚ್ಚೆಚ್ಚು ತೊಡಗಿಸುವುದು ಎಂದು ಹೇಳುತ್ತಿದ್ದರೂ, ಹೂಡಿಕೆಯ ತೀರ್ಮಾನಗಳನ್ನು ತೆಗೆದು–ಕೊಂಡು ಗುತ್ತಿಗೆ ನೀಡಿದ ನಂತರವೂ ಸಹ ಅನೇಕ ಯೋಜನೆಗಳಿಂದ ಖಾಸಗಿ ಹೂಡಿಕೆದಾರರು ಹಿಂದೆ ಹೋಗಿದ್ದಾರೆ. ಇಂತಹ ಯೋಜನೆಗಳ ಪ್ರಮಾಣ 2012–13ರಲ್ಲಿ 341ರಲ್ಲಿ 69, 2014–15ರಲ್ಲಿ 363–101ಕ್ಕೇರಿದೆ. ಈ ರೀತಿ ಗುತ್ತಿಗೆಯ ಹೆಸರಿನಲ್ಲಿ ಬ್ಯಾಂಕುಗಳಿಂದ ಸಾಲ ಪಡೆದು ಮರು ಪಾವತಿಸಿಲ್ಲ.

ಒಟ್ಟು ಸ್ಥಿರ ಬಂಡವಾಳ ಜಿಡಿಪಿಯ ಅನುಪಾತದಲ್ಲಿ ಕುಂಠಿತವಾಗುತ್ತ 2013–14ರಲ್ಲಿ 31.6%, 2014–15ರಲ್ಲಿ 30.8% ಮತ್ತು 2015–16ರಲ್ಲಿ 29.4%ಗೆ ಇಳಿದಿದೆ. ಆರ್ಥಿಕ ಸಮೀಕ್ಷೆಗಳ ಪ್ರಕಾರ ಉತ್ಪಾದನೆ, ಕೃಷಿಯ ಬೆಳೆಗಳ ವಿಭಾಗ ಮತ್ತು ನಿರ್ಮಾಣದಂತಹ ಕ್ಷೇತ್ರಗಳು ಒಟ್ಟು ಮೌಲ್ಯವರ್ಧನೆಯಲ್ಲಿ ತಮ್ಮ ಪಾಲನ್ನು ಕಳೆದುಕೊಂಡಿದೆ.

ಕ್ರಿಸಿಲ್‌ನ ಅಧ್ಯಯನ ಪ್ರಕಾರ ಖಾಸಗಿ ಬಂಡವಾಳದ ಹೂಡಿಕೆಯಲ್ಲಿನ ನಿಜವಾದ ಇಳಿಕೆ 11%, ಸಾರ್ವಜನಿಕ ಕ್ಷೇತ್ರದ ಬಂಡವಾಳ ವೆಚ್ಚದ ಕಾರ್ಯಕ್ರಮಗಳಲ್ಲಿ 3% ಹೆಚ್ಚಳವಾಗಿದೆ.

"ಆರ್ಥಿಕತೆಯಲ್ಲಿ ಖಾಸಗಿ ಹೂಡಿಕೆಯಲ್ಲಿ ನಿರಂತರವಾಗಿ ಇಳಿಮುಖವಾಗುತ್ತಿರುವ ಪರಿಸ್ಥಿತಿಯ ಎದುರು ಸಾರ್ವಜನಿಕ ರಂಗದ ಘಟಕಗಳಿಂದ ಬಂಡವಾಳ ಹೂಡಿಕೆಯೇ ದೇಶಿಯ ಆರ್ಥಿಕತೆಯನ್ನು ಜೀವಂತ ಉಳಿಸಿದೆ. ಆದರೆ ಸರ್ಕಾರದ ಸಾರ್ವತ್ರಿಕ ಖಾಸಗೀಕರಣ ನೀತಿಗಳು ಸಾರ್ವಜನಿಕ ರಂಗದ ಘಟಕಗಳನ್ನೇ ಗುರಿಯಾಗಿಸಿವೆ, ಇದಕ್ಕಾಗಿಯೇ ಯೋಜನಾ ಆಯೋಗವನ್ನು ರದ್ದುಪಡಿಸಿ ನೀತಿ ಆಯೋಗವನ್ನು ರಚಿಸಲಾಗಿದೆ" ಎಂದು ಸಿಐಟಿಯು ಸಮ್ಮೇಳನ ಗುರುತಿಸಿದೆ.

2016–17ರ ಬಜೆಟ್‌ನಲ್ಲಿ 56000 ಕೋಟಿಯ ಹೂಡಿಕೆ ಹಿಂತೆಗೆತದ ಗುರಿಯನ್ನು ನಿಗದಿಪಡಿಸಲಾಗಿದೆ. ಈ ಗುರಿ 36000 ಕೋಟಿ ಅಲ್ಪಸಂಖ್ಯಾತ ಶೇರುಗಳ ಮಾರಾಟದ ಮೂಲಕ ಮತ್ತು 20000 ಕೋಟಿಯನ್ನು (ಸ್ಟ್ರಾಟಿಜಿಕ್ ಸೇಲ್) – ರಣನೀತಿಯ ಮಾರಾಟದಿಂದ ಸಾಧಿಸುವುದಾಗಿ ಹೇಳಿತ್ತು. ಅದರ ಪ್ರಕಾರ ಸಾರ್ವಜನಿಕ ಘಟಕಗಳ ಸ್ವಂತ ಭೂಮಿ, ಕಟ್ಟಡಗಳು ಮತ್ತು ಉತ್ಪಾದನಾ ಘಟಕಗಳು ಮತ್ತಿತರ ಆಸ್ತಿಗಳನ್ನು ಮಾರುವುದು, ಇದಕ್ಕಾಗಿ ಮಾರ್ಗದರ್ಶಿ ಸೂತ್ರಗಳನ್ನು ರಚಿಸಿದೆ.

ಈ ಸೂತ್ರಗಳ ಪ್ರಕಾರ ಸಾರ್ವಜನಿಕ ರಂಗದ ಘಟಕ(ಸಿಪಿಎಸ್‌ಯು)ಗಳಿಗೆ ನಿವ್ವಳ ಉತ್ಪನ್ನದ ಕನಿಷ್ಟ 30% ರಷ್ಟಾದರೂ ಹೆಚ್ಚಿಸಿದ ಲಾಭಾಂಶ ನೀಡಲು ಮತ್ತು ತನ್ನದೇ ಶೇರುಗಳನ್ನು ತಿರುಗಿ ಖರೀದಿಸಲು ಸಲಹೆ ನೀಡುತ್ತಿದೆ. ನಿರ್ದಿಷ್ಟ ಮೊತ್ತದ ನಗದು ಮೀಸಲು ನಿಧಿ ಹೊಂದಿರುವ ಕೇಂದ್ರ ಸಾರ್ವಜನಿಕ ಘಟಕಗಳಿಗೆ ಸರ್ಕಾರಕ್ಕೆ ಮತ್ತು ಇನ್ನಿತರ ಖಾಸಗಿ ಶೇರುದಾರರಿಗೆ ಬೋನಸ್ ಶೇರುಗಳನ್ನು ನೀಡಬೇಕೆಂದು ನಿರ್ಬಂಧಿಸುತ್ತದೆ. ಈ ಹೊಸ ನಿರ್ದೇಶನಗಳಡಿಯಲ್ಲಿ ಸಿಪಿಎಸ್‌ಯುಗಳು ಕೇಂದ್ರ ಸರ್ಕಾರಕ್ಕೆ ನೀಡಬೇಕಾಗಿರುವ ಲಾಭಾಂಶ 2016–17ರಲ್ಲಿ 44.365 ಕೋಟಿಯಿಂದ 53.883 ಕೋಟಿಗೆ ಏರುತ್ತಿದೆ. ಹೀಗೆ ಕೇವಲ ಹೂಡಿಕೆ ಹಿಂತೆಗೆತ ಮತ್ತು ಲಾಭಾಂಶದ 2 ಬಾಬ್ತುಗಳಿಂದ ಎನ್‌ಡಿಎ ಸರ್ಕಾರ ಸಿಪಿಎಸ್‌ಯುಗಳಿಂದ 1 ಲಕ್ಷ ಕೋಟಿಗೂ ಮೀರಿ ಪಡೆಯುತ್ತಿದೆ.

ಇದಕ್ಕಾಗಿ 22 ಸಿಪಿಎಸ್‌ಯುಗಳನ್ನು ಖಾಸಗೀಕರಿಸುವ ತೀರ್ಮಾನ ಮಾಡಿದೆ. ಅದರಲ್ಲಿ ಸೇಲಂ–ದುರ್ಗಾಪುರ ಮತ್ತು ಭದ್ರಾವತಿಯಲ್ಲಿನ ಮಹಾರತ್ನ ಸ್ಟೀಲ್ ಪ್ರಾಧಿಕಾರದಡಿಯಲ್ಲಿ ಬರುವ ಸ್ಟೀಲ್ ಕಾರ್ಖಾನೆಗಳು, ಹೆಲಿಕಾಪ್ಟರ್, ಸಿಮೆಂಟ್, ನ್ಯಾಷನಲ್ ಜೂಟ್ ಉತ್ಪಾದನಾ ನಿಗಮಗಳು, ಭಾರತ್ ವ್ಯಾಗನ್ ನಿಗಮ, ಓಎನ್‌ಜಿಸಿ ಮತ್ತು ಆಯಿಲ್ ಇಂಡಿಯಾಗಳು ಕಂಡು ಹಿಡಿದ 67 ತೈಲ ನಿಕ್ಷೇಪಗಳ ಪ್ರದೇಶಗಳನ್ನು ಖಾಸಗೀಕರಿಸಲು ಕ್ರಮ ಹುಟ್ಟು ಹಾಕಿದೆ. ಹಿಂದುಸ್ಥಾನ್ ಕೇಬಲ, ಐಓಸಿ ಮತ್ತು ಹೆಚ್‌ಪಿಸಿಎಲ್‌ಗಳ ಬಯೋಬಲ್ಸ್‌ನ ಸಹಾಯಕ ಘಟಕಗಳ ಮಾರಾಟವನ್ನು ಘೋಷಿಸಿವೆ. ಮತ್ತು ಈಗಾಗಲೇ ನೀತಿ ಆಯೋಗ 74 ಸಿಪಿಎಸ್‌ಯುಗಳಾದ ಮತ್ತು ಲಾಭ ಮಾಡುತ್ತಿರುವ ಸಿಪಿಎಸ್‌ಯುಗಳನ್ನು ಪಟ್ಟಿ ಮಾಡಿದೆ.

ಹಾಗೆಯೇ ಸಿಪಿಎಸ್‌ಯುಗಳ ಕಾರ್ಮಿಕರು ಹೆಚ್ಚಿನ ಆಕ್ರಮಣಕ್ಕೊಳಗಾಗಿದ್ದಾರೆ. ನಡತೆ, ಶಿಸ್ತು ಮತ್ತು ಮನವಿ ನಿಯಮಾವಳಿಗಳು/ಸೇವಾನಿಯಮಾವಳಿಗಳಲ್ಲಿ ದಂಡನಾತ್ಮಕ ಅವಕಾಶಗಳನ್ನು ಸೇರಿಸಲು ಆಡಳಿತ ವರ್ಗಕ್ಕೆ ಅಧಿಕಾರ ನೀಡುವ ಮೂಲಕ "ಗುಣ–ಪ್ರಾಮಾಣಿಕತೆಯನ್ನು ಖಚಿತ ಪಡಿಸುವ" ಹೆಸರಲ್ಲಿ ನೌಕರರನ್ನು ಏಕಪಕ್ಷೀಯವಾಗಿ ನಿವೃತ್ತಗೊಳಿಸಬಹುದಾಗಿದೆ.

ಪ್ರಾಮಾಣಿಕತೆ ಮತ್ತು ಕಾರ್ಯಸಾಮರ್ಥ್ಯವನ್ನು ಏಕಪಕ್ಷೀಯವಾಗಿ ತೀರ್ಮಾನಿಸಲಾಗುತ್ತದೆ.

ಸರಕಾರ ಅಸ್ತಿತ್ವದಲ್ಲಿ ಇರುವ ಕಾರ್ಮಿಕ ಕಾನೂನುಗಳನ್ನು ನಾಶಪಡಿಸುವ ಯೋಜನೆಗಳನ್ನು ಜಾರಿಗೊಳಿಸುತ್ತಿದೆ. ಭಾರಿ ಪ್ರಚಾರಗಳೊಂದಿಗೆ ಕಾರ್ಮಿಕ ಕಲ್ಯಾಣ ಯೋಜನೆಗಳೆಂದು ಪ್ರಧಾನ ಮಂತ್ರಿ ಜೀವನಜ್ಯೋತಿ ಯೋಜನೆ, ಪ್ರಧಾನ ಮಂತ್ರಿ ಸುರಕ್ಷಾ ಭೀಮಾ ಯೋಜನೆ ಮತ್ತು ಅಟಲ್ ಪಿಂಚಣಿ ಯೋಜನೆಗಳನ್ನು ಪ್ರಾರಂಭಿಸಿದೆ. **ಆದರೆ ಈ ಯೋಜನೆಗಳಿಗೆ ಪ್ರಧಾನ ಮಂತ್ರಿಯ ಪಟ್ಟ ಬಿಟ್ಟರೆ ಹಣಕಾಸಿನ ನೆರವುಗಳಿಲ್ಲ. ಈ ಎಲ್ಲಾ ಯೋಜನೆಗಳು 8 ವರ್ಷಗಳಿಂದಿವೆ. 45 ಕೋಟಿ ಕಾರ್ಮಿಕರಲ್ಲಿ 3ನೇ ಒಂದು ಭಾಗವೂ ಕಾರ್ಮಿಕರನ್ನೊಳಗೊಂಡಿಲ್ಲ ಎಂಬುದು ಗಮನಾರ್ಹ.** ಎಲ್ಲಾ ಯೋಜನೆಗಳೂ ಬ್ಯಾಂಕ್ ಮುಖಾಂತರ ಜಾರಿ ಮಾಡಲಾಗುತ್ತದೆ. ಅಸಂಘಟಿತ ಕಾರ್ಮಿಕರು ತಮ್ಮ ಖಾತೆಗಳಲ್ಲಿ 500–1000 ರೂ.ಗಳ ಹಣವನ್ನು ಇಡಲು ಕಡ್ಡಾಯ ಮಾಡಲಾಗಿದೆ. ಜನಧನ್ ಯೋಜನೆಗಳಲ್ಲಿ 66% ರಷ್ಟು ಶೂನ್ಯ ಖಾತೆಗಳಾಗಿವೆ.

ಇವೆಲ್ಲಾ ಜನರನ್ನು ಮೋಸಗೊಳಿಸುವ ಮತ್ತು ಅವರನ್ನು ತಪ್ಪು ದಾರಿಗೆಳೆಯುವ ಹಾಗೂ ಗೊಂದಲಕ್ಕೀಡು ಮಾಡುವ ಪ್ರಯತ್ನಗಳಲ್ಲದೇ ಬೇರೇನೂ ಅಲ್ಲ.

ಇಂತಹ ಒಂದು ಗಂಭೀರ ಸನ್ನಿವೇಶದಲ್ಲಿ ಮೋದಿ ಸರ್ಕಾರದ ಈ ಎಲ್ಲಾ ಜನವಿರೋಧಿ ನಿಜ ಮುಖವಾಡಗಳನ್ನು ಬಯಲುಗೊಳಿಸಿ ಆ ಮೂಲಕ ದುಡಿಯುವ ಜನತೆಯ ದೈನಂದಿನ ಬದುಕಿನ ಮೇಲಾಗುವ ಕೆಟ್ಟ ಪರಿಣಾಮಗಳನ್ನು ತಡೆಹಿಡಿಯುವ ಕೆಲಸವನ್ನು ಕಾರ್ಮಿಕ ವರ್ಗ ಮಾಡಬೇಕಿದೆ ಎಂಬ ಕರೆಯನ್ನು ಸಿಐಟಿಯು 15ನೇ ರಾಷ್ಟ್ರೀಯ ಸಮ್ಮೇಳನ ಕರೆ ಕೊಟ್ಟಿತು.

ಅತ್ಯಂತ ಕಡಿಮೆ ಕಾರ್ಮಿಕ ಸಂಘಟನೆಗಳು ಮತ್ತು ಸದಸ್ಯರಿದ್ದರೂ ಕೂಡಾ ಒರಿಸ್ಸಾದ ಸಿಐಟಿಯು ರಾಜ್ಯ ಸಮಿತಿ ಅಲ್ಲಿಯ ಪ್ರಜಾಸತ್ತಾತ್ಮಕ ಚಳುವಳಿಗಳು ಮತ್ತು ರೈತ, ಯುವ ಜನತೆ, ಮಹಿಳಾ ಮತ್ತು ವಿದ್ಯಾರ್ಥಿ ಸಂಘಟನೆಗಳು ಸುಮಾರು 4–5 ತಿಂಗಳಿನಿಂದ ಸತತವಾಗಿ ಪರಿಶ್ರಮವಹಿಸಿ ದುಡಿಯುವ ಜನರ ಮುಖ್ಯ ಪ್ರತಿನಿಧಿಯಾಗಿ ಸಿಐಟಿಯುವಿನ 15ನೇ ಅಖಿಲ ಭಾರತ ಸಮ್ಮೇಳನವನ್ನು ಯಶಸ್ವಿಗೊಳಿಸಿತು. ■

ಸಮ್ಮೇಳನದಲ್ಲಿ ಭಾಗವಹಿಸಿದ ಪ್ರತಿನಿಧಿಗಳ ವಿವರ

24 ರಾಜ್ಯಗಳಿಂದ ಮತ್ತು ಸೋದರ ಸಂಘಟನೆಗಳಿಂದ 2033 ಪ್ರತಿನಿಧಿಗಳಿ ಈ ಸಮಮೇಳನದಲ್ಲಿ ಭಾಗವಹಿಸಿದರು ಎಂದು ಕಳೆದ ಸಂಚಿಕೆಯಲ್ಲಿ ವರದಿ ಮಾಡಿದ್ದೆವು. ಇನ್ನಷ್ಟು ವಿವರಗಳು ಇಲ್ಲಿವೆ.

447 ಮಹಿಳಾ ಪ್ರತಿನಿಧಿಗಳು, 1576 ಪುರುಷ ಪ್ರತಿನಿಧಿಗಳು, 9 ಜನ ಸೌಹಾರ್ದ ಪ್ರತಿನಿಧಿಗಳು ಮತ್ತು ಒಬ್ಬರು ವೀಕ್ಷಕರಾಗಿ ಪಾಲ್ಗೊಂಡಿದ್ದರು.

ಸಿಐಟಿಯು ಹೋರಾಟಗಳಲ್ಲಿ 358 ಜನ ಕೆಲಸ ಕಳೆದುಕೊಂಡವರು, 541 ಜನ ಜೈಲು ವಾಸ ಅನುಭವಿಸಿದವರು, 191 ಜನ ಭೂಗತರಾಗಿ ಕೆಲಸ ನಿರ್ವಹಿಸಿದ ಮಹಾನ್ ಚೇತನಗಳು ಪಾಲ್ಗೊಂಡಿದ್ದರು. 1216 ಜನ ಕಾರ್ಮಿಕರಾಗಿ, ನೌಕರರಾಗಿದ್ದವರು ಪಾಲ್ಗೊಂಡಿದ್ದರು. 751 ಜನ ಸಂಗಾತಿಗಳು ಮೊದಲ ಬಾರಿಗೆ ಸಮ್ಮೇಳನದಲ್ಲಿ ಪಾಲ್ಗೊಂಡಿರುವುದು ವಿಶೇಷವಾಗಿತ್ತು.

ಅತ್ಯಂತ ದೀರ್ಘಕಾಲಿಕ ಜೈಲಿನಲ್ಲಿದ್ದವರು ಕರ್ನಾಟಕದ ಕಾಂ.ಆರ್.ಶ್ರೀನಿವಾಸ್–15 ವರ್ಷ, ಪಶ್ಚಿಮಬಂಗಾಳದ ಕಾಂ.ಸುಕಾಂತ್ ಕೋನಾರ್ ಹಾಗೂ ಕಾಂ.ದಿಲೀಪ್ ಬಿಸ್ವಾಸ್‌ರವರು 7 ವರ್ಷಗಳ ಕಾಲ ಜೈಲಿನಲ್ಲಿದ್ದ ಸಂಗಾತಿಗಳು. ಸಮ್ಮೇಳನದ ಪ್ರತಿನಿಧಿಗಳಾಗಿ ಭಾಗವಹಿಸುವುದರ ಮೂಲಕ ಸಮ್ಮೇಳನದ ಮೆರಗನ್ನು ಹೆಚ್ಚಿಸಿದ್ದರು.

ಹಾಗೆಯೇ ದುಡಿಯುವ ವರ್ಗದ ಪಕ್ಷವಾದ ಸಿಪಿಐ(ಎಂ)ನಿಂದ ಚುನಾಯಿಸಲ್ಪಟ್ಟ ಇಬ್ಬರು ಸಚಿವರು, 21 ಜನ ಜಿಲ್ಲಾ ಪಂಚಾಯತ್ ಸದಸ್ಯರು, 121 ಜನ ಸ್ಥಳೀಯ ಸಂಸ್ಥೆಗಳ ಚುನಾಯಿತ ಪ್ರತಿನಿಧಿಗಳು ಸಾಧಾರಣಾ ಪ್ರತಿನಿಧಿಗಳಂತೆ ಭಾಗವಹಿಸಿದ್ದು ವಿಶೇಷವಾಗಿತ್ತು.

ತೀರ್ಮಾನದ ಹಂತದಲ್ಲಿ ಎಲ್ಲ ಪ್ರತಿನಿಧಿಗಳನ್ನು ಒಳಗೊಂಡ ಆಯೋಗ ಚರ್ಚೆಗಳು

ಹಿಂದಿನ ಸಂಚಿಕೆಯಲ್ಲಿ ವರದಿ ಮಾಡಿದಂತೆ ಸಮ್ಮೇಳನದಲ್ಲಿ ಪ್ರಸಕ್ತ ಸಂದರ್ಭದ ಮೂರು ಪ್ರಮುಖ ಪ್ರಶ್ನೆಗಳ ಆಮೂಲಾಗ್ರ ಚರ್ಚೆಗೆ ಮೂರು ಆಯೋಗಗಳನ್ನು ರಚಿಸಲಾಗಿತ್ತು. ಅವುಗಳ ಇನ್ನಷ್ಟು ವಿವರಗಳು ಹೀಗಿವೆ.

1) ಜಾಗತೀಕರಣ, ಔದ್ಯೋಗಿಕ ಸಂಬಂಧಗಳು ಮತ್ತು ಕಾರ್ಮಿಕ ಕಾನೂನುಗಳ ಸುಧಾರಣೆ – ಈ ಆಯೋಗದ ಅಧ್ಯಕ್ಷತೆ ಸೌಂದರ್ ರಾಜನ್, ವರದಿ ಮಂಡನೆ ಸ್ವದೇಶ್ ದೇವ್‌ರಾಯ್,
2) ಕೋಮುವಾದ ಮತ್ತು ಕಾರ್ಮಿಕ ವರ್ಗದ ಪಾತ್ರ – ಈ ಆಯೋಗದ ಅಧ್ಯಕ್ಷತೆ ಎಲರಾಂ ಕರೀಂ, ವರದಿ ಮಂಡನೆ ಕೆ.ಹೇಮಲತಾ,
3) ಕಾರ್ಮಿಕ–ರೈತ ಮೈತ್ರಿ – ಈ ಆಯೋಗದ ಅಧ್ಯಕ್ಷತೆ ಮಾಲತಿ ಚಿಟ್ಟಿಬಾಬು ಮತ್ತು ದೀಪಕ್ ದಾಸ್‌ಗುಪ್ತ, ವರದಿ ಮಂಡನೆ ಕಾಂ.ಎ.ಕೆ.ಸಿಂಧು

ಈ ಮೂರು ಆಯೋಗಗಳಿಗೂ 24 ರಾಜ್ಯಗಳಿಂದ ಬಂದಂತಹ 2000 ಪ್ರತಿನಿಧಿಗಳನ್ನು ವಿಂಗಡಿಸಲಾಗಿತ್ತು. ಈ ಮೂರು ಆಯೋಗಗಳಲ್ಲಿಯೂ 191 ಜನ ಸಂಗಾತಿಗಳು ಚರ್ಚೆಯಲ್ಲಿ ಪಾಲ್ಗೊಳ್ಳಿಸುವ ಮೂಲಕ ಸಿಐಟಿಯು ತನ್ನ ತೀರ್ಮಾನದ ಹಂತದಲ್ಲಿ ಪ್ರತಿನಿಧಿಗಳನ್ನು ಪಾಲ್ಗೊಳ್ಳಿಸುವ ತನ್ನ ಪ್ರಜಾಸತ್ತಾತ್ಮಕ ನಿಲುಮೆಯನ್ನು ಎತ್ತಿಹಿಡಿದಿದೆ.

ಅಧಿಕಾರಸ್ಥರ ದುಷ್ಟಕೂಟದ ಅಕ್ರಮ ಬಯಲು........ ಪುಟ 8 ರಿಂದ

ತಿರಸ್ಕರಿಸಿತಲ್ಲದೇ ಸದರಿ ಜಮೀನನ್ನು ಒಪ್ಪಂದದಂತೆ ಗುರತಿಸಲಾದ ಕಾರ್ಯಕ್ರಮಕ್ಕೆ ಮಾತ್ರವೇ ಬಳಸಿಕೊಳ್ಳಬೇಕೆಂದು ತಾಕೀತು ಮಾಡಿದೆ.

3. ವಾಸ್ತವವಾಗಿ ಸಚಿವ ಸಂಪುಟವು ಚತುಷ್ಪಥ ರಸ್ತೆಗೆ 5119 ಎಕರೆಯನ್ನು ಮಾತ್ರವೇ ಅನುಮೋದಿಸಿದೆ. ಇದನ್ನು ಭಾರತ ಫೋರ್ಜ ಲಿಮಿಟೆಡ್‌ನ ಸರ್ವೇಕ್ಷಣೆಯ ಪ್ರಕಾರವೇ ಒಪ್ಪಲಾಗಿತ್ತು. ಆದರೆ ಅದು ಆನಂತರ ಸಚಿವ ಸಂಪುಟದ ಒಪ್ಪಿಗೆಯನ್ನು ಪಡೆಯದೇ 6,999 ಎಕರೆಯೆಂದು ಬದಲಾವಣೆಗೊಂಡಿದೆ. ಆಮೂಲಕ ಕಂಪೆನಿಯು 1,880 ಎಕರೆಯಷ್ಟು ಹೆಚ್ಚುವರಿ ಭೂಮಿ ಪಡೆದಿದೆ. ಈ ಲೋಪಕ್ಕೆ ಮುಖ್ಯವಾಗಿ ಅಂದಿನ ಲೋಕೋಪಯೋಗಿ ಇಲಾಖೆಯ ಕಾರ್ಯದರ್ಶಿ ಸಿ ಆರ್ ರಮೇಶ್ ಕಾರಣವೆಂದು ಗುರುತಿಸಿದ ಸದನ ಸಮಿತಿ ಅವರ ಮೇಲೆ ಕಾನೂನು ಕ್ರಮವಹಿಸಲು ಸೂಚಿಸಿದೆ. ಅಲ್ಲದೇ, ನೈಸ್ ಕಂಪೆನಿಯು ಟೋಲ್ ರಸ್ಥೆ ನಿರ್ಮಾಣಕ್ಕೆ 6999 ಎಕರೆ ಸಾಲದೆಂದು ಮತ್ತು ತನಗೆ ಒಟ್ಟು 9,468 ಎಕರೆ ಜಮೀನಿನ ಅವಶ್ಯಕತೆಯಿದೆಯೆಂದು ಅದಕ್ಕಾಗಿ ಹೆಚ್ಚುವರಿ ಜಮೀನು ನೀಡುವಂತೆ ಪ್ರಸ್ತಾಪ ಸಲ್ಲಿಸಿರುವುದನ್ನು ಗಮನಿಸಿದೆ.

4.ಕ್ರಿಯಾ ಒಪ್ಪಂದದಂತೆ ಕಂಪೆನಿಗೆ 13,237 ಎಕರೆ ಜಮೀನು ಸ್ವಾಧೀನ ಮಾಡಿಕೊಡಬೇಕಾದ ಕೆ-ಐಎಡಿಬಿ 23,846 ಎಕರೆ ಜಮೀನು ಸ್ವಾಧೀನ ಮಾಡಲು ಅಕ್ರಮ ಒಪ್ಪಂದ ಮಾಡಿಕೊಂಡು ಜಾರಿಗೊಳಿಸಲು ಮುಂದಾಗಿದೆ. ಒಟ್ಟಾರೆ ಕಂಪೆನಿಗೆ ಅಕ್ರಮದ ಮೂಲಕ 11,660 ಎಕರೆ ಹೆಚ್ಚುವರಿಯಾಗಿ ನೀಡಲಾಗಿದ್ದು ಸದರಿ ಹೆಚ್ಚುವರಿ ಜಮೀನನ್ನು ವಾಪಾಸು ಪಡೆಯುವಂತೆ ಸರಕಾರಕ್ಕೆ ಶಿಫಾರಸು ಮಾಡಿದೆ. ಈ ಅಕ್ರಮದಲ್ಲಿ ಭಾಗಿಯಾದಕೆಐಎಡಿಬಿ ಮತ್ತು ಇತರೇ ಇಲಾಖೆಗಳ ಅಧಿಕಾರಿಗಳ ಮೇಲೆ ಕಾನೂನಿನ ಕ್ರಮವಹಿಸಲು ಸೂಚಿಸಿದೆ. ಕೆಐಎಡಿಬಿ, ನೈಸ್ ಕಂಪೆನಿಯಿಂದ ಭೂಪರಿಹಾರ ಮೊತ್ತದ ಠೇವಣಿಯನ್ನು ಪಡೆಯದೇ ಹೆಚ್ಚುವರಿ 7,709 ಎಕರೆ ಜಮೀನಿಗೆ ಅಧಿಸೂಚನೆ ಹೊರಡಿಸಿರುವುದನ್ನು ಆ ಮೂಲಕ ಅದರ ಶಾಮೀಲಾತಿಯ ಪ್ರಮಾಣವನ್ನು ಎತ್ತಿ ತೋರಿದೆ. ಅದೇ ರೀತಿ, ತನ್ನ ಸುಪರ್ಧಿಗೆ ಪಡೆದ ಜಮೀನಿನಲ್ಲಿ ಕಂಪೆನಿಯು ಅಕ್ರಮವಾಗಿ ಅನಧಿಕೃತ ಗಣಿಗಾರಿಕೆಗೆ ಉತ್ತೇಜನ ನೀಡಿದ್ದರಿಂದ ಸರಕಾರದ ಬೊಕ್ಕಸಕ್ಕೆ ಸುಮಾರು 250 ಕೋಟಿ ರಾಜಧನ ತಪ್ಪಿ ಹೋದುದರ ಕಡೆಗೆ ಸರಕಾರದ ಗಮನ ಸೆಳೆದಿದೆ.

5. ಯೋಜನೆಯನ್ನು ನಿರ್ಮಿಸಿ, ಕಂಪೆನಿಯ ಸ್ವಂತ ಸುಪರ್ಧಿಯಲ್ಲಿ ಮುನ್ನಡೆಸಿ, 30 ವರ್ಷಗಳ ನಂತರ ವಾಪಾಸು ನೀಡುವ ಒಪ್ಪಂದವಿದ್ದರೂ, ಈ ಸಂಬಂಧದ ಜಮೀನನ್ನು 2002ರಲ್ಲಿ ಮಾಡಿಕೊಳ್ಳಲಾದ ತ್ರಿಪಕ್ಷೀಯ ಒಪ್ಪಂದದ ಮೂಲಕ ಮಾರಾಟ ಮಾಡಲು ಸೌಲಭ್ಯವನ್ನು ಅನಧಿಕೃತವಾಗಿ ಕಲ್ಪಿಸಿಕೊಂಡು ಆಮೂಲಕ 4,956 ಕೋಟಿ ರೂಪಾಯಿ ಮೌಲ್ಯದ ವಹಿವಾಟನ್ನು ಜಂಟಿ ಅಡಮಾನ ಮತ್ತು ಮಾರಾಟದ ಮುಖಾಂತರ ಜಾರಿಗೊಳಿಸಿರುವುದು ಆತಂಕಕಾರಿಯಾಗಿದೆ. ಇಲ್ಲಿ ಗಮನಿಸಬೇಕಾದ ಅಂಶವೆಂದರೇ ಮೂಲ ಯೋಜನಾ ವೆಚ್ಚವೇ 1,272 ಕೋಟಿ ರೂಗಳಾಗಿರುವುದು. ಈ ಕುರಿತು ಕ್ರಮವಹಿಸಬೇಕಾಗಿದೆ.

6.ಕ್ರಿಯಾ ಯೋಜನೆಯ ಮೂಲ ಒಪ್ಪಂದ ಹಾಗೂ ತಾಂತ್ರಿಕ ಮಾನದಂಡಗಳಿಗೆ ಅನುಗುಣವಾಗಿ ನಿರ್ವಹಣೆ ಮಾಡದೇ, ಸಿಮೆಂಟ್ ರಸ್ತೆ ಬದಲಿಗೆ ಒಪ್ಪಂಧ ಮೀರಿ, ಡಾಂಬಾರು ರಸ್ತೆ ನಿರ್ಮಿಸಿ ಅನಧಿಕೃತವಾಗಿ 2008 ರಿಂದ ಸುಮಾರು 1350 ಕೋಟಿ ಟೋಲು ಸಂಗ್ರಹಿಸಲಾಗಿದೆ. ಇದರಲ್ಲಿ ಕಂಪೆನಿಗಳಿಗೆ ಅನುಕೂಲ ಮಾಡಿಕೊಡುವ ಉದ್ದೇಶದಿಂದ 2012 ರಲ್ಲಿ ತಾಂತ್ರಿಕ ಮಾನದಂಡಗಳನ್ನು ಸಡಿಲಿಸಿರುವುದನ್ನು ಎತ್ತಿ ತೋರಿಸಿದೆ. ಅದೇ ರೀತಿ ಅಕ್ರಮವಾಗಿ ವಸೂಲಿ ಮಾಡಲಾಗಿರುವ ಈ ಟೋಲ್ ಮೊತ್ತವನ್ನು, ರಾಜ್ಯ ಸರಕಾರ ಕೂಡಲೇ ಕಂಪೆನಿಯಿಂದ ವಶಪಡಿಸಿಕೊಳ್ಳಲು ಸೂಚಿಸಿದೆ.

7.ಕ್ರಿಯಾ ಒಪ್ಪಂದದ ಅನುಗುಣವಾಗಿ ಹಲವಾರು ರಿಯಾಯಿತಿಗಳನ್ನು ರಾಜ್ಯ ಸರಕಾರ ನೀಡಿದೆ. ಅದರಲ್ಲಿ ನೋಂದಣಿ ಹಾಗೂ ಮುದ್ರಾಂಕ ಶುಲ್ಕವೂ ಒಂದಾಗಿದೆ. ವಾಸ್ತವವಾಗಿ ಈ ರಿಯಾಯಿತಿಯು ಒಪ್ಪಂದದಂತೆ ಅದು ಕೇವಲ 5,688 ಎಕರೆಗೆ ನೀಡಬೇಕಾಗಿದ್ದಲ್ಲಿ, ಕೆಐಎಡಿಬಿಯು ಒಟ್ಟು 14,337 ಎಕರೆಗೆ ನೀಡಿ ಲೋಪವೆಸಗಿ ಸರಕಾರ ಬೊಕ್ಕಸಕ್ಕೆ ನಷ್ಟ ಉಂಟುಮಾಡಿದೆ.

8. ಕ್ರಿಯಾ ಒಪ್ಪಂದದಲ್ಲಿ ಒಟ್ಟು 22 ಅಂಶಗಳಿದ್ದು ಅದರಲ್ಲಿ ಸುಮಾರು 16 ಅಂಶಗಳನ್ನು ನೈಸ್ ಕಂಪೆನಿ ಉಲ್ಲಂಘಿಸಿದೆ. 19 ವರ್ಷಗಳಲ್ಲಿ ಬೆಂಗಳೂರು ಅಥವಾ ಬೆಂಗಳೂರು ನಗರ ಸಮುಚ್ಛಯ ಹೊರತು ಪಡಿಸಿ ಇತರೆಡೆ ಯಾವುದೇ ಪ್ರಗತಿ ಇಲ್ಲವಾಗಿದೆ. ಈ ಉಲ್ಲಂಘನೆಯಲ್ಲಿ ಸರಕಾರ ಅಥವಾ ಪಾಲುದಾರ ಕಂಪೆನಿಗಳ ಪಾತ್ರವಿರುವುದನ್ನು ಸಿಬಿಐ, ಜಾರಿ ನಿರ್ದೇಶನಾಲಯ, ಕೇಂದ್ರ ಜಾಗೃತಿ ಆಯೋಗ ಮುಂತಾದ ತತ್ಸಮಾನ ಸಂಸ್ಥೆಗಳ ಮೂಲಕ ತನಿಖೆ ನಡೆಸಿ ಕ್ರಮವಹಿಸಬೇಕು.

9. ನೈಸ್ ಯೋಜನೆಗೆ ಸಂಬಂಧಿಸಿದ ಒಟ್ಟು 439 ಕಡತಗಳ ಪೈಕಿ 137 ಕಡತಗಳು ನಾಪತ್ತೆಯಾಗಿದ್ದರೆ, 102 ಕಡತಗಳನ್ನು ನಾಶ ಮಾಡಲಾಗಿದೆ. ಕಂಪ್ಯೂಟರ್‌ನಲ್ಲಿ ದಾಖಲಿಸಿದ್ದ 13 ಕಡತಗಳು ನಾಪತ್ತೆಯಾಗಿರುವುದು ಆಶ್ಚರ್ಯಕರ. ಈ ಕುರಿತು ತನಿಖೆ ನಡೆಸಿ ತಪ್ಪಿತಸ್ಥರ ಮೇಲೆ ಕಾನೂನಿನ ಕ್ರಮಜರುಗಿಸಲು ಸೂಚಿಸಿದೆ.

10. ಅಂದಿನ ನಗರಾಭಿವೃದ್ಧಿ ಸಚಿವರು ಮತ್ತು ಲೋಕೋಪಯೋಗಿ ಸಚಿವರು ಹಾಗೂ ಕೈಗಾರಿಕಾ ಸಚಿವರು ಈ ಮೂಲ ಒಪ್ಪಂದಗಳ ಬದಲಾವಣೆಗಳಲ್ಲಿ ಕೈ ಆಡಿಸಿರುವ ಕುರಿತು ಉಲ್ಲೇಖಿಸಲಾಗಿದೆ.

11. ಕ್ರಿಯಾ ಒಪ್ಪಂದಗಳ ಉಲ್ಲಂಘನೆಗೆ ಅವಕಾಶ ನೀಡುವ, ಒಪ್ಪಂದದ ಅಂಶಗಳಲ್ಲಿ ಬಳಸಲಾದ ಕೆಲ ಪದಗಳ ಬಳಕೆಯನ್ನು ಆಕ್ಷೇಪಿಸಿದೆ. ಇಂತಹ ಸೂಕ್ಷ್ಮಗಳು ಒಪ್ಪಂದದ ಉಲ್ಲಂಘನೆಗೆ ಸಹಕಾರಿಯಾಗಿರುವುದರ ಕಡೆ ಗಮನ ಸೆಳೆದಿದೆ.

ಒಟ್ಟಾರೇ,

ಈ ಪ್ರಕರಣದಲ್ಲಿ, ಅದಾಗಲೇ ಸಾರ್ವಜನಿಕರು ಗುರುತಿಸಿ ಸರಕಾರದ ಮೇಲೆ ಒತ್ತಡ ಹೇರಿದಂತೆ, ಯೋಜನೆಯನ್ನು ಒಪ್ಪಂದದಂತೆ ಜಾರಿಗೊಳಿಸುವುದಕ್ಕಿಂತ ಮುಖ್ಯವಾಗಿ, ನೈಸ್ ಕಂಪೆನಿಗೆ ದುಬಾರಿ ಬೆಲೆಯ ಭೂಮಿಯನ್ನು ಪಡೆದು ರಿಯಲ್‌ಎಸ್ಟೇಟ್ ಮಾಡುವ ಇಂಗಿತವಿರುವ ಅಂಶವನ್ನು ಸದನ ಸಮಿತಿಯು ಕಂಡಿದೆ. ನೈಸ್ ಕಂಪೆನಿಯು ಮೂಲ ಒಪ್ಪಂದವನ್ನು ಮಾತ್ರವೇ ಉಲ್ಲಂಘಿಸಿಲ್ಲ, ಅದು ಶ್ರೀ ಸೋಮಶೇಖರರೆಡ್ಡಿಯ ದಾವೆಯ ಪ್ರಕರಣದಲ್ಲಿ ನೀಡಲಾದ ಉಚ್ಛ ಹಾಗೂ ಸರ್ವೋಚ್ಛ ನ್ಯಾಯಾಲಯದ ಆದೇಶಗಳನ್ನು ಉಲ್ಲಂಘಿಸಿರುವುದನ್ನು ಸದನ ಸಮಿತಿ ವರದಿಯಲ್ಲಿ ಬಯಲುಗೊಳಿಸಿದೆ.

ಇಷ್ಟು ಮಾತ್ರವೇ ಅಲ್ಲ!

ಈ ಕಂಪೆನಿಯು ಮತ್ತು ಸರಕಾರದ ಅಧಿಕಾರಾರೂಢಾ ರಾಜಕಾರಣಿಗಳು, ಅಧಿಕಾರಿಗಳ ಶಾಮೀಲಾತಿಯ ದುಷ್ಟಕೂಟ ಸರಕಾರವನ್ನು ವಂಚಿಸಿ ಸಾರ್ವಜನಿಕ ಸಂಪನ್ಮೂಲದ ಕೊಳ್ಳೆಗೆನಿಂತುದು ಮಾತ್ರವೇ ಅಲ್ಲಾ, ವಾಸ್ತವವಾಗಿ, ರೈತರ ಪಟ್ಟಾ ಜಮೀನುಗಳು ಮತ್ತು ಸಾರ್ವಜನಿಕರ ಮನೆಗಳು ಹಾಗೂ ಆಸ್ತಿ ಪಾಸ್ತಿಗಳ ಕೊಳ್ಳೆಯಲ್ಲಿ ತೊಡಗಿಸಿಕೊಂಡಿರುವುದು ಈಗಾಗಲೇ ಬಯಲಾಗಿದೆ. ರೈತರ ಜಮೀನುಗಳಿಗೆ ತಲಾ ಎಕರೆಗೆ ಈಗಾಗಲೇ 80 ಲಕ್ಷಗಳನ್ನು ಮಂಡ್ಯ ಜಿಲ್ಲೆಯ ರೈಲ್ವೇ ಭೂಸ್ವಾಧೀನದಲ್ಲಿ ನಿಗದಿಸಿದ್ದರೂ, ಸದರಿ ಜಮೀನುಗಳ ಮಾರುಕಟ್ಟೆ ದರವು ಸುಮಾರು ಒಂದು ಕೋಟಿ ರೂಗಳಷ್ಟಾಗಿದ್ದರೂ, ಇಲ್ಲಿ ನೀಡಲಾದ ಬೆಲೆ ಕೇವಲ 5 ಲಕ್ಷದಿಂದ 7 ಲಕ್ಷ ಮಾತ್ರವೇ ಆಗಿದೆ. ಇದರಿಂದ, ಈ ಭಾಗದ ರೈತರಿಗೆ ಈಗಾಗಲೇ ತಲಾ ಎಕರೆಗೆ ಸರಿ ಸುಮಾರು ಕನಿಷ್ಠವೆಂದರೂ 50 ಲಕ್ಷ ರೂಗಳಷ್ಟು ನಷ್ಟವಾಗಿದೆ.

ವಸತಿ ಸಮುಚ್ಛಯ ನಿರ್ಮಾಣದಲ್ಲಿ ಭೂ ಸಂತ್ರಸ್ಥರಿಗೆ ಕನಿಷ್ಠ ಶೇ 40 ರಷ್ಟು ಅಭಿವೃದ್ಧಿ ಪಡಿಸಿದ ನಿವೇಶನ ನೀಡಲು ಅವಕಾಶಗಳಿದ್ದರೂ ಅದನ್ನು ಪರಿಗಣಿಸಿಲ್ಲದಿರುವುದು ಸ್ಪಷ್ಟವಿದೆ.

ಹಾಲಿ ಸಚಿವರಾದ ಡಿ.ಕೆ ಶಿವಕುಮಾರ್ ಮತ್ತು ಎಲ್‌ಆರ್ ಶಿವರಾಮೇಗೌಡರು ತಮ್ಮ ಬೆಲೆ ಬಾಳುವ ಜಮೀನುಗಳನ್ನು ಉಳಿಸಿಕೊಳ್ಳುವ ಮತ್ತು ಮತ್ತಷ್ಟು ಆ ಜಮೀನುಗಳಿಗೆ ಭಾರೀ ಬೆಲೆಯನ್ನು ತಂದುಕೊಳ್ಳಲು ಒಪ್ಪಂದವನ್ನು ಉಲ್ಲಂಘಿಸಿ, ರಸ್ಥೆ ಹಾದು ಹೋಗುವ ಮಾರ್ಗವನ್ನು ಬದಲಿಸಲು ಕ್ರಮವಹಿಸಿದ್ದಾರೆಂಬ ಆರೋಪವು ಇವರುಗಳ ಮೇಲಿದೆ. ಮಾತ್ರವಲ್ಲಾ, ಶ್ರೀ ಎಸ್ ಎಂ ಕೃಷ್ಣರ ಸರಕಾರವೂ ಸೇರಿ ಆನಂತರ ಬಂದ ಎಲ್ಲ ಸರಕಾರಗಳು ಒಪ್ಪಂದವನ್ನು ಉಲ್ಲಂಘಿಸಿ ಹೆಚ್ಚುವರಿ ಜಮೀನು ನೀಡಲು ತುದಿಗಾಲ ಮೇಲಿದ್ದವೆಂಬ ಆರೋಪಗಳಿವೆ. ಇದರ ಜೊತೆ ನೈಸ್ ಕಂಪೆನಿಯ ಅಶೋಕ್ ಖೇಣಿಯ ಭೂ ಮಾಫಿಯಾ ಪಟಾಲಂ ರೈತರನ್ನು ಬೆದರಿಸಿ ಭೂಮಿಯನ್ನು ಅಗ್ಗ ದರಕ್ಕೆ ಪಡೆದು ಅಪಾರ ಲಾಭಕ್ಕೆ ಮಾರಾಟ ಮಾಡಿದ ದೌರ್ಜನ್ಯವು ವ್ಯಾಪಕವಾಗಿದೆ. ಈ ಎಲ್ಲವೂ ಸಮಗ್ರವಾಗಿ ತನಿಖೆಗೊಳಪಟ್ಟು ಅನ್ಯಾಯಕ್ಕೊಳಗಾದ ಜನತೆಗೆ ನ್ಯಾಯ ದೊರಕಿಸಿಕೊಡುವುದು ಸರಕಾರದ ಕರ್ತವ್ಯವಾಗಿದೆ.

ರೈತರ ಮೇಲೆ ಯಡ್ಡಿ ಪೊಲೀಸರ ಲಾಠಿ ಬೂಟಿನ ನರ್ತನ

ವೆಂಕಟಾಚಲಯ್ಯ: ನೈಸ್ ಕಂಪನಿಗೆ ಹೆಚ್ಚುವರಿ ಭೂಮಿ ಕೊಡುವ ಸರ್ಕಾರದ ಧೋರಣೆ ವಿರುದ್ಧ ನಿರಂತರವಾಗಿ ಹೋರಾಟ ನಡೆಸುತ್ತಲೆ ಬರಲಾಗಿದೆ. ಇದೀಗ ಹೊಸೂರು ರಸ್ತೆಯಿಂದ ನೆಲಮಂಗಲದವರೆಗೆ ರಸ್ತೆ ನಿರ್ಮಾಣಕ್ಕೆಂದು 776 ಎಕರೆ ಹೆಚ್ಚುವರಿ ಭೂಮಿ ಕೊಡಲು ಹೊರಟಿರುವ ವಿವಾದದ ಸಂಬಂಧ ಸುಪ್ರೀಂಕೋರ್ಟ್ ಮುಖ್ಯಮಂತ್ರಿಗಳ ನೇತೃತ್ವದಲ್ಲಿ ರೈತರು, ರೈತ ಸಂಘಗಳ ಪ್ರತಿನಿಧಿಗಳನ್ನು ಒಳಗೊಂಡ ಉನ್ನತಮಟ್ಟದ ಸಭೆ ನಡೆಸಿ ವರದಿಕೊಡುವಂತೆ ಸೂಚಿಸಿತ್ತು. ಈ ವರದಿ ನೀಡಲು ಜೂನ್ 29, 2010 ಕಡೆಯ ದಿನಾಂಕವಾಗಿತ್ತು. ಈ ಹಿನ್ನೆಲೆಯಲ್ಲಿ ರಾಜ್ಯದ ಮುಖ್ಯಮಂತ್ರಿ ಯಡಿಯೂರಪ್ಪನವರು ತಮ್ಮ ಗೃಹ ಕಛೇರಿ ಕೃಷ್ಣಾದಲ್ಲಿ ಗುಟ್ಟಾಗಿ ನೈಸ್ ಕಂಪನಿ ಖೇಣಿ ಮತ್ತಿತರರೊಂದಿಗೆ ಸಭೆ ಆಯೋಜಿಸಿಕೊಂಡಿದ್ದರು. ರೈತರಿಗೆ ಹಾಗೂ ರೈತ ಪ್ರತಿನಿಧಿಗಳಿಗೆ ಕರೆಯದೇ ಈ ಸಭೆ ನಡೆಯುತ್ತಿತ್ತು. ಬಿಜೆಪಿ ಸರ್ಕಾರದ ಇಂತಹ ರೈತ ದ್ರೋಹಿ ಧೋರಣೆಯನ್ನು ಪ್ರತಿಭಟಿಸಲು ರೈತರು ಮುಂದಾದಾಗ ಅವರನ್ನು ದಾರಿಯಲ್ಲೇ ಬಂಧಿಸಲಾಯಿತು. ಮಹಾತ್ಮಗಾಂಧಿ ಪ್ರತಿಮೆಯಿಂದ ಶಿವಾನಂದ ವೃತ್ತದ ಕಡೆಗೆ ಬಂದ ಪ್ರತಿಭಟನಾಕಾರರನ್ನು ಪೊಲೀಸರು ಬಂಧಿಸಿದ್ದಾರೆ. ಅದು ಗೊತ್ತಾದಾಗ ಬಂಧಿತ ರೈತರನ್ನು ಬಿಡುಗಡೆ ಮಾಡಬೇಕೆಂದು ಹೆಮ್ಮಿಗೆಪುರದ ಬಳಿಯಲ್ಲಿ ನೈಸ್ ರಸ್ತೆಯ ಮೇಲೆ ರಸ್ತೆ ತಡೆ ನಡೆಸಲಾಯಿತು.

ಈ ಸಂದರ್ಭದಲ್ಲಿ ರಾಮನಗರ ಡಿವೈಎಸ್ಪಿ ದೇವರಾಜ್, ಹಾರೋಹಳ್ಳಿ ಸರ್ಕಲ್ ಇನ್ಸ್ಪೆಕ್ಟರ್ ಮಹದೇವ್, ತಲಘಟ್ಟಪುರ ಸರ್ಕಲ್ ಇನ್ಸ್ಪೆಕ್ಟರ್ ಕುಮಾರ್ ಇವರೆಲ್ಲಾ ರೈತರ ಮೇಲೆ ವಿಪರೀತ ದೌರ್ಜನ್ಯ ಮಾಡಿದರು. ಅವರು ಮೊದಲು ನಮ್ಮನ್ನು ಬಂಧಿಸಿದರು. ನನ್ನನ್ನು ಎಳೆದುಕೊಂಡು ಹೋಗುವಾಗ ವಾಹನಕ್ಕೆ ತಲೆ ಬಡಿದು ನನಗೆ ಪ್ರಜ್ಞೆ ತಪ್ಪಿ ಹೋಯಿತು. ಪೊಲೀಸರು ಅತ್ಯಂತ ಅಮಾನುಷವಾಗಿ ವರ್ತಿಸಿದ್ದಾರೆ. ರಸ್ತೆ ಬದಿಯಲ್ಲಿದ್ದ ನೈಸ್ ಕಂಪನಿಗೆ ಸೇರಿದ ಕಬ್ಬಿಣದ ಸರಳುಗಳನ್ನು ತೆ-ಗೆದುಕೊಂಡು ರೈತರನ್ನು ಹಿಗ್ಗಾಮುಗ್ಗಾ ಥಳಿಸಿದ್ದಾರೆ. ಒಟ್ಟು 28 ಜನರನ್ನು ಬಂಧಿಸಿದ್ದಾರೆ. 12 ಜನ ಮಹಿಳೆ0ಯರು 16 ಜನ ಪುರುಷರು. ಸಾರ್ವಜನಿಕ ಆಸ್ತಿಪಾಸ್ತಿಗೆ ಹಾನಿ, ದೊಂಬಿ, ದೇಶದ್ರೋಹ ಮುಂತಾದ ಆರೋಪ ಹೊರಿಸಿ 9 ಕೇಸುಗಳನ್ನು ಹಾಕಿದ್ದಾರೆ.

ವೆಂಕಟರಮಣಪ್ಪ, ಚನ್ನರಾಯಪ್ಪ, ಹನುಮಯ್ಯ ಹೆಚ್.ವಿ.ವೆಂಕಟೇಶ್, ನರಸಿಂಹಯ್ಯ ಮುಂತಾದ ರೈತರನ್ನು ಹಿಡಿದು, ಮನಸ್ಸಿಗೆ ಬಂದಂತೆ ಬಡಿದಿದ್ದಾರೆ. ಗೌರಮ್ಮ ಎಂಬವವರಿಗೆ ಸೀರೆ ಕಳಚಿದರೂ ಬಿಡದೇ ಕ್ರೂರವಾಗಿ ಥಳಿಸಿದ್ದಾರೆ. ಮುಖ್ಯಮಂತ್ರಿ ಯಡಿಯೂರಪ್ಪ ಮತ್ತು ಪೊಲೀಸರು ನೈಸ್ ಕಂಪನಿಯ ಖೇಣಿಯೊಂದಿಗೆ ಶಾಮೀಲಾಗಿದ್ದಾರೆ. ನೈಸ್ ಕಂಪನಿಯ ಲೂಟಿಯ ವಿರುದ್ಧ ಪ್ರತಿಭಟನೆಯನ್ನು ಹತ್ತಿಕ್ಕಲು ರೈತರ ಮೇಲೆ ಕ್ರೌರ್ಯ ತೋರಿಸುತ್ತಿದ್ದಾರೆ.

ಬೂಟುಗಾಲು ತಲೇ ಮೇಲಿಟ್ಟರು

ನೈಸ್ ರಸ್ತೆಗಾಗಿ ಭೂಮಿ ಕಳಕೊಂಡ ಮಹಿಳೆ ಸೇತುವೆ ಕಟ್ಟುವ ರಾಡ್ನಿಂದ ಹೊಡೆದರು.ಕೆಳಗೆ ಕೆಡವಿ ತುಳಿದರುನಾವು ಶಾಂತಿಯುತವಾಗಿ ಪ್ರತಿಭಟನೆ ಮಾಡುತ್ತಿದ್ದೋ. ಗಲಾಟೆ ಮಾಡಿಸಬೇಕಂತಲೇ ಪೋಲಿಸರು ಹೊಡೀರಿ, ಹೊಡೀರಿ ಅಂತ ಬಂದು ನುಗ್ಗಿ ಹೊಡೆದರು. ಸೇತುವೆ ಕಟ್ಟೋದಕ್ಕೆ ಇಟ್ಟಿದ್ದ ಕಬ್ಬಿಣ ರಾಡ್ ತಗೊಂಡು ನನಗೆ ಹೊಡೆದರು. ಬೂಟುಕಾಲಲ್ಲಿ ಒದ್ದರು. ನನಗೆ ಬಿ.ಪಿ. ಏರುಪೇರಾಗಿ, ಏಟಾಗಿ ನಾನು ಕೋಣನಕುಂಟೆ ಕ್ರಾಸ್ನ ಸಿದ್ದಲಿಂಗ0ಯ್ಯ ಆಸ್ಪತ್ರೆಯಲ್ಲಿದ್ದೆ. ಡ್ರಿಪ್ಸ್ ಹಾಕಿದ್ದರು. ಡಾಕ್ಟರ್ ಇರಲಿಲ್ಲ. ಆಸ್ಪತ್ರೆಗೆ ನುಗ್ಗಿದ ಪೊಲೀಸರು ತಾವೇ ಡ್ರಿಪ್ಸ್ ಕಿತ್ತು ಹಾಕಿ ನನ್ನನ್ನು ಇಬ್ಬರು ಪೊಲೀಸರು ಸೇರಿ ಎತ್ತಿ-ಕೊಂಡು ಬಂದರು. ಜೈಲು ಸೇರುವಂತೆ ಮಾಡಿದ್ರು.- ಚನ್ನರಾಯಪ್ಪ

ನನ್ನನ್ನು 25 ಜನ ಪೊಲೀಸರು ಸುತ್ತುವರಿದು ಹೊಡೆದರು. ಕೆಳಕ್ಕೆ ಕೆಡವಿ ಕೊಂಡು ತುಳಿದರು. ಒದೀರಿ ಈ ನನ್ಮಗನ್ನ ಒದೀರಿ ಅಂತ ಹೊಡೆದರು. ವ್ಯಾನ್ ಒಳಗೆ ಸೈತಾ ಹೊಡೆದರು.-ಹನುಮಯ್ಯ.

ನೈಸ್ ಕಂಪನಿ ರಸ್ತೆಗೆ ನಮ್ಮದೂ ಜಮೀನು ಹೋಗಿದೆ. ಭಾನುವಾರ ಸಾಯಂಕಾಲ ಪೊಲೀಸರು ನಮ್ಮ ಹುಡುಗರನ್ನು ಹಿಡಿದುಕೊಂಡು ಹೊಡೆಯುತ್ತಿರುವುದನ್ನು ನೋಡಿ ನಾನು ನಮ್ಮ ಹುಡುಗರನ್ನು ಯಾಕೆ ಹೊಡಿತೀರಾ ಬಿಡಿ ಎಂದು ಬಿಡಿಸಲು ಹೋದೆ. ಹೊಡೆಯುತ್ತಿದ್ದ ಪೊಲೀಸರನ್ನು ನಾನು ಸ್ವಲ್ಪ ತಳ್ಳಿದೆ. ಅಷ್ಟಕ್ಕೆ ಪೊಲೀಸರು ಏಯ್ ಈ ಮುಂಡೇನ ಕಾರಿಗೆ ಎತ್ತಕ್ಕೊಳ್ರೋ? ಎತ್ತಾಕ್ಕೊಳ್ರೋ ಅಂತ ಚೆನ್ನಾಗಿ ಹೊಡೆದರು. ಸೀರೆ ಬಿಚ್ಚಿ ಹೋದರು ಬಿಡಲಿಲ್ಲ. ಆಮೇಲೆ ಪೊಲೀಸ್ ಸ್ಟೇಷನ್ನಲ್ಲಿ ಬೂಟುಗಾಲನ್ನು ತಲೆ ಮೇಲೆ ಇಟ್ಟು ದೌರ್ಜನ್ಯ ಮಾಡಿದರು. ಇವಳ್ನ ಕರ್ಕೊಂಡು ಹೋಗಿ ಏನ್ಬೇಕೋ ಮಾಡ್ಕೊಳ್ರಿ ಅಂತ ಹೆಂಗಸು ಪೊಲೀಸರೇ ಅಂತಾರೆ. ಆ ಮೇಲೆ ಏನೇನೂ ಕೆಟ್ಟ ಕೆಟ್ಟ ಮಾತಲ್ಲಿ ಸಿಕ್ಕಾಪಟ್ಟೆ ಬೈದರು.- ಗೌರಮ್ಮ

ಪ್ರಧಾನಿಗಳ ನಿರೀಕ್ಷೆಯನ್ನು ಹುಸಿಗೊಳಿಸಿದ ರಿಝರ್ವ್ ಬ್ಯಾಂಕ್ ಪರಾಮರ್ಶೆ

ನೋಟು ನಿಷೇಧದ ನಂತರದ ರಿಝರ್ವ್ ಬ್ಯಾಂಕ್‌ನ ಮೊದಲ 'ಹಣ ಧೋರಣೆಯ ಪರಾಮರ್ಶೆ' ಪ್ರಕಟವಾಗಿದೆ. ಅದು ಪ್ರಧಾನ ಮಂತ್ರಿಗಳು, ಹಣಕಾಸು ಮಂತ್ರಿಗಳಾದಿಯಾಗಿ ನೋಟು ನಿಷೇಧದ 'ಮಿಂಚಿನ ಪ್ರಹಾರ'ದ ಅಭಿಮಾನಿಗಳ ನಿರೀಕ್ಷೆಗಳನ್ನು ಹುಸಿಗೊಳಿಸಿದೆ. ತಮ್ಮ ಈ 'ಪ್ರಹಾರ'ದಿಂದ ಬ್ಯಾಂಕುಗಳ ಸಿಆರ್‌ಆರ್ (ನಗದು ಮೀಸಲು ಅನುಪಾತ) ಉತ್ತಮಗೊಂಡು ವ್ಯವಹಾರಳಿಗೆ ಸಾಲ ನೀಡಲು ಹೆಚ್ಚಿನ ಹಣ ದೊರೆತು ಆರ್ಥಿಕ ಬೆಳವಣಿಗೆಗೆ ಉತ್ತೇಜನೆ ಸಿಗುತ್ತದೆ ಎಂದು ಪ್ರಧಾನ ಮಂತ್ರಿಗಳು ತಮ್ಮ ಕ್ರಮವನ್ನು ಸಮರ್ಥಿಸಿಕೊಳ್ಳುತ್ತ ಹೇಳಿದ್ದರು. ಆದರೆ ರಿಝರ್ವ್ ಬ್ಯಾಂಕಿನ 'ಹಣ ಧೋರಣೆಯ ಸಮಿತಿ'(ಎಂಪಿಸಿ) ಯ ಆರು ಮಂದಿ ಸದಸ್ಯರಲ್ಲಿ ಒಬ್ಬರೂ ಕೂಡ, ರಿಜರ್ವ್ ಬ್ಯಾಂಕ್ ಗವರ್ನರ್ ಕೂಡ ಅದನ್ನು ಒಪ್ಪಿದಂತಿಲ್ಲ. ಏಕೆಂದರೆ ಈ ಸಮಿತಿ ಸಿಆರ್‌ಆರ್ ನ್ನು ಹೆಚ್ಚಿಸದಿರಲು ನಿರ್ಧರಿಸಿದೆ, ಅಲ್ಲದೆ ಈ ನಡುವೆ ನೋಟು ನಿಷೇಧದ ನಂತರ ತಾತ್ಕಾಲಿಕವಾಗಿ ಹೆಚ್ಚಿಸಿದ್ದನ್ನು ಡಿಸೆಂಬರ್ 10ರಿಂದ ಹಿಂತೆಗೆದುಕೊಳ್ಳಲು ನಿರ್ಧರಿಸಿದೆ.

ಅಲ್ಲದೆ ಈ ಬಾರಿ ಖಂಡಿತವಾಗಿಯೂ ಬಡ್ಡಿದರಗಳನ್ನು ಇಳಿಸಲಾಗುವುದು ಎಂಬ ಮಾರುಕಟ್ಟೆ ಮಂದಿಯ ನಿರೀಕ್ಷೆಗಳೂ ಹುಸಿಯಾಗಿವೆ. ದರ ಕಡಿತ ಮಾಡದಿರಲಿ ಎಂಪಿಸಿ ನಿರ್ಧರಿಸಿದೆ.

ಈ ಹಣಕಾಸು ವರ್ಷದ ಬೆಳವಣಿಗೆ ದರ 7.6% ಇರಬಹುದೆಂದು ಅಂದಾಜು ಮಾಡಲಾಗಿತ್ತು. ಆ ಅಂದಾಜನ್ನು 7.1%ಕ್ಕೆ ಇಳಿಸಲಾಗಿದೆ.

ಹಣದುಬ್ಬರ ದರ ಏರುವ ಭಯ ಕೂಡ ರಿಝರ್ವ್ ಬ್ಯಾಂಕಿಗೆ ಇರುವಂತಿದೆ.

ನಗದು ಹೆಚ್ಚಾಗಿ ಬೇಕಾಗುವ ವಲಯಗಳು ಅನಾಣ್ಯೀಕರಣದಿಂದಾಗಿ ಅಲ್ಪಾವಧಿಯಲ್ಲಿ ಅಸ್ತವ್ಯಸ್ತಗೊಳ್ಳಬಹುದು ಎಂಬ ಭಯವೂ ಅದಕ್ಕಿದ್ದಂತಿ-ದೆ.. ಏಕೆಂದರೆ ಇದು ಕ್ಷಣಿಕ ಸಮಸ್ಯೆಯೆಂದು ಹೇಳಿದರೂ, ಅನಾಣ್ಯೀಕರಣದ ಪರಿಣಾಮಗಳು ಸ್ಪಷ್ಟವಾಗಿಲ್ಲ, ಪೂರ್ಣ ಪರಿಣಾಮಗಳಿಗೆ ಕಾದು ನೋಡಬೇಕಾಗಿದೆಯಾದ್ದರಿಂದ ಬಡ್ಡಿದರವನ್ನು ಹಾಗೆಯೇ ಉಳಿಸಿಕೊಳ್ಳಲು ನಿರ್ಧರಿಸಲಾಗಿದೆ ಎಂದು ರಿಝರ್ವ್ ಬ್ಯಾಂಕ್ ಗವರ್ನರ್ ಹೇಳಿದ್ದಾರೆ.

ಅನಾಣ್ಯೀಕರಣದ ವಿಷಯದಲ್ಲಿ ಸರಕಾರಕ್ಕೆ ಶರಣಾಗತನಾದ ರಿಝರ್ವ್ ಬ್ಯಾಂಕ್ ಈಗ ನಿರ್ವಾಹವಿಲ್ಲದೆ ಸೆಟೆದು ನಿಂತಿದೆ, ಆದರೂ ಗವರ್ನರ್‌ರಲ್ಲಿ ಆತ್ಮವಿಶ್ವಾಸ ಇದ್ದಂತಿಲ್ಲ, ಹೆಚ್ಚು ಕಠಿಣ ಪ್ರಶ್ನೆಗಳಿಗೆ ಉತ್ತರಿಸಲು ಅವರು ತಮ್ಮ ಡೆಪ್ಯುಟಿ ಗವರ್ನರ್‌ಗಳಿಗೆ ಹೇಳುತ್ತಿದ್ದರು ಎಂದು ವಿಶ್ಲೇಷಕರೊಬ್ಬರು ಟಿಪ್ಪಣಿ ಮಾಡಿದ್ದಾರೆ (ದಿವೈರ್.ಕಾಂ)

ಡಿಸೆಂಬರ್ 7ರ ವೇಳೆಗೆ ರಿಝರ್ವ್ ಬ್ಯಾಂಕ್ 4ಲಕ್ಷ ಕೋಟಿ ರೂ. ಮೌಲ್ಯದ ನೊಟುಗಳನ್ನು ಪೂರೈಸಿದೆ ಎಂದು ಪ್ರಕಟಿಸಲಾಗಿದೆ. **ರದ್ದಾದ ನೋಟುಗಳ ಒಟ್ಟು ಮೌಲ್ಯ 14.48 ಲಕ್ಷ ಕೋಟಿ ರೂ. ಅಂದರೆ 'ಮಿಂಚಿನ ಪ್ರಹಾರ'ದ ಒಂದು ತಿಂಗಳ ನಂತರವೂ 10.5ಲಕ್ಷ ಕೋಟಿ ರೂ. ಮೌಲ್ಯದ ನೋಟುಗಳು (70%ದಷ್ಟು) ಇನ್ನೂ ಬರಬೇಕಾಗಿದೆ.** ಮೋದಿಯವರು ನವಂಬರ್ 8ರಂದು ಹಾಕಿದ ಗಡುವಿಗೆ ಇನ್ನು ಕೇವಲ 20ದಿನಗಳು ಉಳಿದಿವೆ, ಅಷ್ಟರಲ್ಲಿ ಉಳಿದ 70% ಹಣದಷ್ಟು ನೋಟುಗಳ ಪೂರೈಕೆ-ಯಾಗುತ್ತದೆ ಎಂಬ ನಿರೀಕ್ಷೆ ಈಗ ಯಾರಿಗೂ ಉಳಿದಿಲ್ಲ.

ಈಗ ಕಾನೂನು ಬಾಹಿರವಾಗಿರುವ ನೋಟುಗಳಲ್ಲಿ 11.5ಲಕ್ಷ ಕೋಟಿರೂ.ಗಳಷ್ಟು ಬ್ಯಾಂಕುಗಳಿಗೆ ಹಿಂದಿರುಗಿವೆ. ಅಂದರೆ ಚಲಾವಣೆಯಿಂದ ಹೋದ ಹಣದಲ್ಲಿ ಕೇವಲ ಮೂರನೇ ಒಂದರಷ್ಟು ಮಾತ್ರ ಹೊಸದಾಗಿ ಚಲಾವಣೆಗೆ ಬಂದಿದೆ. 95%ದಷ್ಟು ಎಟಿಎಂಗಳನ್ನು ಹೊಸ ನೋಟುಗಳಿಗೆ ಅನುಗುಣವಾಗಿ ಪುನರ್ರೂಪಿಸಲಾಗಿದ್ದರೂ ಆ ಎಟಿಎಂಗಳಿಗೆ ಪೂರೈಸಲು ರಿಝರ್ವ್ ಬ್ಯಾಂಕಿನ ಬಳಿ ಹಣವಿಲ್ಲ.

ಒಂದು ಆರ್ಥಿಕ ವ್ಯವಹಾರಗಳ ಪತ್ರಿಕೆ (ಬಿಸಿನೆಸ್ ಸ್ಟಾಂಡರ್ಡ್) ಕೂಡ **ಅನಾಣ್ಯೀಕರಣದ ಒಂದು ತಿಂಗಳ ನಂತರವೂ ನಗದಿಗಾಗಿ ಏಕೆ ಪರದಾಡುತ್ತಿದ್ದೇವೆ** ಎಂದು ಪ್ರಶ್ನಿಸಿದೆ.

'ಒಳ್ಳೆಯ ದಿನ'ಗಳ ಗೋಸುಂಬೆತನ ಮತ್ತಷ್ಟು ಬಯಲಿಗೆ: ಪ್ರಧಾನಿಗಳಿಗೆ ನಿವೃತ್ತ ಐಎಎಸ್ ಅಧಿಕಾರಿಯ ಬಹಿರಂಗ ಪತ್ರ

ನಗದಿಗಾಗಿ ಪರದಾಟದಲ್ಲಿ ಒಂದಡೆಯಲ್ಲಿ ಈ 'ಮಿಂಚಿನ ಪ್ರಹಾರ'ಕ್ಕೆ ಆಹುತಿಯಾದವರ ಸಂಖ್ಯೆ ನೂರು ದಾಟಿದೆ ಎಂದು ಹೇಳಲಾಗಿದೆ. ಡಿಸೆಂಬರ್ 5ರಂದು ತಮಿಳುನಾಡಿನ ತಂಜಾವೂರು ಜಿಲ್ಲೆಯ ಒಂದು ಹಳ್ಳಿಯ ದಿನಗೂಲಿ ಕಾರ್ಮಿಕ 70 ವರ್ಷದ ಎಂ.ಸುಬ್ರಮಣಿಯನ್ ಇಂಡಿಯನ್ ಬ್ಯಾಂಕಿನಲ್ಲಿ ಸಾಲಿನಲ್ಲಿ ನಿಂತಿದ್ದಾಗ ಹೃದಯಾಘಾತದಿಂದ ನಿಧನರಾಗಿದ್ದಾರೆ ಎಂದು ಇಂಡಿಯನ್ ಎಕ್ಸ್‌ಪ್ರೆಸ್ ವರದಿ ಮಾಡಿದೆ.

ಅತ್ತ ಕೊಲ್ಕತಾದಲ್ಲಿ 52ವರ್ಷಧ ಸರಕಾರಿ ನೌಕರ ಕಲ್ಲೋಲ್ ರಾಯ್‌ಚೌಧುರಿ ಡಿಸೆಂಬರ್ 3ರಂದು ಎಟಿಎಂ ಸಾಲಿನಲ್ಲಿ ಕುಸಿದು ಬಿದ್ದು ನಿಧನರಾದರು ಎಂದು 'ದಿ ಹಿಂದು 'ವರದಿ ಮಾಡಿದೆ.

ಆದರೆ ಇದುವರೆಗೆ 'ಕಪ್ಪು ಹಣ'ದ ಯಾರೂ ಈ ಪ್ರಹಾರದಿಂದಾಗಿ ಸತ್ತಿರುವ ವರದಿ ಬಂದಿಲ್ಲ. ಇನ್ನೊಂದು ಕಡೆ, **ಅದೇ ಕೊಲ್ಕತಾದಲ್ಲಿ ಬಿಜೆಪಿ ಮುಖಂಡ ಮಾನಿಶ್ ಶರ್ಮನಿಂದ 33ಲಕ್ಷ ರೂ.ಮೌಲ್ಯದ 2000ರೂ. ನೋಟುಗಳನ್ನು ವಶಪಡಿಸಿಕೊಂಡು ಆತನನ್ನು ಬಂಧಿಸಲಾಗಿದೆ** ಎಂಬಂತಹ ವರದಿಗಳೂ ಬರುತ್ತಿವೆ.

ಒಂದೆಡೆಯಲ್ಲಿ **25 ಕೋಟಿ ಗ್ರಾಮೀಣ ಬ್ಯಾಂಕುಗಳ ಖಾತೆಗಳಿಗೆ ನವಂಬರ್ 10ರಿಂದ 30ರ ನಡುವೆ ಕೇವಲ 8000 ಕೋಟಿ ರೂ. ನಗದು(ಸರಾಸರಿ ಕೇವಲ 350ರೂ.)** ಪೂರೈಕೆಯಾಗಿರುವದರಿಂದ ಗ್ರಾಮೀಣ ಜನತೆ ನಗರಗಳ ಬಡಜನರಿಗಿಂತಲೂ ಹೆಚ್ಚು ಕಷ್ಟ ಅನುಭವಿಸುತ್ತಿದ್ದರೆ, ಹಾಲಿ, ಮಾಜಿ ಬಿಜೆಪಿ ಮುಖಂಡರು ತಮ್ಮ ಮಕ್ಕಳ ಮದುವೆಗಳಿಗಾಗಿ ಕೋಟಿ ಕೋಟಿ ರೂ.ಗಳನ್ನು ಇದೇ ಅವಧಿಯಲ್ಲಿ ಯಾವುದೇ ಮುಲಾಜಿಲ್ಲದೆ ಖರ್ಚು ಮಾಡುತ್ತಿರುವ ವರದಿಗಳೂ ಬರುತ್ತಿವೆ.


2.5ಲಕ್ಷ ರೂ.ಗಳಷ್ಟು ಮಾತ್ರವೇ ತಮ್ಮ ಖಾತೆಯಿಂದ ಹಣ ಪಡೆಯಬಹುದು ಎಂದು ಜನಸಾಮಾನ್ಯರಿಗೆ ವಿಧಿಸಿರುವಾಗ ಕೇಂದ್ರ ಮಂತ್ರಿ ನಿತಿನ್ ಗಡ್ಕರಿಯವರ ಮಗಳ ಮದುವೆಗೆ ವಿವಿಐಪಿಗಳನ್ನು ಸಾಗಿಸಲು 50 ವಿಮಾನಗಳನ್ನು ಬಾಡಿಗೆಗೆ ಪಡೆಯಲು ನಾಗಪುರದಲ್ಲಿ ಸಾಧ್ಯವಾಗಿರುವುದು ಹೇಗೆ? ಈ ಸಮಾರಂಬದಲ್ಲಿ ಬಿಜೆಪಿ ಗಣ್ಯರಾದ ಅಮಿತ್ ಶಹಾ, ರಾಜನಾಥ್ ಸಿಂಗ್, ವೆಂಕಯ್ಯ ನಾಯ್ಡು, ಆರೆಸ್ಸೆಸ್ ಮುಖ್ಯಸ್ಥರು ಭಾಗವಹಿಸಿದ್ದರಂತೆ. ಸ್ಥಳೀಯ ಆದಾಯ ತೆರಿಗೆ ಅಧಿಕಾರಿಗಳೂ ಭಾಗವಹಿಸಿದ್ದರಂತೆ!

ಇಲ್ಲಿ ಬೆಂಗಳೂರಿನಲ್ಲಿ ಮಾಜಿ ಬಿಜೆಪಿ ಮಂತ್ರಿ ಜನಾರ್ಧನ ರೆಡ್ಡಿ ಮಗಳ ಮದುವೆಯಲ್ಲಿ 500 ಕೋಟಿ ರೂ.ಖರ್ಚಾಗಿದೆಯೆನ್ನಲಾಗಿದೆ. ಅದರಲ್ಲಿ 100 ಕೋಟಿರೂ.ಗಳ ಕಾಳ ವಿನಿಮಯಕ್ಕೆ ನೆರವಾಗಿದ್ದರೆನ್ನಲಾದ ಅಧಿಕಾರಿಯ ಡ್ರೈವರ್‌ನ ಅಸಹಜ ಸಾವಿನಿಂದ ಬೆಳಕಿಗೆ ಬಂದಿದೆ.

ಈ ಹಿನ್ನೆಲೆಯಲ್ಲಿ ನಿವೃತ್ತ ಐಎಎಸ್ ಅಧಿಕಾರಿ ಇ ಎ ಎಸ್ ಶರ್ಮ ಪ್ರಧಾನ ಮಂತ್ರಿಗಳಿಗೊಂದು ಬಹಿರಂಗ ಪತ್ರ ಬರೆದು ಕೇಂದ್ರ ನೇರ ತೆರಿಗೆಗಳ ಮಂಡಳಿ(ಸಿಬಿಡಿಟಿ) ಮತ್ತು ಜಾರಿ ಮಂತ್ರಾಲಯ(ಇ.ಡಿ.) ಈ ಬಗ್ಗೆ ತನಿಖೆ ನಡೆಸುವುದು ಅಗತ್ಯ, ಈ ವಿಷಯದಲ್ಲಿ ಬೇಗನೇ ಮತ್ತು ದೃಢ ಕ್ರಮಗಳನ್ನು ಕೈಗೊಳ್ಳದಿದ್ದರೆ, ನ್ಯಾಯಾಂಗ ಮಧ್ಯಪ್ರವೇಶಕ್ಕೆ ಪ್ರಯತ್ನಿಸಬೇಕಾಗುತ್ತದೆ, ಏಕೆಂದರೆ ದೇಶದ ಪ್ರತಿಯೊಬ್ಬ ನಾಗರಿಕನಿಗೆ ಆಳ್ವಿಕೆಯ ಆಧಾರವನ್ನು ಪ್ರಶ್ನಿಸುವ ಹಕ್ಕು ಇದೆ ಎಂದು ಹೇಳಿದ್ದಾರೆ.

ಯಥಾಪ್ರಕಾರ ಪ್ರಧಾನಿಗಳು ಈ ಬಗ್ಗೆ ಇನ್ನೂ ಪ್ರತಿಕ್ರಿಯಿಸಿಲ್ಲ.

ಅತ್ತ ಅವರ ಮಾದರಿ ರಾಜ್ಯದಲ್ಲಿ ಅವರ ಸರಕಾರದ ಹಿಂದಿನ ಕಪ್ಪು ಹಣ ಮಾಫ್ ಯೋಜನೆಯ ಅಡಿಯಲ್ಲಿ ಕೊನೆಯ ದಿನ 13860 ಕೋಟಿ ರೂ.ಗಳಷ್ಟು ಕಪ್ಪು ಹಣ ಘೋಷಿಸಿದ ಮಹೇಶ್ ಶಹಾ ಸುದ್ದಿ ಮಾಡಿದ್ದಾರೆ. ಅದು ತನ್ನದಲ್ಲ, ಪ್ರಮುಖ ರಾಜಕಾರಣಿಗಳು, ಕಾಂಟ್ರಾಕ್ಟರುಗಳು ಇತ್ಯಾದಿಗಳ ಹಣ, ತನ್ನ ಮೂಲಕ ಬಿಳಿ ಮಾಡಿಸಲು ಪ್ರಯತ್ನಿಸಿ ಈಗ ಬೆನ್ನಲ್ಲಿ ಚೂರಿ ಹಾಕಿದ್ದಾರೆ,ಇವರೆಲ್ಲರ ಹೆಸರು ಪ್ರಕಟಿಸುವುದಾಗಿ ಹೇಳಿದ್ದಾರೆ. ಆಮೇಲೆ ಸುದ್ದಿಯಿಲ್ಲ. ಈಗ ಆತನಿಗೆ 3ವರ್ಷಗಳ ಸಜಾ ಆಗಬಹುದೆಂಬ ಸುದ್ದಿ ಬಂದಿದೆ. ಸಪ್ಟಂಬರ್ 30 ರಂದು ಸರಕಾರ ಈ ಯೋಜನೆಯಲ್ಲಿ ಸಂಗ್ರಹವಾಗಿದೆಯೆಂದ ಸುಮಾರು ರೂ.65 ಸಾವಿರ ಕೋಟಿಯಲ್ಲಿ ಈ ಮೊತ್ತದ ಬಗ್ಗೆ ಸಂದೇಹವಿದ್ದುದರಿಂದ ಸೇರಿಸಿರಲಿಲ್ಲ ಎಂದು ಈಗ 'ಸ್ಪಷ್ಟೀಕರಣ' ನೀಡಲಾಗಿದೆ. ಆದರೂ ಕಳೆದ ತಿಂಗಳು ಈ ಹಣಕ್ಕೆ ತೆರಿಗೆಯ ಮೊದಲ ಕಂತು ಕಟ್ಟಬೇಕು ಎಂದು ಆತನಿಗೆ ನೋಟೀಸು ಹೋದದ್ದು ಹೇಗೆ ಎಂದು ಹಲವರು ಪ್ರಶ್ನಿಸುತ್ತಿದ್ದಾರೆ.



ವ್ಯಂಗ್ಯಚಿತ್ರ: ಮಂಜುಲ್, ಡಿಎನ್‌ಎ

ಸರ್, ನೋಟು ವಿನಿಮಯಕ್ಕೆ ಬಂದಿದ್ದೇವೆ. ನಿಮ್ಮ ಪಕ್ಷದ ಕಾರ್ಯಕರ್ತನ ಹತ್ರ ಬ್ಯಾಂಕ್‌ನ ಶಾಖೆಯಲ್ಲಿ ಇರುವುದಕ್ಕಿಂತ ಹೆಚ್ಚು ಕರೆನ್ಸಿ ಇತ್ತೆಂದು ಹಿಡಿದಿದ್ದರಲ್ಲ!



ಅನಾಣ್ಯೀಕರಣದ 'ಫಲ'!: ವಿದೇಶಿ ಗೋದಿಗೆ ಸುಸ್ವಾಗತ

ಮಾರ್ಚ್17, 2012ರಂದು ಭಾರತದ ರೈತರಿಗೆ ನೆರವಾಗಲೆಂದು ಗೋದಿ ಆಮದು ಮೇಲೆ ಹಾಕಿದ್ದ 10% ಸುಂಕವನ್ನು ತೆಗೆಯಲು ಡಿಸೆಂಬರ್ 8ರಂದು ಹೊಸ ಅಧಿಸೂಚನೆ ಹೊರಡಿಸಲಾಗಿದೆ ಎಂದು ಹಣಕಾಸು ಮಂತ್ರಿಗಳು ಲೋಕಸಭೆಗೆ ತಿಳಿಸಿದ್ದಾರೆ.

2016-17ರಲ್ಲಿ ಗೋದಿಯ ಬೆಲೆಗಳು ಏರುವ ಸಂಭವವಿರುವುದರಿಂದ ಹೀಗೆ ಮಾಡಲಾಗಿದೆ ಎಂದು ಸರಕಾರ ಸಮಜಾಯಿಷಿ ಕೊಟ್ಟಿದೆ. ಈ ಬಾರಿಯ ಚಳಿಗಾಲದ ಕುರಿತ ಹವಾಮಾನ ಇಲಾಖೆಯ ಮುನ್ಸೂಚನೆ ಪ್ರಕಾರ ಗೋದಿ ಇಳುವರಿ ಕಡಿಮೆಯಾಗಬಹುದೆಂದು ಹೀಗೆ ಮಾಡಲಾಗಿದೆಯಂತೆ.

ವಾಸ್ತವವಾಗಿ ಅನಾಣ್ಯೀಕರಣದ ಮೂಲಕ ಭಾರತದ 'ಅನ್ನದಾತ'ರಿಗೆ ಹೊಟ್ಟೆಗಿಲ್ಲದಂತೆ ಮಾಡಿರುವುದರಿಂದ ಆಹಾರ ಕೊರತೆಗಳು ಉಂಟಾಗುವ ಭಯದಿಂದ ಈ ಕ್ರಮ ಕೈಗೊಳ್ಳಲಾಗಿದೆ ಎಂದು ಸೀತಾರಾಮ್ ಯೆಚೂರಿ ಈ ಬಗ್ಗೆ ಟಿಪ್ಪಣಿ ಮಾಡಿದ್ದಾರೆ.

ನೋಟು ಹರಣದ ನಂತರ ಸಂತಾನ ಹರಣ

ದೇಶದಲ್ಲಿ 'ನೋಟ್ ಬಂದಿ' ಬಗ್ಗೆ ಬಗ್ಗೆ ಚರ್ಚೆಗಳ ನಡುವೆ ಮೋದಿ ಸಂಪುಟದ ಒಬ್ಬ ಮಂತ್ರಿ 'ನಸ್‌ಬಂದಿ'(ಸಂತಾನಹರಣ) ಯ ಕೂಗೆಬ್ಬಿಸಿದ್ದಾರೆ. ನಿಜ, ಹೀಗೆ ಕೂಗೆಬ್ಬಿಸಿದವರಲ್ಲಿ ಇವರು ಮೊದಲಿಗರೇನಲ್ಲ. ಕಳೆದ ವಾರ ಮಾಜಿ ಮಂತ್ರಿ ಮತ್ತು ಹಿರಿಯ ಬಿಜೆಪಿ ಮುಖಂಡ ಸಂಜಯ್ ಪಾಸ್ವಾನ್ ದೇಶದ ಜನಸಂಖ್ಯಾ ಹತೋಟಿಗೆ ಸಂತಾನರಣದ ಪರಿಹಾರ ಸೂಚಿಸಿದ್ದರು.


ದೇಶ ಜನಸಂಖ್ಯಾಸ್ಫೋಟದ ಅಪಾಯ ಎದುರಿಸುತ್ತಿದೆ, ಆದ್ದರಿಂದ ಸಮಾಜದ ಎಲ್ಲ ವಿಭಾಗಗಳು ಜನಸಂಖ್ಯಾ ಹತೋಟಿಯ ಕ್ರಮಗಳನ್ನು ಅನುಸರಿಸಬೇಕು ಎಂದು ಅವರು ಸಲಹೆ ಮಾಡಿದ್ದಾರೆ.

ಇದರಲ್ಲೇನು ತಪ್ಪು ಎಂದು ಕೇಳಬಹುದು. ಮೇಲ್ನೋಟಕ್ಕೆ ತಪ್ಪೇನಿಲ್ಲ. ಆದರೆ ಇದೇ ವ್ಯಕ್ತಿ ಕೇವಲ ಎರಡು ತಿಂಗಳ ಹಿಂದೆ ದೇಶದ ಎಂಟು ರಾಜ್ಯಗಳಲ್ಲಿ ಹಿಂದೂಗಳ ಸಂಖ್ಯೆ ಇಳಿಯುತ್ತಿದೆ, ಆದ್ದರಿಂದ ಹಿಂದೂಗಳು ತಮ್ಮ ಸಂಖ್ಯೆಯನ್ನು ಹೆಚ್ಚಿಸುವ ಬಗ್ಗೆ ಗಂಭೀರವಾಗಿ ಯೋಚಿಸಬೇಕು ಎಂದಿದ್ದರಲ್ಲ! ಆಗ, ಕಳೆದ ವರ್ಷ ಆರೆಸ್ಸೆಸ್ ಮುಖ್ಯಸ್ಥರೇ ಇಂತಹ ಕರೆ ನೀಡಿದ್ದರು ಎಂದೂ ನೆನಪಿಸಿಕೊಂಡಿದ್ದರು.

ಇದಕ್ಕಿಂತ ಮುಖ್ಯವಾಗಿ ಈ ಮಂತ್ರಿಗಳ ಮಾತುಗಳು 41 ವರ್ಷಗಳ ಹಿಂದೆ ತುರ್ತು ಪರಿಸ್ಥಿತಿಯ ದಿನಗಳ ಸಂಜಯ್ ಗಾಂಧಿಯ ಮಾತುಗಳನ್ನು ಹಲವರಿಗೆ ನೆನಪಿಸಿದ್ದರೆ ಆಶ್ಚರ್ಯವಿಲ್ಲ. ಈ ಬಿಜೆಪಿ ಮಂತ್ರಿ ಪ್ರಧಾನ ಮಂತ್ರಿಗಳ ಕಟ್ಟಾ ಅಭಿಮಾನಿ ಎನ್ನಲಾಗಿದೆ.

ಬಿಜೆಪಿಯ ಕಾಂಗ್ರೆಸ್-ಮುಕ್ತ ಭಾರತ ನವ-ಉದಾರೀಕರಣ ಆರ್ಥಿಕ ಧೋರಣೆಗಳಿಂದ ಮಾತ್ರವೇ ದೇಶಕ್ಕೆ ಮುಕ್ತಿ ನೀಡದಿರುವುದಲ್ಲ.

'ಟೈಮ್' ಮ್ಯಾಗಝಿನ್‌ನ 2016 ವರ್ಷದ ವ್ಯಕ್ತಿಯಾಗಿ ಅಮೆರಿಕಾದ ಅಧ್ಯಕ್ಷರಾಗಿ ಚುನಾಯಿತರಾಗಿರುವ ಡೊನಾಲ್ಡ್ ಟ್ರಂಪ್ ಅವರನ್ನು ಆರಿಸಿದ್ದು ಬಹಳಷ್ಟು ಮೋದಿ ಅಭಿಮಾನಿಗಳಲ್ಲಿ ನಿರಾಸೆ ಉಂಟು ಮಾಡಿದೆ. ಓದುಗರ ಅಭಿಮತಸಂಗ್ರಹದಲ್ಲಿ ಮೋದಿಯವರು ಎಲ್ಲರಿಗಿಂತ ಮುಂದೆ ಇದ್ದರೆಂಬ ಸುದ್ದಿ ಅವರಲ್ಲಿ ಬಹಳಷ್ಟು ನಿರೀಕ್ಷೆ ಮೂಡಿಸಿತ್ತು. -ಸುದ್ದಿ



ವ್ಯಂಗ್ಯಚಿತ್ರ: ಸತೀಶ ಆಚಾರ್ಯ, ಸಿಫಿ.ಕಾಂ

ಒಂದು ತಿಂಗಳಾಯಿತು, ಕಪ್ಪು ಹಣ ಹೊರಬರಲಿಲ್ಲ...... ಈಗ 'ಕ್ಯಾಷ್ ಲೆಸ್' ಆಟ!

ಅನಾಣ್ಯೀಕರಣದ ಒಂದು ತಿಂಗಳಲ್ಲಿ ಈ ಕ್ರಮ ಉಂಟು ಮಾಡಿರುವ ಬಿಕ್ಕಟ್ಟಿನ ಸ್ವರೂಪ ಬಯಲಾಗುತ್ತಿರುವಾಗ ಮೋದಿ ಸರಕಾರ ಜನಗಳ ಗಮನವನ್ನು ಬೇರೆಡೆಗೆ ಸೆಳೆಯಲು ಹಲವು ಸರ್ಕಸ್‌ಗಳನ್ನು ನಡೆಸುತ್ತಿದೆ. ಒಂದಿಕ್ಕಿಂದ ಇನ್ನೊಂದು ಹಾಸ್ಯಾಸ್ಪದವಾಗುತ್ತಿರುವ ಸರ್ಕಸಿನ ಆಟಗಳು!

ಗೋಲು ಕಂಬವನ್ನು ಈಗ ಡಿಜಿಟಲ್ ಪಾವತಿಯತ್ತ ಹೊರಳಿಸುತ್ತಿದ್ದಾರೆ..–ಸೀತಾರಾಮ್ ಯೆಚೂರಿ

ಮೋದಿಯವರ ಅನಾಣ್ಯೀಕರಣದ ಪ್ರಕಟಣೆ ಹರಿಯಬಿಟ್ಟ ಬಿಕ್ಕಟ್ಟಿನ ಸ್ಥಿತಿಯೇನು ಎಂದು ಪರಿಶೀಲಿಸಲು ಒಂದು ತಿಂಗಳು ಒಂದೊಳ್ಳೆ ಸಮಯ.

ಅವರ ಪ್ರಕಟಣೆಯಲ್ಲಿ ನಾಲ್ಕು ಗುರಿಗಳನ್ನು ಹೇಳಿದ್ದರು–ಭ್ರಷ್ಟಾಚಾರ, ಭಯೋತ್ಪಾದನೆ, ನಕಲಿ ಕರೆನ್ಸಿ ಮತ್ತು ಕಪ್ಪು ಹಣ.

ಈ ಪ್ರತಿಯೊಂದು ಗುರಿಯೂ ವಸ್ತುತಃ ಮತ್ತು ಕಣ್ಣಿಗೆ ಕಾಣುವ ಸಾಕ್ಷ್ಯದ ಆಧಾರದಲ್ಲೂ ತಪ್ಪು ಎಂದು ಸಾಬೀತಾಗಿದೆ.

ಅವರೀಗ ಗೋಲು ಕಂಬವನ್ನು ಡಿಜಿಟಲ್ ಪಾವತಿ ಎಂಬುದಕ್ಕೆ ಹೊರಳಿಸಿದ್ದಾರೆ. ಈ ಪದ ಅವರ ನವಂಬರ್ 8ರ ಟಿವಿ ಭಾಷಣದಲ್ಲಿ ಕಾಣಸಿಕ್ಕಿರಲಿಲ್ಲ. ಈ ಪದ ನಮ್ಮಂತಹ ದೇಶಕ್ಕೆ ಅರ್ಥವಿಲ್ಲದ್ದು– ನಿಜ, ಬಡವರು ಮತ್ತು ತುಳಿತಕ್ಕೊಳಗಾದವರನ್ನು ದೇಶದ ಆರ್ಥಿಕ ವ್ಯವಸ್ಥೆಯಿಂದ ಹೊರತು ಪಡಿಸುವುದಾದರೆ ಅದಕ್ಕೆ ಅರ್ಥ ಬರುತ್ತದೆ.

ಕಳೆದ ಒಂದು ತಿಂಗಳಲ್ಲಿ ಆರ್ಥಿಕ ವ್ಯವಸ್ಥೆ ಗಕ್ಕನೇ ನಿಂತು ಬಿಟ್ಟಿದೆ. ಈ ತುಘ್ಲಕೀ ಫರ್ಮಾನ್‌ನಿಂದಾಗಿ ಅಲ್ಲೋಲ–ಕಲ್ಲೋಲ, ಸಂಕಟ ಮತ್ತು ನೋವುಣ್ಣದ ಸಮಾಜದ ಯಾವ ವಿಭಾಗವೂ ಇಲ್ಲ. ಮೋದಿಯುವರು ತಾನು ಬಡವರ ಪರವಾಗಿ ಮಾತಾಡುತ್ತಿದ್ದೇನೆ ಎನ್ನುತ್ತಾರೆ. ಆದರೆ ಬಡವರೇ ಈ ಪ್ರಕಟಣೆಯಿಂದ ಅತ್ಯಂತ ಹೆಚ್ಚು ಸಂಕಟ ಅನುಭವಿಸುತ್ತಿರುವವರು. ಏಕೆಂದರೆ ಶ್ರೀಮಂತರಿಗೆ ತಮ್ಮ ಮೋಸದ ಸಂಪತ್ತನ್ನು ಸ್ವಲ್ಪ ಹೆಚ್ಚಿನ ತೆರಿಗೆ ತೆತ್ತು ಬಿಳಿಯಾಗಿಸಲು ಮತ್ತೊಂದು ಅವಕಾಶ ಕೊಡಲಾಗಿದೆ.

ನಿಜವಾಗಿ ಪ್ರಧಾನಿಗಳ ಸಹಾನುಭೂತಿ ಎಲ್ಲಿದೆ ಎಂಬುದರ ಬಗ್ಗೆ ಇನ್ನೂ ಯಾರಿಗಾದರೂ ಅನುಮಾನ ಇದ್ದರೆ ಮೋದಿ ಸರಕಾರ ಕಳೆದ ಎರಡು ವರ್ಷಗಳಲ್ಲಿ ಬ್ಯಾಂಕ್‌ಗಳಿಗೆ ತೀರಿಸದ 1.12ಲಕ್ಷ ಕೋಟಿ ರೂ.ಗಳ ಮೊತ್ತದ ಸಾಲಗಳನ್ನು ಮನ್ನಾ ಮಾಡಿದೆ ಎಂಬುದನ್ನು ನೆನಪಿಸಿಕೊಳ್ಳಿ. ಮೋದಿಯವರ ರಾಜ್ಯಭಾರದಲ್ಲಿ ಭಾರತದ 1% ಅತಿ ಶ್ರೀಮಂತರ ಪಾಲು ಭಾರತದ ಒಟ್ಟು ಸಂಪತ್ತಿನಲ್ಲಿ 49%ದಿಂದ 58.4%ಕ್ಕೆ ಏರಿದೆ.

ತಿಂಡಿಯ ರುಚಿ ಅದನ್ನು ತಿಂದಾಗಲೇ ಗೊತ್ತಾಗುವುದು ಎನ್ನುತ್ತಾರೆ.

ಮೋದಿ ಸರಕಾರ ಶ್ರೀಮಂತರನ್ನು ಮತ್ತಷ್ಟು ಶ್ರೀಮಂತರಾಗಿಸಿದೆ, ಅದಕ್ಕೆ ಬೆಲೆ ತೆತ್ತಿರುವವರು ಬಡವರು, ಮಧ್ಯದ ಮರ್ಗದವರು; ಈ ವಿಭಾಗಗಳು ಈ ಅನಾಣ್ಯೀಕರಣ ವಿನಾಶದಿಂದ ಇನ್ನಷ್ಟು ಸಂಕಟ ಪಡುವಂತಾಗಿದೆ.

ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ 'ವಿತ್ತೀಯ ಸಾಕ್ಷರತಾ ಅಭಿಯಾನ್'! ಬಡವರ ವಿರುದ್ಧ ಯುದ್ಧದಲ್ಲಿ ವಿದ್ಯಾರ್ಥಿಗಳು ಮದ್ದುಗುಂಡುಗಳು!

ಅತ್ತ ಕಾರ್ಮಿಕ ಇಲಾಖೆ ಕಾರ್ಮಿಕರನ್ನು 'ಒಳಗೊಳ್ಳುವ' ಕಾರ್ಯಕ್ರಮ ಹಾಕಿದರೆ, ಇತ್ತ ಮಾನವ ಸಂಪನ್ಮೂಲ ಇಲಾಖೆ ಎಲ್ಲ ಶಿಕ್ಷಕರನ್ನು ವಿದ್ಯಾರ್ಥಿಗಳನ್ನು ಪ್ರಚಾರಕ್ಕಿಳಿಸುವ ಕಾರ್ಯಕ್ರಮ ಹಾಕಿಕೊಂಡಿದೆ. ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಡಿಸೆಂಬರ್ 12ರಿಂದ ಜನವರಿ 12 ರ ವರೆಗೆ 'ವಿತ್ತೀಯ ಸಾಕ್ಷರತಾ ಅಭಿಯಾನ' ನಡೆಸಬೇಕೆಂದು ನಿರ್ದೇಶನ ಹೊರಡಿಸಿದೆ. ಉನ್ನತ ಶಿಕ್ಷಣದ ಗುಣಮಟ್ಟವನ್ನು ಉತ್ತಮ ಪಡಿಸಲೆಂದು ಇರುವ ಸ್ವಾಯತ್ತ ಸಂಸ್ಥೆ ಯುಜಿಸಿ ಜೀ ಹುಜೂರ್ ಎಂದು ಮೋದಿ ಸರಕಾರದ ಬೇಜವಾಬ್ದಾರಿಯ ಅನಾಣ್ಯೀಕರಣದ ಪರವಾಗಿ ಪ್ರಚಾರ ನಡೆಸಬೇಕು ಎಂದು ಸುತ್ತೋಲೆ ಹೊರಡಿಸಿದೆ.

ಕ್ಯಾಂಪಸ್‌ಗಳನ್ನು 'ನಗದುರಹಿತ' ಗೊಳಿಸಬೇಕು, ಹತ್ತಿರದ ಮಂಡಿಗಳಲ್ಲಿ, ಮಾರ್ಕೆಟ್‌ಗಳಲ್ಲಿ ಪ್ರಚಾರ ನಡೆಸಲು ಎನ್‌ಸಿಸಿ ಮತ್ತು ಎನ್‌ಎಸ್‌ಎಸ್ ಘಟಕಗಳನ್ನು ಬಳಸಿಕೊಳ್ಳಬೇಕು, ಪ್ರತಿ ವಿದ್ಯಾರ್ಥಿ ಕನಿಷ್ಟ 10 ಮನೆಗಲಲ್ಲಿ ಪ್ರಚಾರ ನಡೆಸಬೇಕು ಎಂದು ಸುತ್ತೋಲೆ ಹೇಳುತ್ತದೆ.

ಇದು ಇಷ್ಟಕ್ಕೇ ನಿಲ್ಲುವುದಿಲ್ಲ–ಈ ಪ್ರಚಾರಗಳಲ್ಲಿ ಭಾಗವಹಿಸುವ ವಿದ್ಯಾರ್ಥಿಗಳಿಗೆ ಅಧಿಕ 'ಕ್ರೆಡಿಟ್'ಗಳು, ಅಂದರೆ ಮಾರ್ಕುಗಳನ್ನು ಕೊಡಲಾಗುವುದು!

ಈ ಅಗ್ಗದ ಪ್ರಚಾರ ತಂತ್ರವನ್ನು ವಿರೋಧಿಸಿರುವ ಎಸ್‌ಎಫ್‌ಐ ಎಲ್ಲ ಕ್ಯಾಂಪಸ್‌ಗಳನ್ನು ನಗದುರಹಿತಗೊಳಿಸುವ ಈ ವಿಚಾರ ಈ ಅನಾಣ್ಯೀಕರಣದಂತೆಯೇ ಬುಡಮಟ್ಟದ ವಾಸ್ತವತೆಯ ಅರಿವಿಲ್ಲದ್ದು ಎಂದು ಅಭಿಪ್ರಾಯ ಪಟ್ಟಿದೆ. ಸಣ್ಣ ಪಟ್ಟಣಗಳಲ್ಲಿ ವಿದ್ಯಾರ್ಥಿಗಳು ಡಿಜಿಟಲ್ ಸಾಧನಗಳ ಮೂಲಕ ತಮ್ಮ ಶುಲ್ಕ ಇತ್ಯಾದಿಗಳನ್ನು ತೆರುವ ಸ್ಥಿತಿಯಲ್ಲಿರುವುದಿಲ್ಲ. ಕೇಂದ್ರೀಯ ವಿಶ್ವವಿದ್ಯಾಲಯಗಳ ಬಹುಮಂದಿ ವಿದ್ಯಾರ್ಥಿಗಳು ಪರೀಕ್ಷೆ ಬರೆಯಬೇಕಾದ ಸಮಯದಲ್ಲಿ ತಮ್ಮ ಖರ್ಚಿಗಾಗಿ ಹಣ ಪಡೆಯಲು ಇತರ ಜನಸಾಮಾನ್ಯರೊಂದಿಗೆ ಎಟಿಎಂ, ಬ್ಯಾಂಕ್ ಕ್ಯೂಗಳಲ್ಲಿ ನಿಂತಿರಬೇಕಾಗಿದೆ.

ಆದ್ದರಿಂದ ಈ ಒಂದು ತಿಂಗಳ 'ಅಭಿಯಾನ'ದ ಅವಧಿಯಲ್ಲಿ ವಿವಿ ಕೇಂದ್ರಗಳು ಮತ್ತು ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಅನಾಣ್ಯೀಕರಣದ ವಿನಾಶಕಾರಿ ಪರಿಣಾಮಗಳ ಬಗ್ಗೆ ಪ್ರಚಾರ ನಡೆಸಲು ಎಸ್‌ಎಫ್‌ಐ ನಿರ್ಧರಿಸಿದೆ, ಸರಕಾರ ಬಡಜನರ ಎದೆಗೆ ಗುರಿಮಾಡಿರುವ ತೋಪುಗಳಿಗೆ ಮದ್ದುಗುಂಡುಗಳಾಗಲು ವಿದ್ಯಾರ್ಥಿಗಳು ಸಿದ್ಧರಿಲ್ಲ ಎಂದು ತೋರಿಸಲು ವಿದ್ಯಾರ್ಥಿಗಳಿಗೆ ಕರೆ ನೀಡಿದೆ.

ಇದ್ದಕ್ಕಿದ್ದಂತೆ ಕಾರ್ಮಿಕರ 'ಹಣಕಾಸು ಒಳಗೊಳ್ಳುವಿಕೆಯ ಕಾರ್ಯಕ್ರಮ' ನೆನಪಾಯಿತೇ?

ಕಾರ್ಮಿಕ ಮಂತ್ರಿಗಳು ಡಿಸೆಂಬರ್ 1 ರಂದು ತುರ್ತಾಗಿ ಕಾರ್ಮಿಕ ಸಂಘಗಳ ಸಭೆ ಕರೆದರು. ಏಕೆ ಈ ತುರ್ತು ಎಂಬುದು ಕಾರ್ಮಿಕ ಮಂತ್ರಿಗಳ ಎದುರು ಲೇಬರ್ ಸೆಕ್ರೆಟರಿ ಮಂಡಿಸಿದ 'ಹಣಕಾಸು ಒಳಗೊಳ್ಳುವಿಕೆಯ ಕಾರ್ಯಕ್ರಮ'ವನ್ನು ನೋಡಿದಾಗ ಸ್ಪಷ್ಟವಾಯಿತು ಎನ್ನುತ್ತಾರೆ ಸಿಐಟಿಯು ಪರವಾಗಿ ಈ ಸಭೆಯಲ್ಲಿ ಭಾಗವಹಿಸಿದ ಸಂಘಟನೆಯ ಪ್ರಧಾನ ಕಾರ್ಯದರ್ಶಿ ತಪನ್ ಸೆನ್.

ಕನಿಷ್ಟ ಕೂಲಿಯನ್ನು ಹೆಚ್ಚಿಸುವದಾಗಲೀ, ಸಾಮಾಜಿಕ ಭದ್ರತೆಯ ಕ್ರಮಗಳನ್ನು ವಿಸ್ತರಿಸುವುದಾಗಲೀ ಈ ಹಣಕಾಸು ಒಳಗೊಳ್ಳುವಿಕೆಯ ಕಾರ್ಯಕ್ರಮದ ಭಾಗವಾಗಿರಲಿಲ್ಲ. ಬದಲಾಗಿ, ಕಾರ್ಮಿಕರು, ನಿರ್ದಿಷ್ಟವಾಗಿ ಅಸಂಘಟಿತ ವಲಯದ ಕಾಂಟ್ರಾಕ್ಟ್ ಕಾರ್ಮಿಕರು, ಕ್ಯಾಶುವಲ್ ಕಾರ್ಮಿಕರು, ಚಹಾ ತೋಟಗಳ ಕಾರ್ಮಿಕರು ಮುಂತಾದವರೆಲ್ಲ ಬ್ಯಾಂಕ್ ಖಾತೆಗಳನ್ನು ತೆರೆಯುವಂತೆ ಮಾಡುವುದಷ್ಟೇ ಈ ಕಾರ್ಯಕ್ರಮದ ಭಾಗವಾಗಿದೆ. ಈಗಾಗಲೇ ರಾಜ್ಯ ಸರಕಾರಗಳಿಗೆ, ಕಾರ್ಮಿಕ ಇಲಾಖೆಯ ಕಚೇರಿಗಳಿಗೆ ಮತ್ತು ಸಂಬಂಧಪಟ್ಟ ಮಂತ್ರಾಲಯಗಳಿಗೆ ಕೂಲಿಗಳನ್ನು ಬ್ಯಾಂಕುಗಳ ಮೂಲಕವೇ ಕೊಡಬೇಕೆಂಬ ಸಲಹೆ ಕಳಿಸಲಾಗಿದೆ ಎಂದೂ ತಿಳಿಸಲಾಯಿತು.


ಇದಕ್ಕೆ ಪ್ರತಿಕ್ರಿಯಿಸುತ್ತ ತಪನ್ ಸೆನ್ ಕಾರ್ಮಿಕ ಇಲಾಖೆಯ ಗೋಸುಂಬೆತನನವನ್ನು ಬಿಚ್ಚಿಟ್ಟರು. ದೇಶದ ಕಾರ್ಮಿಕ ಆಂದೋಲನ ಬಹಳ ಕಾಲದಿಂದ ಕಾಂಟ್ರಾಕ್ಟ್ ಕಾರ್ಮಿಕರಿಗೆ ಬ್ಯಾಂಕುಗಳ ಮೂಲಕ ಸಂಬಳ ಪಾವತಿಸಬೇಕು ಎಂದು ಆಗ್ರಹಿಸುತ್ತ ಬಂದಿದೆ. ಆದರೆ ಅದನ್ನು ವಿರೋಧಿಸುತ್ತಿರುವವರು, ಅದು ನಡೆಯದಂತೆ ಬುಡಮೇಲು ಮಾಡುತ್ತಿರುವವರು ಕಂಟ್ರಾಕ್ಟರುಗಳು, ಮಾಲಕರು(ಸರ್ಕಾರಿ ಸಂಸ್ಥೆಗಳ ಆಡಳಿತಗಳೂ ಸೇರಿದಂತೆ) ಮತ್ತು ಅವರೊಡನೇ ಶಾಮೀಲಾಗುವ ಸರಕಾರೀ ಇಲಾಖೆಗಳು. ಇದನ್ನೆಲ್ಲ ಕಂಡೂ ಕಾಣದಂತಿದ್ದ ಸರಕಾರಕ್ಕೆ ಇದ್ದಕ್ಕಿದ್ದಂತೆ ಈ ಕಾರ್ಯಕ್ರಮ ನೆನಪಾದ್ದೇಕೆ?

ಅದು ಖಂಡಿತ ಕಾರ್ಮಿಕರ ಹಣಕಾಸು ಸ್ಥಿತಿಯನ್ನು ಉತ್ತಮ ಪಡಿಸಲಿಕ್ಕಲ್ಲ. ಬದಲಾಗಿ ಅನಾಣ್ಯೀಕರಣದ ಕ್ರಮದಿಂದ ಉಂಟಾಗಿರುವ ಭಾರೀ ಬಿಕ್ಕಟ್ಟನ್ನು ನಿರ್ವಹಿಸುವ ಒಂದು ಕ್ರಮವಾಗಿ ಮಾತ್ರ. ದೇಶದಲ್ಲೆಲ್ಲ ಬ್ಯಾಂಕು ಖಾತೆಗಳನ್ನು ಹೊಂದಿರುವ ನೌಕರರು, ಕಾರ್ಮಿಕರು ತಮ್ಮ ಹಣವನ್ನು ಹನಿಹನಿಯಾಗಿ ಪಡೆಯಲು ಪ್ರತಿದಿನ ಮೈಲುದ್ದ ಸಾಲುಗಳಲ್ಲಿ ನಿಲ್ಲಬೇಕಾಗಿರುವಾಗ, ಸಂಬಳ ಕೊಡಲು ನಗದು ಇಲ್ಲದಿರುವಾಗ ಮಾತ್ರವೇ ಈ ಬಡಕಾರ್ಮಿಕರ 'ಹಣಕಾಸು ಒಳಗೊಳ್ಳುವಿಕೆ' ಎಂಬ ಪದ ಸರಕಾರಕ್ಕೆ ನೆರವಾಗಿದೆ. ಈ ಲಕ್ಷಾಂತರ ಮಂದಿಯೂ ಕೆಲಸ ಬಿಟ್ಟು ಕೂಲಿ ಕಳೆದುಕೊಂಡು ಈ ಕ್ಯೂಗಳಲ್ಲಿ ನಿಲ್ಲಲಿ ಎಂದು!

ಈಗ ಎಲ್ಲ ಸಾರ್ವಜನಿಕ, ಖಾಸಗಿ , ಸಹಕಾರಿ ಬ್ಯಾಂಕುಗಳನ್ನು ಸೇರಿಸಿದರೂ ಕೇವಲ 1.6ಲಕ್ಷ ಶಾಖೆಗಳಿರುವಾಗ, 35–40 ಶೇಕಡಾ ಹಳ್ಳಿಗಳಲ್ಲಿ ಬ್ಯಾಂಕ್ ಶಾಖೆಗಳೇ ಇಲ್ಲದಿರುವಾಗ ಇದ್ದಕ್ಕಿದ್ದಂತೆ 'ಒಳಗೊಳ್ಳುವಿಕೆ'ಯ ನೆನಪಾಗಿರುವುದು ಸರಕಾರದ ನಿಜ ಉದ್ದೇಶವನ್ನು ಬಯಲಿಗೆಳೆಯುತ್ತದೆ ಎಂದು ತಪನ್ ಸೆನ್ ಸಿಐಟಿಯುನ ಸ್ಪಷ್ಟ ಅಭಿಪ್ರಾಯವನ್ನು ಮುಂದಿಟ್ಟರು.


ಈ 'ಹಣಕಾಸು ಒಳಗೊಳ್ಳುವಿಕೆ' ನಿಜವಾದ ಅರ್ಥದಲ್ಲಿ ಆರಂಭವಾಗಬೇಕಾದ್ದು ಕಾರ್ಮಿಕರ ಕೈಗಳಲ್ಲಿ ಖರ್ಚು ಮಾಡಲು ಸಾಕಷ್ಟು ಹಣವನ್ನು ಇಡುವ ಮೂಲಕ. ಕಾರ್ಮಿಕ ಇಲಾಖೆಯ ಬಳಿಯಿರುವ ಇತ್ತೀಚಿನ ಸರ್ವೆಯ ಅಂಕಿ–ಅಂಶಗಳ ಪ್ರಕಾರವೇ ದುಡಿಮೆಗಾರರಲ್ಲಿ ಕೇವಲ 17ಶೇ. ಸಂಬಳದಾರರು. ಇವರಲ್ಲಿ 35.15% ಕಾಂಟ್ರಾಕ್ಟ್ ಮತ್ತು ಕ್ಯಾಶುವಲ್ ಕೆಲಸಗಾರರು. ಈ ಸಂಬಳ/ಕೂಲಿ ಪಡೆಯುವ ಮಂದಿಯಲ್ಲಿ 57.2% ಮಂದಿಯ ಸರಾಸರಿ ಸಂಬಳ ಸುಮಾರು 10,000ರೂ. ವರೆಗೆ. 38.5% ಕಂಟ್ರಾಕ್ಟ್ ಕಾರ್ಮಿಕರು ಮತ್ತು 59.3% ಕ್ಯಾಶುವಲ್ ಕಾರ್ಮಿಕರ ಮಾಸಿಕ ಸಂಬಳ 5000ರೂ.ಗಿಂತಲೂ ಕಡಿಮೆ.

ಆದ್ದರಿಂದ ಈಗಿನ ತೀವ್ರ ನೋಟು ಬಿಕ್ಕಟ್ಟಿನ ಸಂದರ್ಭದಲ್ಲಿ ಬ್ಯಾಂಕುಗಳ ಮೂಲಕ ಸಂಬಳ ಕೊಡುವುದನ್ನು ಕಡ್ಡಾಯ ಮಾಡಬಾರದು ಎಂದು ಸಿಐಟಿಯು ಆಗ್ರಹಿಸಿದೆ. ಕಾರ್ಮಿಕರ ಕನಿಷ್ಟ ಕೂಲಿಯನ್ನು ಗಮನಾರ್ಹವಾಗಿ ಹೆಚ್ಚಿಸಿದ ನಂತರ, ದೇಶದಲ್ಲಿ, ಅದರಲ್ಲೂ ಗ್ರಾಮೀಣ ಪ್ರದೇಶಗಳಲ್ಲಿ ಸಾಕಷ್ಟು ಬ್ಯಾಂಕು ಶಾಖೆಗಳನ್ನು ವಿಸ್ತರಿಸಿದ ನಂತರವೇ ಈ ರೀತಿ ಬ್ಯಾಂಕುಗಳ ಮೂಲಕ ಸಂಬಳ ಪಾವತಿಯನ್ನು ಕಡ್ಡಾಯ ಮಾಡಲು ಸಾಧ್ಯ ಎಂದು ಸಿಐಟಿಯು ಮೋದಿ ಸರಕಾರದ 'ಕಾರ್ಮಿಕ ಮಂತ್ರಿಗಳಿಗೆ ಹೇಳಿದೆ.



ಮನೆಕೆಲಸಗಾರರಿಗೆ ಸರಿಯಾಗಿ ವಿಮಾ ಯೋಜನೆ ಜಾರಿಯಾಗುತ್ತಿಲ್ಲ ಬೆಂಗಳೂರು ಜಿಲ್ಲಾ ಮನೆಗೆಲಸಗಾರರ ಸಂಘದ ಪ್ರತಿಭಟನೆ

ಮನೆಗೆಲಸಗಾರರಿಗೆ ಹಿಂದಿನ ಕೇಂದ್ರ ಸರ್ಕಾರವು ರಾಷ್ಟ್ರೀಯ ಸ್ವಾಸ್ಥ್ಯ ಬಿಮಾ ಯೋಜನೆಯನ್ನು ಮತ್ತು ಆಮ್ ಆದ್ಮಿ ಬಿಮಾ ಯೋಜನೆಯನ್ನು ರೂಪಿಸಿ ಜಾರಿಗೊಳಿಸಿದೆ. ರಾಜ್ಯದಲ್ಲೂ ಸಾವಿರಾರು ಜನ ಅದರ ಫಲಾನುಭವಿಗಳು ಅರ್ಜಿಗಳನ್ನು ಸಲ್ಲಿಸಿ ಸ್ಮಾರ್ಟ್ ಕಾರ್ಡುಗಳನ್ನು ಪಡೆದಿದ್ದಾರೆ. ಇನ್ನೂ ಸಾವಿರಾರು ಸದಸ್ಯರು ಸ್ಮಾರ್ಟ್ ಕಾರ್ಡುಗಳು ವಿತರಣೆಯಾಗದೇ ಸಾಕಷ್ಟು ಸಮಸ್ಯೆಗಳನ್ನು ಅನುಭವಿಸುತ್ತಿದ್ದಾರೆ.



ಇವು ಮತ್ತು ಇನ್ನಿತರೆ ಹಲವು ಬೇಡಿಕೆಗಳನ್ನು ಈಡೇರಿಸಬೇಕೆಂದು ಬೆಂಗಳೂರು ಜಿಲ್ಲಾ ಮನೆಗೆಲಸಗಾರರ ಸಂಘವು ಸಿಐಟಿಯು ನೇತೃತ್ವದಲ್ಲಿ ಡಿಸೆಂಬರ್ 7ರಂದು ಬೆಂಗಳೂರಿನ ಕಂದಾಯ ಭವನ ಮುಂಭಾಗ ಪ್ರತಿಭಟನೆ ನಡೆಸಿತು.

ಸಂಘದ ಅಧ್ಯಕ್ಷರಾದ ವಿಜಯಲಕ್ಷ್ಮಿ ರವರು ಮಾತನಾಡಿ 'ಬಹುತೇಕ ಮನೆಕೆಲಸಗಾರರು ಮಹಿಳೆಯರಾಗಿದ್ದು, ಅತ್ಯಂತ ಕಡಿಮೆ ವೇತನಕ್ಕೆ ದುಡಿಯುತ್ತಿದ್ದು ರಾಜ್ಯದಲ್ಲಿ ಸುಮಾರು 4 ಲಕ್ಷ ಜನ ಮನೆಗೆಲಸ ಮಾಡುವವರಿದ್ದಾರೆ. ರಾಜ್ಯ ಮತ್ತು ಕೇಂದ್ರ ಸರ್ಕಾರಗಳು ಇವರನ್ನು ಕಾರ್ಮಿಕರನ್ನಾಗಿ ಪರಿಗಣಿಸದೇ ಅವರಿಗೆ ಶಾಸನಬದ್ಧ ಹಕ್ಕು ಸಹ ನೀಡುತ್ತಿಲ್ಲ. ಎಲ್ಲರಿಗೂ ಉತ್ತಮ ಯೋಜನೆ ನೀಡಲು ರಾಜ್ಯ ಕಾರ್ಮಿಕ ಇಲಾಖೆಯಲ್ಲಿ ಸಾಕಷ್ಟು ಹಣವಿದೆ. ವಿಮಾ ಯೋಜನೆಯನ್ನು ಜಾರಿ ಮಾಡಿದ್ದು, ಅವರೇ ಹಣವನ್ನು ಕಂತುಗಳಲ್ಲಿ ಪಾವತಿ ಮಾಡುತ್ತಿದ್ದಾರೆ. ರೇಷನ್ ಕಾರ್ಡು ಮತ್ತು ಸ್ವಂತ ವಸತಿ ಕೊಡದೇ ಕೇವಲ ನೀತಿ ನಿರೂಪಿಸಲು ಮುಂದಾಗಿದೆ ಎಂದು ಖೇದ ವ್ಯಕ್ತಪಡಿಸಿದರು.

ಮನೆ ಕೆಲಸಗಾರರಿಗೆ ಭವಿಷ್ಯ ನಿಧಿ ಯೋಜನೆ ಮತ್ತು ಆರ್‌ಎಸ್‌ಬಿವೈ ವಿಮೆಯನ್ನು 1 ಲಕ್ಷ ರೂ.ಗಳಿಗೆ ಹೆಚ್ಚಿಸಿ ಎಲ್ಲಾ ಆಸ್ಪತ್ರೆಗಳಿಗೂ ವಿಸ್ತರಿಸಬೇಕೆಂದು ಪ್ರತಿಭಟನಾ ನಿರತರನ್ನು ಉದ್ದೇಶಿಸಿ ಮುಖಂಡರು ಮಾತನಾಡಿದರು. ಎ.ಎ.ಬಿ.ವೈ. ಯೋಜನೆ ಸೌಲಭ್ಯಗಳ ಶೀಘ್ರ ಜಾರಿಗಾಗಿ, ಮನೆ ಕೆಲಸಗಾರರಿಗೆ ಸೇವಾ ನಿಯಮಾವಳಿ ಜಾರಿಗಾಗಿ, ವಸತಿ ನಿವೇಶನ ಹೀನರಿಗೆ ನಿವೇಶನಕ್ಕಾಗಿ, ಐಎಲ್‌ಓಸಿ 189 ಒಡಂಬಡಿಕೆಯನ್ನು ಸಂಸತ್ತಿನಲ್ಲಿ ಅಂಗೀಕರಿಸಲು ಒತ್ತಾಯಿಸಿದರು.

ನವೆಂಬರ್ 23ರಂದು ಬೆಂಗಳೂರಿನ ಶಾಂತಿನಗರದಲ್ಲಿರುವ ಸುವರ್ಣ ಆರೋಗ್ಯ ಸುರಕ್ಷತಾ ಟ್ರಸ್ಟ್ ಮುಂಭಾಗವೂ ಪ್ರತಿಭಟನೆ ನಡೆಸಿದರೂ ಸಹ ಸರ್ಕಾರವೂ ಈ ಬಗ್ಗೆ ಗಂಭೀರವಾಗಿ ಪರಿಗಣಿಸದೇ ಇರುವುದರಿಂದ ಕಂದಾಯ ಭವನದ ಮುಂಭಾಗ ಮತ್ತೊಮ್ಮೆ ಪ್ರತಿಭಟನಾ ಪ್ರದರ್ಶನವನ್ನು ಹಮ್ಮಿಕೊಳ್ಳಲಾಯಿತು.

ಜಿಲ್ಲೆಯ ವಿವಿಧ ಭಾಗಗಳಿಂದ ನೂರಾರು ಮಹಿಳೆಯರು ಭಾಗವಹಿಸಿದ್ದ ಪ್ರತಿಭಟನೆಯ ನೇತೃತ್ವವನ್ನು ಮುಖಂಡರಾದ ವಿಜಯಲಕ್ಷ್ಮೀ, ಸೆಲ್ವಿ, ಜೋಮಿ ಜಾರ್ಜ್, ಸಿ.ಚಂದ್ರಶೇಖರ್, ಎನ್.ರಾಜಣ್ಣ ಮುಂತಾದವರು ವಹಿಸಿದ್ದರು.

ಆಂಧ್ರ ಪ್ರದೇಶ: ಬೃಹತ್ ರ್‍ಯಾಲಿಯೊಂದಿಗೆ ಸಿಪಿಐ(ಎಂ) ಪಾದಯಾತ್ರೆ ಮುಕ್ತಾಯ

ನವೆಂಬರ್ 4 ರಿಂದ 28 ರವರೆಗೆ ಎಟಪಾಕದಿಂದ ಚಿಂಟೂರು ವರೆಗೆ ಸುಮಾರು 600 ಕಿ.ಮಿ ದೂರ, 225 ಹಳ್ಳಿಗಳನ್ನು ಸಂಚರಿಸುವ ಬೃಹತ್ ಪಾದಯಾತ್ರೆಯನ್ನು ಸಿಪಿಐ(ಎಂ) ಕೈಗೊಂಡಿತ್ತು. ಇದರ ನೇತೃತ್ವವನ್ನು ಸುನ್ನಂ ರಾಜಯ್ಯ ಶಾಸಕರು, ಟಿ ಅರುಣ ಪೂರ್ವ ಗೋದಾವರಿ ಜಿಲ್ಲಾ ಸಮಿತಿ ಕಾರ್ಯದರ್ಶಿ ಮತ್ತು ಪಕ್ಷದ ಅನೇಕ ಕಾರ್ಯಕರ್ತರು ವಹಿಸಿದ್ದರು.

ಈ ಪಾದಯಾತ್ರೆಯ ಕೊನೆಯಲ್ಲಿ ನಡೆದ ಬಹಿರಂಗ ಸಭೆ 'ಪ್ರಜಾ ಘರ್ಜನಂ' ಉದ್ದೇಶಿಸಿ ಸಿಪಿಐ(ಎಂ)ನ ಪೊಲಿಟ್‌ಬ್ಯುರೊ ಸದಸ್ಯರಾದ ಬೃಂದಾ ಕಾರಟ್ ಮಾತನಾಡಿದರು. ಈ ಪಾದಯಾತ್ರೆಯಲ್ಲಿ ಸಿಪಿಐ(ಎಂ) ತಂಡ ಕಂಡ ವಿವಿಧ ರಂಗಗಳಲ್ಲಿ ಚಂದ್ರಬಾಬು ಸಂಗತಿಗಳನ್ನು ಎತ್ತಿಕೊಂಡು ನಾಯ್ಡು ಸರಕಾರದ ಧೋರಣೆಗಳನ್ನು ಕಟುವಾಗಿ ಟೀಕಿಸಿದರು. ಜನರ ನೋವುಗಳನ್ನು ನಿರ್ಲಕ್ಷಿಸುವುದರ ಮೂಲಕ ಪೋಲಾವರಂ ಯೋಜನೆಯೊಳಗೆ ವಿಲೀನವಾಗಿರುವ ಮಂಡಲಗಳ ಜನರ ಜೀವನದ ಜೊತೆ ಸರಕಾರ ಆಟವಾಡುತ್ತಿದೆ ಎಂದು ಗುಡುಗಿದರು. ಆಂಧ್ರ ಪ್ರದೇಶಕ್ಕೆ ಮೋದಿ-ಚಂದ್ರಬಾಬು ಘೋಷಿತ ವಿಶೇಷ ಪ್ಯಾಕೇಜ್ ಈವರೆಗೂ ನೀಡಲಾಗಿಲ್ಲ.

200 ಬುಡಕಟ್ಟು ಪ್ರದೇಶ ಮತ್ತು 2 ಲಕ್ಷ ಬುಡಕಟ್ಟು ಜನರ ವಾಸಸ್ಥಾನವನ್ನು ನಾಶ ಮಾಡಿರುವ ಮೋದಿ ಘೋಷಿತ ಪೋಲಾವರಂ ರಾಷ್ಟ್ರೀಯ ಯೋಜನೆ ಒಂದು ರಾಷ್ಟ್ರ ವಿರೋಧಿ ಯೋಜನೆ ಎಂದರು. ಪೋಲಾವರಂ ಯೋಜನೆಯನ್ನು ನಿರ್ಮಿಸುವ ಸೋಗಿನಲ್ಲಿ ರಾಜ್ಯದಲ್ಲಿ ಟಿಡಿಪಿ ಸರಕಾರ ಬುಡಕಟ್ಟು ಜನರಿಗೆ ಬಹಳ ಅನ್ಯಾಯ ಮಾಡಿದೆ, ಸರಕಾರದ ಈ ನಡೆಯನ್ನು ವಿರೋಧಿಸಿದ ರೈತರು, ಬುಡಕಟ್ಟು ಜನಾಂಗ, ಎಡ ಪಕ್ಷಗಳು ಮತ್ತು ಇತರ ಪ್ರಜಾಸತ್ತಾತ್ಮಕ ಸಂಘಟನೆಗಳನ್ನು ದೇಶದ್ರೋಹಿಗಳೆಂದು ಕರೆಯುವವರ ಮೂಲಕ ತಾವೇ ದೊಡ್ಡ ದೇಶದ್ರೋಹವನ್ನು ಮೆರೆದಿದ್ದಾರೆ ಎಂದರು.

ಪೋಲಾವರಂ ಯೋಜನೆಗಾಗಿ ಬುಡಕಟ್ಟು ಜನರಿಂದ ಭೂಮಿಯನ್ನು ಪಡೆಯುವಾಗ ಪ್ರತಿ ಎಕರೆಗೆ 1.15 ಲಕ್ಷದಿಂದ 1.35 ಲಕ್ಷದವರೆಗೆ ನೀಡಲಾಗಿತ್ತು ಅದೇ ಸಮಯದಲ್ಲಿ ರಾಜಮುಂದ್ರಿಯಲ್ಲಿ ವಿಮಾನ ನಿಲ್ದಾಣ ಅಭಿವೃದ್ಧಿಗೆಂದು 32 ರಿಂದ 82 ಲಕ್ಷ ಪ್ರತಿ ಎಕರೆಗೆ ನೀಡಲಾಗಿದೆ. ಶ್ರೀಮಂತ ರೈತರಿಗೆ ಭಾರೀ ಲಾಭಗಳನ್ನು ಮಾಡಿಕೊಟ್ಟು ಬಡ ಬುಡಕಟ್ಟು ಆದಿವಾಸಿಗಳನ್ನು ವಂಚಿಸಲಾಗಿದೆ.

ಹೆಚ್ಚಿನ ಹಳ್ಳಿಗಳಲ್ಲಿ ಔಷಧಿಗಳಿಲ್ಲ, ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಸಿಬ್ಬಂದಿಯಿಲ್ಲ, ಸುಮಾರಾಇ ಎಲ್ಲ ಆರೋಗ್ಯ ಕೇಂದ್ರಗಳಲ್ಲೂ ಕನಿಷ್ಠ ಮೂಲಸೌಕರ್ಯಗಳಿಲ್ಲ. ಎಷ್ಟಂದರೆ ಹೆರಿಗೆಗೆ ಬರುವ ಒಂಬತ್ತು ತಿಂಗಳ ಗರ್ಭಿಣಿಯರು ನವಜಾತ ಮಗುವನ್ನು ಸ್ವಚ್ಛಗೊಳಿಸಲು ತಾವೇ ನೀರಿರುವ ಬಕೆಟ್ ತರಬೇಕೆಂದು ಹೇಳಲಾಗುತ್ತಿದೆಎ ಎಂದು ಈ ಮಂಡಲಗಳಲ್ಲಿರುವ ಆದಿವಾಸಿಗಳ ಪರಿಸ್ಥಿತಿಯನ್ನು ಪರಿಚಯಿಸಿದರು.

ಇಲ್ಲಿರುವ ಶಾಲೆಗಳಲ್ಲಿ 4000 ಶಿಕ್ಷಕರ ಹುದ್ದೆಗಳು ತೆರವಾಗಿವೆ, ಅವನ್ನು ಭರ್ತಿ ಮಾಡಲು ಸರಕಾರದಿಂದ ಯಾವ ಪ್ರಯತ್ನವೂ ಇಲ್ಲ ಎಂದು ಅವರು ಹೇಳಿದರು. ತಕ್ಷಣವೇ ಟಿಡಿಪಿ ಸರಕಾರ ಆರೋಗ್ಯ ಮತ್ತು ಶಿಕ್ಷಣ ಸೌಕರ್ಯಗಳನ್ನು ಒದಗಿಸಬೇಕು ಎಂದು ಆಗ್ರಹಿಸಿದ ಅವರು ಇದಕ್ಕಾಗಿ ಹೋರಾಟ ನಡಸುವಂತೆ ಆದಿವಾಸಿ ಮಹಿಳೆಯರಿಗೆ ಕರೆ ನೀಡಿದರು.

ಇತರ ಎಡಪಕ್ಷಗಳೊಂದಿಗೆ ಸಮಾಲೋಚಿಸಿ ಈ ನಿಟ್ಟಿನಲ್ಲಿ ಹೋರಾಟಗಳನ್ನು ರೂಪಿಸುವುದಾಗಿ ಈ ಸಭೆಯನ್ನುದ್ದೇಶಿ ಮಾತನಾಡುತ್ತ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಪಿ. ಮಧು ಹೇಳಿದರು.

ತೆಲಂಗಾಣ: ಮಹಾಜನ ಪಾದಯಾತ್ರೆ ಒಂದು ಶಕ್ತಿಯುತ ಚಳುವಳಿಯಾಗಬೇಕು-ಯೆಚುರಿ

ಅಕ್ಟೋಬರ್ 17 ರಂದು ಸಿಪಿಐ(ಎಂ) ನ ಮುಖಂಡರುಗಳ ನೇತೃತ್ವದಲ್ಲಿ ಆರಂಭವಾದ 'ಮಹಾ ಜನ ಪಾದಯಾತ್ರೆ' ಈಗಾಗಲೇ ಸುಮಾರು ಒಂದು ಸಾವಿರ ಕಿ.ಮಿಗಳಷ್ಟು ದೂರವನ್ನು ಕಳೆದ 40 ದಿನಗಳಲ್ಲಿ ಸಂಚರಿಸಿದೆ. ರಾಜ್ಯದ ಎಲ್ಲ ಜಿಲ್ಲೆಗಳ ಜನರ ಸಮಸ್ಯೆಗಳನ್ನು ಆಡಳಿತಕ್ಕೆ ಮುಟ್ಟಿಸುವುದು ಈ ಪಾದಯಾತ್ರೆಯ ಗುರಿಯಾಗಿದೆ.

ನವೆಂಬರ್ 27 ರಂದು ಅದು ಮೆಡಕ್ ಜಿಲ್ಲೆಯ ಚೆಗುಂಟಾಕ್ಕೆ ತಲುಪಿತು ಅಲ್ಲಿಗೆ ಕಾಂ ಸೀತಾರಾಮ್ ಯೆಚುರಿ ಅವರು ಮೂರು ಕಿಲೋ ಮೀಟರ್‌ಗಳಷ್ಟು ದೂರ ಪಾದಯಾತ್ರೆಯಲ್ಲಿ ಸಂಚರಿಸಿ ಬಹಿರಂಗ ಸಭೆಯನ್ನುದ್ದೇಶಿಸಿ ಮಾತನಾಡಿದರು. ತೆಲಂಗಾಣಾ ರಾಜ್ಯದ 93%ದಷ್ಟು ಜನಸಂಖ್ಯೆ ಪರಿಶಿಷ್ಟ ಜಾತಿ ಮತ್ತು ಪಂಗಡ ಹಿಂದುಳಿದ ವರ್ಗಗಳು, ಮತ್ತು ಅಲ್ಪಸಂಖ್ಯಾತರನ್ನೊಳಗೊಂಡಿದೆ, ಈ ಎಲ್ಲ ಸಮುದಾಯಗಳ ಅಭಿವೃದ್ಧಿಯಾದರೆ ಮಾತ್ರ ತೆಲಂಗಾಣವನ್ನು ಅಭಿವೃದ್ಧಿ ಹೊಂದಿದ ರಾಜ್ಯವೆಂದು ಪರಿಗಣಿಸಬಹುದು ಎಂದರು. 40ರ ದಶಕದ ರೈತರ ವೀರೋಚಿತ ಸಶಸ್ತ್ರ ಬಂಡಾಯವನ್ನು ಈ ಸಂದರ್ಭದಲ್ಲಿ ನೆನಪಿಸಿಕೊಳ್ಳುತ್ತಾ ಆ ರೀತಿಯ ಬಲಿಷ್ಟ ಚಳುವಳಿಗಳನ್ನು ಕಟ್ಟಿ ಬೆಳೆಸುವ ' ಮೂಲಕ ಮಹಾಜನತೆ ಹೊಸದೊಂದು ಭಾರತ ಮತ್ತು ಹೊಸದೊಂದು ತೆಲಂಗಾಣಾವನ್ನು ನಿರ್ಮಿಸಬಹುದು ಎಂದರು.


ನವ-ಉದಾರವಾದಿ ಧೋರಣೆಗಳಿಂದಾಗಿ ಜಾತಿಯ ಹೆಸರಿನಲ್ಲಿ ನಡೆಯುತ್ತ ಬಂದಿರುವ ಶೋಷಣೆ ಇನ್ನಷ್ಟು ತೀವ್ರಗೊಂಡಿದೆ. ಇಂತಹ ಸಂದರ್ಭದಲ್ಲಿ ಸಂವಿಧಾನ ನೀಡಿರುವ ಅಧಿಕಾರಗಳನ್ನು ಪಡೆಯಲು ಸಾಧ್ಯವಾಗುವ ಪರಿವರ್ತನೆಗಳನ್ನು ತರಲು ಕೆಂಪು ಮತ್ತು ನೀಲಿ ಬಾವುಟಗಳು ಒಟ್ಟಿಗೇ ಕೆಲಸ ಮಾಡುವುದು ಅನಿವಾರ್ಯವಾಗಿದೆ ಎಂದ ಯೆಚುರಿ ಆರ್ಥಿಕ ಸಮಾನತೆಯನ್ನು ತರಲು ಪರಿಶಿಷ್ಟ ಜಾತಿಗಳು ಮತ್ತು ಪರಿಶಿಷ್ಟ ಬುಡಕಟ್ಟುಗಳ ಜನರಿಗೆ ಮೀಸಲಾತಿಯಲ್ಲದೆ ಪ್ರತಿ ಕುಟುಂಬಕ್ಕೆ ಊದು ಎಕರೆ ಭೂಮಿ ಕೊಡಬೇಕೆಂದು ಆಗ್ರಹಿಸಿದರು.

ರಾಜ್ಯ ಕಾರ್ಯದರ್ಶಿ ತಮ್ಮಿನೇನಿ ವೀರಭದ್ರಂ ಮಾತಾಡುತ್ತ ಮಹಾಜನ ಪಾದಯಾತ್ರೆ-ಎಂದು ವಿರುದ್ಧ ಮುಖ್ಯಮಂತ್ರಿಗಳು ಎಷ್ಟೇ ಅಬ್ಬರಿಸಿದರೂ ಪ್ರಯೋಜನವಾಗಿಲ್ಲ, ಜನಗಳು ಇದನ್ನು ಸ್ವಾಗತಿಸುತ್ತಿದ್ದಾರೆ, ಮುಖ್ಯಮಂತ್ರಿಗಳು 56 ಕೋಟಿ ರೂ. ವೆಚ್ಚದ ಅಧಿಕೃತ ನಿವಾಸವನ್ನು ಕಟ್ಟಿಸಿಕೊಂಡಿರುವುದನ್ನು ಬಲವಾಗಿ ಟೀಕಿಸುತ್ತ ಇದೇ ಸರಕಾರ ಜನಗಳಿಗೆ ಮನೆ ಕಟ್ಟಿಸಿಕೊಡುವ ಭರವಸೆಯನ್ನು ಮರೆತು ಬಿಟ್ಟಿದೆ ಎಂದರು.

ಬಹಿರಂಗ ಸಭೆಯಲ್ಲಿ ಮೆಡಕ್ ಜಿಲ್ಲಾ ಕಾರ್ಯದರ್ಶಿ ಮತ್ತು ಶಾಸಕ ಎ.ಮಲ್ಲೇಶ್ ಅಧ್ಯಕ್ಷತೆಯನ್ನು ವಹಿಸಿದ್ದರು.

ಈ ಸಭೆಯ ಮೊದಲು ಯೆಚೂರಿ ಮತ್ತು ಇತರ ಮುಖಂಡರು ಜಿಲ್ಲೆಯ ಅವಿಭಜಿತ ಕಮ್ಯುನಿಸ್ಟ್ ಪಕ್ಷದ ಮೊದಲ ಕಾರ್ಯದರ್ಶಿ ಕೇವಲ್ ಕಿಶನ್ ಅವರ ಸಮಾಧಿಯ ಬಳಿ ಶ್ರದ್ಧಾಂಜಲಿ ಅರ್ಪಿಸಿ, ಡಾ.ಅಂಬೇಡ್ಕರ್ ಮತ್ತು ಬಾಬು ಜಗಜೀವನ ರಾಂ ಮೂರ್ತಿಗಳಿಗೆ ಹೂಮಾಲೆ ಹಾಕಿ ಗೌರವ ಸಲ್ಲಿಸಿದರು.

ಉತ್ತರಪ್ರದೇಶದ ರಾಜಧಾನಿ ಲಕ್ನೌನಲ್ಲಿ ಡಿಸೆಂಬರ್ 6ರಂದು ಎಡಪಕ್ಷಗಳು ಬಾಬ್ರಿ ಮಸೀದಿ ಧ್ವಂಸದ ವಾರ್ಷಿಕವನ್ನು ಜಂಟಿಯಾಗಿ ಆಚರಿಸಿದವು. ಎಡಶಕ್ತಿಗಳು ಈ ಕರಾಳ ಕೃತ್ಯ ಎಸಗಿದ ಬಲಪಂಥೀಯ ಮೂಲಭೂತವಾದಿ ಶಕ್ತಿಗಳಿಗೆ ಎದುರಾಗಿ ಒಂದು ಜಾತ್ಯಾತೀತ ಪ್ರಜಾಪ್ರಭುತ್ವ ದೇಶ ಕಟ್ಟುವ ಹೋರಾಟವನ್ನು ನಡಸುತ್ತ ಬಂದಿದ್ದು ಅದನ್ನು ಮುಂದುವರೆಸಲು ಕಟಿಬದ್ಧವಾಗಿವೆ ಎಂದು ಪುನರುಚ್ಚರಿಸಲಾಯಿತು..





ಪಶ್ಚಿಮ ಬಂಗಾಲದ ದುರ್ಗಾಪುರದಲ್ಲಿರುವ ಅಲೋಯ್ ಸ್ಟೀಲ್ ಪ್ಲಾಂಟ್(ಎಎಸ್‌ಪಿ) ಭಾರತ ಉಕ್ಕು ಪ್ರಾಧಿಕಾರ(ಸೆಯ್ಲ್) ಒಂದು ಘಟಕವಾಗಿದ್ದು ಅದರ ಶೇರುಗಳನ್ನು ಮಾರಿ ಆಡಳಿತವನ್ನು ಖಾಸಗಿಯವರಿಗೆ ಒಪ್ಪಿಸಲು ಕೇಂದ್ರ ಸರಕಾರ ನಿರ್ಧರಿಸಿದೆ. ಇದರ ವಿರುದ್ಧ ಅಲ್ಲಿ ಇಗ ಪ್ರತಿದಿನ ಚಳುವಳಿಗಳು ನಡೆಯುತ್ತಿವೆ. ನೂರಾರು ಜನಗಳು ಪ್ರತಿದಿನ ಮೆರವಣಿಗೆಗಳಲ್ಲಿ ಭಾಗವಹಿಸುತ್ತಿದ್ದಾರೆ, ಸಾವಿರಾರು ಜನ ಸಭೆಗಳಲ್ಲಿ ಭಾಗವಹಿಸುತ್ತಿದ್ದಾರೆ, ಮೋದಿಉ ಸರಕಾರದ ವಿರುದ್ಧ ಗುಡುಗುತ್ತಿದ್ದಾರೆ ಎನ್ನುವ ಮಮತಾಬ್ಯಾನರ್ಜಿಯವರ ಟಿಎಂಸಿ ಸರಕಾರ ಮೋದಿ ಸರಕಾರದ ಈ ಕಾರ್ಮಿಕ-ವಿರೋಧಿ ನಡೆಯ ವಿರುದ್ಧ ಏನೂ ಮಾಡುತ್ತಿಲ್ಲ ಜನಗಳಲ್ಲಿ ಆಕ್ರೋಶ ಬೆಳೆಯುತ್ತಿದೆ.



ಸಹಕಾರಿ ಬ್ಯಾಂಕ್‌ಗಳ ಅರ್ಜಿಯನ್ನು ಪರಿಶೀಲಿಸಲು ಸುಪ್ರಿಂ ಕೋರ್ಟ್ ಸಮ್ಮತಿ

ನವದೆಹಲಿ: ಅನಾಣ್ಯೀಕರಣದ ನೀತಿಯಿಂದಾಗಿ ದೇಶದಾದ್ಯಂತ ಗ್ರಾಮೀಣ, ಕೃಷಿ ಮತ್ತು ಸಹಕಾರೀ ವಲಯದ ಸಂಪೂರ್ಣವಾಗಿ ದುರ್ಬಲಗೊಳಿಸಿರುವುದಕ್ಕಾಗಿ ಕೇರಳದ ಏಳು ಜಿಲ್ಲೆಗಳ ಸಹಕಾರೀ ಬ್ಯಾಂಕ್‌ಗಳು ಸುಪ್ರೀಂ ಕೋರ್ಟಿನ ಮೊರೆ ಹೋಗಿದ್ದವು, ಅವರ ಮನವಿಯನ್ನು ಆಲಿಸಲು ಸುಪ್ರೀಂ ಕೋರ್ಟ್ ಒಪ್ಪಿದೆ.

ಸಹಕಾರೀ ಬ್ಯಾಂಕ್‌ಗಳು ಸಲ್ಲಿಸಿರುವ ಅರ್ಜಿಯಲ್ಲಿ ಅನಾಣ್ಯೀಕರಣ ನೀತಿ ನಿರ್ಧಾರ ಸಂವಿಧಾನ ತತ್ವಗಳ ವಿರೋಧಿಯಾಗಿದ್ದು, ಪೈಪೋಟಿ ವಿರೋಧಿಯಾಗಿದೆ ಹಾಗೂ ಕೆಲ ಬ್ಯಾಂಕ್ ಮತ್ತು ಹಣಕಾಸು ಸಂಸ್ಥೆಗಳ ಹಿತಾಸಕ್ತಿಯನ್ನು ಉತ್ತೇಜಿಸುವ ತಂತ್ರವಾಗಿದೆ, ಸಹಕಾರೀ ವಲಯದ ಬ್ಯಾಂಕ್‌ಗಳನ್ನು ಯಾಕೆ ಇತರ ಬ್ಯಾಂಕ್‌ಗಳಂತೆ ಕಾರ್ಯನಿರ್ವಹಿಸಲು ಅನುಮತಿ ನೀಡುತ್ತಿಲ್ಲ ಎಂಬುದಕ್ಕೆ ಸರಕಾರವಾಗಲೀ ಅಥವಾ ಆರ್‌ಬಿಐ ತನ್ನ ಅಧಿಸೂಚನೆಯಲ್ಲಾಗಲೀ ಇನ್ನೂ ಯಾವುದೇ ನಂಬಲರ್ಹ ಕಾರಣಗಳನ್ನು ನೀಡಿಲ್ಲ ಎಂದಿವೆ.

ಈ ನೀತಿಯಿಂದಾಗಿ ವ್ಯವಹಾರ/ಬ್ಯಾಂಕಿಂಗ್ ಚಟುವಟಿಕೆಗಳನ್ನು ನಡೆಸುವುದು ತುಂಬ ಕಠಿಣವಾಗಿದೆ, ದಶಕಗಳಿಗಿಂತ ಹೆಚ್ಚು ವರ್ಷಗಳಿಂದ ಕೆಲಸ ಮಾಡುತ್ತಿರುವ ಹಳೆಯ ಸಂಸ್ಥೆಗಳ ಉಳಿಯುವಿಕೆಗೆ ಇದು ಅಪಾಯಕಾರಿಯಾಗಿದೆ" ಎಂದು ಈ ಸಹಕಾರಿ ಬ್ಯಾಂಕುಗಳು ತಮ್ಮ ಅರ್ಜಿಯಲ್ಲಿ ಹೇಳಿವೆ.

ಅರ್ಜಿಯಲ್ಲಿ ಕೇಂದ್ರ, ಪ್ರಧಾನ ಮಂತ್ರಿ ಕಛೇರಿ ಮತ್ತು ಆರ್‌ಬಿಐಯನ್ನು ಒಳಗೊಳ್ಳುವಂತೆ ಮಾಡಲಾಗಿದ್ದು, ನಗದು ವ್ಯವಹಾರ ನಿರ್ಬಂಧವನ್ನು ತೆಗೆಯಲು ಸಮರ್ಪಕ ಕ್ರಮ ತೆಗೆದುಕೊಳ್ಳಲು ಕೋರಲಾಗಿದೆ.

ಕೋಝಿಕೋಡ್: ಮುಚ್ಚಿದ್ದ ಶಾಲೆಯ ಬಾಗಿಲು ಮತ್ತೆ ತೆರೆಯಿತು

133 ವರ್ಷ ಹಳೇಯ ಸರಕಾರೀ ಅನುದಾನಿತ ಖಾಸಗೀ ಮಾಲಿಕತ್ವದ ಕೋಝಿಕೋಡ್‌ನ ಮಲಪರಂಬ ಹಿರಿಯ ಪ್ರಾಥಮಿಕ ಶಾಲೆಯನ್ನು ಅದರ ಮಾಲೀಕರು 'ಲಾಭವಿಲ್ಲದ' ಕಾರಣಕ್ಕಾಗಿ ಮುಚ್ಚಿದ್ದರು. 24 ನವೆಮಬರ್ 2016 ರಂದು ಎಲ್‌ಡಿಎಫ್ ನೇತೃತ್ವದ ಸರಕಾರದಲ್ಲಿ ಶಿಕ್ಷಣ ಸಚಿವರಾಗಿರುವ ಸಿ. ರವಿಂದ್ರನಾಥ್ ಅವರು ವಿದ್ಯಾರ್ಥಿ, ಪೋಷಕರು, ಶಿಕ್ಷಕರು ಮತ್ತು ಸಾರ್ವಜನಿಕರ ಮುಂದೆ ಶಾಲೆಗೆ ಹೊಸ ಕಟ್ಟಡ ನಿರ್ಮಾಣ ಮಾಡಲು 1 ಕೋಟಿ ರೂಪಾಯಿ ಅನುದಾನ ನೀಡಿ ಪುನರಾರಂಭ ಮಾಡಿರುವುದಾಗಿ ಘೋಷಿಸಿದ್ದಾರೆ.

ಈ ಹಿಂದೆ ಅಧಿಕಾರದಲ್ಲಿದ್ದ ಕಾಂಗ್ರೆಸ್ ನೇತೃತ್ವದ ಯುಡಿಎಫ್ ಸರಕಾರ ಶಾಲೆಯನ್ನು ಅದರ ವ್ಯವಸ್ಥಾಪಕರ ಮನವಿಯ ಮೇರೆಗೆ ಮುಚ್ಚಿಬಿಟ್ಟಿತ್ತು, ವಿದ್ಯಾರ್ಥಿ ಸಂಘಟನೆಗಳು, ಪೋಷಕರು, ಮತ್ತು ಸಾರ್ವಜನಿಕರೆಲ್ಲ ಸೇರಿ ಇದಕ್ಕೆ ವಿರೋಧ ವ್ಯಕ್ತಪಡಿಸಿ ಶಾಲೆ ಮುಚ್ಚಬಾರದೆಂಬ ಬೇಡಿಕೆಯನ್ನಿಟ್ಟು ಪ್ರತಿಭಟನೆ ನಡೆಸುತ್ತಿದ್ದರೂ 2014 ಏಪ್ರಿಲ್ ನಲ್ಲಿ ವ್ಯವಸ್ಥಾಪಕರು ಶಾಲಾ ಕಟ್ಟಡದ ಬಹುಭಾಗವನ್ನು ಕೆಡವಿಬಿಟ್ಟರು. ನಂತರ ಸ್ವತಃ ಪೋಷಕರು, ಸಾರ್ವಜನಿಕರು ಸೇರಿ ಕಟ್ಟಡದ ಪುನರ್‌ನಿರ್ಮಾಣಕ್ಕೆ ಹಣ ಸಂಗ್ರಹಿಸಿದ್ದರು, ಭಾರತ ವಿದ್ಯಾರ್ಥಿ ಫಡರೇಶನ್(ಎಸ್‌ಎಫ್‌ಐ) 1,20,000 ರೂ ಸಂಗ್ರಹಿಸಿ ಶಾಲಾ ಸಂರಕ್ಷಣಾ ಸಮಿತಿಗೆ ನೀಡಿತ್ತು.

ಐದುವರೆ ತಿಂಗಳುಗಳ ನಂತರ ಮಕ್ಕಳು ಪುನಃ ಶಾಲೆಗೆ ಮರಳುವಂತಾಗಿದೆ. ಇನ್ನುಳಿದ ಮೂರು ಶಾಲೆಗಳನ್ನು ಸರಕಾರ ಸ್ವಾಧೀನ ಪಡಿಸಿಕೊಳ್ಳುವದಾಗಿ ತಿಳಿಸಿದೆ.

ವಿಯೇಟ್ನಾಮಿನಲ್ಲಿ ಕಮ್ಯುನಿಸ್ಟ್-ಕಾರ್ಮಿಕ ಪಕ್ಷಗಳ 18 ನೇ ಸಭೆ
ಅಂತರ್ರಾಷ್ಟ್ರೀಯ ಸೌಹಾರ್ದ ಕಾರ್ಯಾಚರಣೆಗಳಿಗೆ ಹೊಸ ಬಲ



ಇದೇ ಅಕ್ಟೋಬರ್ 28–30 ರಲ್ಲಿ ಕಮ್ಯುನಿಸ್ಟ್ ಮತ್ತು ಕಾರ್ಮಿಕರ ಪಕ್ಷಗಳ 18ನೇ ಅಂತರ್ರಾಷ್ಟ್ರೀಯ ಸಭೆ ನಡೆಯಿತು. ಈ ಬಾರಿಯ ಸಭೆಯ ವಿಷಯ "ಬಂಡವಾಳಶಾಹಿ ಬಿಕ್ಕಟ್ಟು ಮತ್ತು ಸಾಮ್ರಾಜ್ಯಶಾಹಿ ದಾಳಿ – ಶಾಂತಿಗಾಗಿ, ಕಾರ್ಮಿಕರ ಮತ್ತು ಜನತೆಯ ಹಕ್ಕುಗಳಿಗಾಗಿ, ಹಾಗೂ ಸಮಾಜವಾದಕ್ಕಾಗಿ ಕಮ್ಯುನಿಸ್ಟ್ ಮತ್ತು ಕಾರ್ಮಿಕರ ಪಕ್ಷಗಳ ವ್ಯೂಹ ಮತ್ತು ತಂತ್ರಗಳು" ಆಗಿತ್ತು.

ಈ ಬಾರಿಯ ಸಭೆಯಲ್ಲಿ ಹಲವು ವಿಶೇಷಗಳಿದ್ದವು. 1999ರಲ್ಲಿ ಇಂತಹ ವಾರ್ಷಿಕ ಸಭೆಗಳು ಆರಂಭವಾದ ಮೇಲೆ ಮೊದಲ ಬಾರಿಗೆ ಈ ಸಭೆ ಒಂದು ಸಮಾಜವಾದಿ ದೇಶವೊಂದರಲ್ಲಿ – ವಿಯೇಟ್ನಾಂನ ರಾಜಧಾನಿ ಹನೊಯ್ ನಲ್ಲಿ – ನಡೆಯಿತು. ಈ ಬಾರಿ ಅತ್ಯಂತ ಹೆಚ್ಚು – ಅಂದರೆ 49 ದೇಶಗಳ 57 ಪಕ್ಷಗಳ – 108 ಪ್ರತಿನಿಧಿಗಳು ಭಾಗವಹಿಸಿದ್ದರು. 1999ರ ಮೊದಲ ಸಭೆಯಲ್ಲಿ 46 ದೇಶಗಳ 55 ಪಕ್ಷಗಳ ಪ್ರತಿನಿಧಿಗಳು ಭಾಗವಹಿಸಿದ್ದರು. 1999ರ ಮೊದಲ ಸಭೆಗೆ ಸ್ಪೂರ್ತಿಯಾಗಿದ್ದ ಸಿಪಿಐ(ಎಂ) ಕೊಲ್ಕತ್ತಾದಲ್ಲಿ ಸಂಘಟಿಸಿದ್ದ 'ಕಾರ್ಲ್ ಮಾರ್ಕ್ಸ್ – 175ನೇ ವಾರ್ಷಿಕ' ವಿಚಾರ ಸಂಕಿರಣ ಮತ್ತು ಸಭೆಯಲ್ಲಿ 11 ಕಮ್ಯುನಿಸ್ಟ್ ಮತ್ತು ಕಾರ್ಮಿಕರ ಪಕ್ಷಗಳ 42 ಪ್ರತಿನಿಧಿಗಳು ಪಾಲುಗೊಂಡಿದ್ದರು.

ಮಾತ್ರವಲ್ಲ, ಈ ಬಾರಿ ಸರ್ವಸಮ್ಮತ ಜಂಟಿ ಹೇಳಿಕೆಯನ್ನು ಹೊರಡಿಸುವುದು ಸಾಧ್ಯವಾಯಿತು. ಹಿಂದೆ ಹಲವು ಬಾರಿ ಸರ್ವಸಮ್ಮತ ಜಂಟಿ ಹೇಳಿಕೆಯೊಂದು ಸಾಧ್ಯವಾಗುತ್ತಿರಲಿಲ್ಲ. ಇದಕ್ಕಾಗಿ ಕಾರ್ಯನಿರತ ಗುಂಪೊಂದನ್ನು ರಚಿಸಿದರೂ ಅದು ಹಲವು ಬಾರಿ ಸಾಧ್ಯವಾಗುತ್ತಿರಲಿಲ್ಲ. ಹಲವು ವಿಷಯಗಳ ಮೇಲೆ ಸಾಮಾನ್ಯ ನಿಲುವು ರೂಪಿಸಲು ಸಾಧ್ಯವಾಗುತ್ತಿರಲಿಲ್ಲ. ಅದಕ್ಕಾಗಿ ಸಭೆಯ ಒಟ್ಟು ಅಭಿಪ್ರಾಯಗಳನ್ನು ನಿರೂಪಿಸುವ ಕೆಲಸವನ್ನು ಆತಿಥೇಯ ದೇಶಕ್ಕೆ ವಹಿಸುವ ಸಂಪ್ರದಾಯ ಆರಂಭವಾಗಿತ್ತು. ಆದರೆ ಈ ಬಾರಿ ಸರ್ವಸಮ್ಮತ ಜಂಟಿ ಹೇಳಿಕೆಯೊಂದನ್ನು ಬಿಡುಗಡೆ ಮಾಡುವುದು ಸಾಧ್ಯವಾಯಿತು. ಅಷ್ಟೇ ಅಲ್ಲ, ಪ್ರಮುಖ ಆಳುವ (ಚೀನಾ, ಕೊರಿಯಾ) ಕಮುನಿಸ್ಟ್ ಪಕ್ಷಗಳು ಮೊದಲಿನಿಂದಲೂ ಸಭೆಯಲ್ಲಿ ಭಾಗವಹಿಸುತ್ತಿದ್ದರೂ, ಸಭೆಯ ಚರ್ಚೆ ಮತ್ತಿತರ ಪ್ರಕ್ರಿಯೆಗಳಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿರಲಿಲ್ಲ. ಜಂಟಿ ಹೇಳಿಕೆ ಸಿದ್ಧ ಪಡಿಸುವ ಕಾರ್ಯನಿರತ ಗುಂಪಿನಲ್ಲಿ ಭಾಗವಹಿಸುವುದರ ಮೂಲಕ, ಚೀನಾ ಕಮ್ಯುನಿಸ್ಟ್ ಪಕ್ಷದ ಪ್ರತಿನಿಧಿಗಳು ಇದರ ಬದಲಾವಣೆಗೂ ನಾಂದಿ ಹಾಡಿತು. ದೀರ್ಘ ಮತ್ತು ಶ್ರೀಮಂತ ಅನುಭವವಿರುವ ಇಂತಹ ಪಕ್ಷಗಳು ಸೇರಿದಂತೆ ಜಗತ್ತಿನ ಹಲವು ಖಂಡಗಳ ವೈವಿಧ್ಯಮಯ ಅನುಭವಗಳನ್ನು ನಿಲುವುಗಳನ್ನು ಕಾರ್ಯನಿರತ ಗುಂಪು ಚರ್ಚಿಸಿ ಸರ್ವಸಮ್ಮತ ಸಾಮಾನ್ಯ ನಿಲುವನ್ನು ರೂಪಿಸುವುದರಲ್ಲಿ ಈ ಬಾರಿಯ ಅಂತರ್ರಾಷ್ಟ್ರೀಯ ಸಭೆ ದೊಡ್ಡ ಮುನ್ನಡೆ ಸಾಧಿಸಿದೆ.

ವಿಯೇಟ್ನಾಂ ಕಮ್ಯುನಿಸ್ಟ್ ಪಕ್ಷದ ವಿದೇಶ ಸಂಬಂಧಗಳ ಕಮಿಶನ್ ಮುಖ್ಯಸ್ಥ ಹೊವಾಂಗ್ ಬಿನ್ ಕ್ವಾನ್ ಪ್ರತಿನಿಧಿಗಳನ್ನು ಸ್ವಾಗತಿಸಿ ಪ್ರಾಸ್ತಾವಿಕ ಮಾತುಗಳನ್ನಾಡಿದರು. ಅವರು ಶಾಂತಿ, ಸ್ವಾತಂತ್ರ್ಯ, ಸಾರ್ವಭೌಮತೆ ಮತ್ತು ಕಾರ್ಮಿಕರ ಹಕ್ಕುಗಳಿಗಾಗಿ ಹೋರಾಟಗಳಿಗೆ ಉತ್ತೇಜನ ನೀಡುವುದರ ಮಹತ್ವದ ಬಗ್ಗೆ ಒತ್ತು ಕೊಟ್ಟರು. ತಮ್ಮ ದೇಶ ಮತ್ತು ಪಕ್ಷ ಸಮಾಜವಾದಿ ದೇಶಗಳೊಂದಿಗೆ, ಪಾರಂಪಾರಿಕ ಮಿತ್ರರು ಮತ್ತು ಕಮ್ಯುನಿಸ್ಟ್/ಕಾರ್ಮಿಕ ಪಕ್ಷಗಳೊಂದಿಗೆ ಸಂಬಂಧಗಳನ್ನು ಗಟ್ಟಿಗೊಳಿಸುವ ಉತ್ತಮಗೊಳಿಸುವುದರ ಬಗ್ಗೆ ಅತ್ಯಂತ ಹೆಚ್ಚಿನ ಕಾಳಜಿ ವಹಿಸುತ್ತದೆ ಎಂದರು.

ಪ್ರಾಸ್ತಾವಿಕ ಮಾತುಗಳ ನಂತರ ಭಾಗವಹಿಸುತ್ತಿರುವ ಪಕ್ಷದ ಪ್ರತಿನಿಧಿ ಸಭೆಯ ಪ್ರಮುಖ ವಿಷಯ ಹಾಗು ಪ್ರಸಕ್ತ ಅಂತರ್ರಾಷ್ಟ್ರೀಯ ಪರಿಸ್ಥಿತಿ ಹಾಗೂ ತಮ್ಮ ದೇಶಗಳ ಮೇಲೆ ಅದರ ಪರಿಣಾಮಗಳ ಬಗ್ಗೆ ಮಾತನಾಡಿದರು. ಅದರ ನಂತರ ಸಭೆಯ ಹೇಳಿಕೆಯೊಂದನ್ನು ಅಂಗೀಕರಿಸಲಾಯಿತು. ಈ ಹೇಳಿಕೆಯಲ್ಲಿ ನೀಡಲಾದ ಕರೆಗಳನ್ನು ಪ್ರತ್ಯೇಕವಾಗಿ ಕೊಡಲಾಗಿದೆ.

ಸಿಪಿಐ(ಎಂ) ಪರವಾಗಿ ಪೊಲಿಟ್ ಬ್ಯುರೊ ಸದಸ್ಯ ಹಾಗೂ ಅಂತರ್ರಾಷ್ಟ್ರೀಯ ವಿಭಾಗದ ಮುಖ್ಯಸ್ಥ ಕಾ. ಎಂ.ಎ. ಬೇಬಿ ಸಭೆಯಲ್ಲಿ ಭಾಗವಹಿಸಿದ್ದರು. ಅವರ ಭಾಷಣದ ಕೆಲವು ಭಾಗಗಳನ್ನು ಪ್ರತ್ಯೇಕವಾಗಿ ಕೊಡಲಾಗಿದೆ.

ಒಟ್ಟಾರೆಯಾಗಿ ಈ ಸಭೆ ಕಮ್ಯುನಿಸ್ಟ್ ಮತ್ತು ಕಾರ್ಮಿಕರ ಪಕ್ಷಗಳ ಅಂತರ್ರಾಷ್ಟ್ರೀಯ ಸೌಹಾರ್ದತೆಗೆ ಹೊಸ ಬಲ ಕೊಟ್ಟಿದೆ ಎನ್ನಬಹುದು

ಹನೊಯ್ ನಲ್ಲಿ ಕಾ. ಎಂ.ಎ. ಬೇಬಿ ಅವರ ಭಾಷಣದ ತುಣುಕುಗಳು




ನಮ್ಮ ಪಕ್ಷ ಆಳುವ ವರ್ಗಗಳ ಹುನ್ನಾರಗಳನ್ನು ಬಯಲಿಗೆಳೆದು ಅವರನ್ನು ಒಂದುಗುಡಿಸಲು ಪ್ರಯತ್ನಿಸುತ್ತಿದೆ. ಆಳುವ ವರ್ಗಗಳ ಶೋಷಕ ನೀತಿಗಳ ವಿರುದ್ಧ ಸತತವಾದ ಸಮರಶೀಲ ವರ್ಗ ಮತ್ತು ಸಾಮೂಹಿಕ ಹೋರಾಟಗಳ ಆಧಾರದಲ್ಲಿ ಒಂದು ಪರ್ಯಾಯ ವೇದಿಕೆಯಲ್ಲಿ ಜನರನ್ನು ಸಂಘಟಿಸಲು ಪ್ರಯತ್ನಿಸುತ್ತಿದ್ದೇವೆ.. ..

ನಮ್ಮ ದೇಶದ ಆಳುವ ವರ್ಗ ನಮ್ಮ ಪಕ್ಷವನ್ನು ಭೌತಿಕವಾಗಿಯೂ ಸೈದ್ಧಾಂತಿಕವಾಗಿಯೂ ಮುಗಿಸಿ ಇಡಲು ಅತ್ಯಂತ ಭೀಕರ ದಾಳಿಗಳನ್ನು ಮಾಡುತ್ತಿದೆ. .. .. ದೇಶದ ತುಂಬಾ ಸರ್ವಾಧಿಕಾರಿ ಧೋರಣೆಗಳು ಗಟ್ಟಿಯಾಗುತ್ತಿವೆ. ಭಿನ್ನಮತ ಮತ್ತು ಪ್ರತಿಭನಟೆಗಳನ್ನು ಹತ್ತಿಕ್ಕುವ ಪ್ರಯತ್ನಗಳು ನಡೆಯುತ್ತಿವೆ. .. ..

ಆಳುವ ವರ್ಗಗಳ ದಾಳಿಗಳಿಗೆ ಪ್ರತಿರೋಧ ಒಡ್ಡುವ ಹಾಗೂ ಒಂದು ಪ್ರಬಲ ಕಮ್ಯುನಿಸ್ಟ್ ಪಕ್ಷ ಕಟ್ಟುವ ಕೆಲಸ ಜತೆ ಜತೆಯಾಗಿಯೇ ನಡೆಯಬೇಕಾಗಿದೆ ಎಂಬುದು ನಮಗೆ ತಿಳಿದಿದೆ. ಅದಕ್ಕಾಗಿ ಕಾ. ಹೊ ಚಿ ಮಿನ್ ಹೇಳಿದಂತೆ "ಹೋರಾಟದ ಜತೆ ಕಟ್ಟುವುದು", "ಕಾರ್ಮಿಕ ವರ್ಗದ ಕ್ರಾಂತಿಕಾರಿ ನಿಲುಮೆಗಳನ್ನು ಎತ್ತಿ ಹಿಡಿಯುವುದು" ಹಾಗೂ ಪಕ್ಷ ಮತ್ತು ಜನಸಮೂಹಗಳ ನಡುವೆ ನಿಕಟ ಸಂಪರ್ಕ ಸಾಧಿಸುವುದು" ಅಗತ್ಯವಿದೆ.

ಅಕ್ಟೋಬರ್ ಕ್ರಾಂತಿಯ ಶತಮಾನೋತ್ಸವ ಮತ್ತು 'ಬಂಡವಾಳ'ದ ಪ್ರಕಟಣೆಯ 150ನೇ ವಾರ್ಷಿಕೋತ್ಸವ ಜಂಟಿಯಾಗಿ ಆಚರಿಸಲು ಕರೆ



ಹನೊಯ ನಲ್ಲಿ ಅಕ್ಟೋಬರ್ 28–30 ರಲ್ಲಿ ಸೇರಿದ್ದ ಕಮ್ಯುನಿಸ್ಟ್ ಮತ್ತು ಕಾರ್ಮಿಕರ ಪಕ್ಷಗಳ 18ನೇ ಅಂತರ್ರಾಷ್ಟ್ರೀಯ ಸಭೆ ಒಂದು ಜಂಟಿ ಹೇಳಿಕೆಯನ್ನು ಅಂಗೀಕರಿಸಿದೆ. ಬಂಡವಾಳಶಾಹಿ, ಆಳಗೊಳ್ಳುತ್ತಿರುವ ಅದರ ಬಿಕ್ಕಟ್ಟು, ಅದನ್ನು ನಿರ್ವಹಿಸಲು ಸಾಮ್ರಾಜ್ಯಶಾಹಿ ಮಧ್ಯಪ್ರವೇಶಗಳು ಉಂಟು ಮಾಡಿರುವ ಇಂದಿನ ಅಂತರ್ರಾಷ್ಟ್ರೀಯ ಪರಿಸ್ಥಿತಿಯನ್ನು ಹೇಳಿಕೆ ನಿರೂಪಿಸಿದೆ. ಇದಕ್ಕೆ ಸಮಾಜವಾದ ಮಾತ್ರವೇ ನಿಜವಾದ ಬದಲಿ ಎಂದು ಹೇಳಿಕೆ ಘೋಷಿಸಿದೆ. ಬಂಡವಾಳಶಾಹಿ, ಹಾಗೂ ಸಾಮ್ರಾಜ್ಯಶಾಹಿಯ ದಾಳಿಗಳ ವಿರುದ್ಧ ಕಾರ್ಮಿಕರು ಮತ್ತು ಜನತೆಯ ಹೋರಾಟಗಳಿಗೆ ಸಲಾಂ ಮಾಡಿದೆ. ಈ ಸಂದರ್ಭದಲ್ಲಿ ರಶ್ಯಾದ ಮಹಾನ್ ಅಕ್ಟೋಬರ್ ಸಮಾಜವಾದಿ ಕ್ರಾಂತಿಯ ಶತಮಾನೋತ್ಸವದ ಚಾರಿತ್ರಿಕ ಮಹತ್ವದ ಬಗ್ಗೆ ಹೇಳಿಕೆ ಗಮನ ಸೆಳೆದಿದೆ. ಈ ಅವಧಿಯಲ್ಲಿ ಕಮ್ಯುನಿಸ್ಟ್ ಮತ್ತು ಕಾರ್ಮಿಕರ ಪಕ್ಷಗಳ ಹೋರಾಟಗಳು, ಸೌಹಾರ್ದ ಕಾಯಾಚರಣೆಗಳು ಹಾಗೂ ಸಹಕಾರ ಸ್ಫೂರ್ತಿದಾಯಕ ಎಂದಿದೆ.

ಈ ಕೆಳಗಿನ ಸಾಮಾನ್ಯ ಹಾಗೂ ಜಂಟಿ ಕಾರ್ಯಾಚರಣೆಗಳನ್ನು ನಡೆಸಬೇಕೆಂದು ಕರೆ ಕೊಟ್ಟಿದೆ:

- 21ನೇ ಶತಮಾನದಲ್ಲಿ ಸಮಾಜವಾದ ಕಟ್ಟು ಬಗ್ಗೆ ಸೈದ್ಧಾಂತಿಕ ಮತ್ತು ಪ್ರಾಯೋಗಿಕ ಕೆಲಸಗಳನ್ನು ತೀವ್ರಗೊಳಿಸಬೇಕು ಹಾಗೂ ಹಂಚಿಕೊಳ್ಳಬೇಕು
- ರಶ್ಯಾದ ಮಹಾನ್ ಅಕ್ಟೋಬರ್ ಸಮಾಜವಾದಿ ಕ್ರಾಂತಿಯ ಶತಮಾನೋತ್ಸವವನ್ನು ಜಂಟಿಯಾಗಿ ಆಚರಿಸಬೇಕು
- ಕಾರ್ಲ್ ಮಾರ್ಕ್ಸ್ ಅವರ ಮೇರುಗ್ರಂಥ 'ಬಂಡವಾಳ'ದ ಮೊದಲ ಸಂಪುಟದ ಪ್ರಕಟಣೆ–ಯ 150ನೇ ವಾರ್ಷಿಕೋತ್ಸವ ಆಚರಿಸಬೇಕು
- ಬಂಡವಾಳಶಾಹಿಯ ಎಲ್ಲಾ ರೂಪದ ದಾಳಿಗಳನ್ನು ಎದುರಿಸುವ ಹಾಗೂ, ಅದರಲ್ಲಿ ದುಡಿಯುವ ಮತ್ತು ಇತರ ಜನವಿಭಾಗಗಳನ್ನು ತೊಡಗಿಸಲು ಅಣಿನೆರೆಸಲು ಹೂಡಬೇಕಾದ ವ್ಯೂಹ ಮತ್ತು ತಂತ್ರಗಳ ಬಗ್ಗೆ ಅನುಭವಗಳನ್ನು ಪಕ್ಷಗಳು ಪರಸ್ಪರ ಹಂಚಿಕೊಳ್ಳಬೇಕು
- ನಿಷೇಧ ಮತ್ತಿತರ ರೂಪಗಳ ತೀವ್ರ ದಾಳಿಗಳನ್ನು ಎದುರಿಸುತ್ತಿರುವ ಉಕ್ರೇನಿನ ಮತ್ತು ಇತರ ಕಮ್ಯುನಿಸ್ಟ್ ಪಕ್ಷಗಳಿಗೆ ಸೌಹಾರ್ದ ಬೆಂಬಲ ವ್ಯಕ್ತಪಡಿಸುವುದು
- ಮೇ 5–11 2017 ವಾರದಲ್ಲಿ ನವ ನಾಜಿ–ಫ್ಯಾಸಿಸ್ಟ್ ಗಳ ವಿರುದ್ಧ ಪ್ರಚಾರಾಂದೋಲನ ಕೈಗೊಳ್ಳುವುದು
- ನಾಟೋದ ವಿಸ್ತರಣೆ, ವಿದೇಶೀ ಮಿಲಿಟರಿ ನೆಲೆಗಳ ಸ್ಥಾಪನೆ, ಸಾಮ್ರಾಜ್ಯಶಾಹಿ ಮಿಲಿಟರಿ ಆಕ್ರಮಣಗಳ ವಿರುದ್ಧ ಕಾರ್ಯಾಚರಣೆಗಳ ಮೂಲಕ ಸಾಮ್ರಾಜ್ಯಶಾಹಿ–ವಿರೋಧಿ ರಂಗವನ್ನು ವಿಸ್ತರಿಸುವುದು
- ಕ್ಯೂಬಾದ ವಿರುದ್ಧ ಅಮೆರಿಕದ ದಿಗ್ಬಂಧನ ಕೊನೆಗಳಿಸಲು, ಪ್ಯಾಲೆಸ್ತೀನ್ ಸ್ವಾತಂತ್ರ್ಯವನ್ನು ಬೆಂಬಲಿಸುವುದು
- ಸಾಮಾರಾಜ್ಯಶಾಹಿ ಅತಿಕ್ರಮಣ, ಮಧ್ಯಪ್ರವೇಶ ಮತ್ತು ದಿಗ್ಬಂಧನ ಎದುರಿಸುತ್ತಿರುವ ಎಲ್ಲಾ ದೇಶ/ಜನತೆ ಗಳಿಗೆ ಸೌಹಾರ್ದ ಬೆಂಬಲ ಕೊಡುವುದು

ಆರ್‌ಎಸ್‌ಎಸ್ ದೇಶದ ಮೊದಲ........ ಪುಟ 16 ರಿಂದ

"ನರಕದ ಗರ್ಭಗುಡಿಯೊಳಗೆ" ಪುಸ್ತಕದ ಲೇಖಕ ಸುಧೀಶ್ ಮಿನ್ನಿ ಮಾತನಾಡಿ, ಆರ್‌ಎಸ್‌ಎಸ್ ಪ್ರಚಾರಕನ ಕೆಲಸ ನಿಲ್ಲಿಸಿ ಆರ್‌ಎಸ್‌ಎಸ್ ನಿಂದ ಹೊರಬಂದ ಮೇಲೆ ತನಗೆ ಜೀವ ಬೆದರಿ–ಕೆ ಬರುತ್ತಿದೆ, ಮನೆಗೆ ಹೋಗದೆ 18 ತಿಂಗಳಾಗಿದೆ ಎಂದರು, ಈ ಕಾರ್ಯಕ್ರಮಕ್ಕೆ ಬರುವ ಎರಡು ದಿನದ ಹಿಂದೆ ಎಂ.ಎಂ.ಕಲಬುರಗಿಯರನ್ನು ಕೊಂದಿದ್ದು ನೆನಪಿದೆಯಾ ಎಂಬ ಎಚ್ಚರಿಕೆಯ ಸಂದೇಶ ಅವರಿಗೆ ವಾಟ್ಸ್‌ಆಪ್‌ನಲ್ಲಿ ಬಂದಿತ್ತಂತೆ. ಸಾಯಲು ನನಗೆ ಭಯವಿಲ್ಲ ಏಕೆಂದರೆ ನಾನೀಗ ಕಮ್ಯುನಿಷ್ಟನಾಗಿದ್ದೇನೆ, ಮಾನವೀಯತೆ ಇರುವ ಜನರೊಡನೆ ಇದ್ದೇನೆ ಎಂದು 24 ವರ್ಷಗಳ ಕಾಲ ಆರ್.ಎಸ್ಎಸ್ ನಲ್ಲಿ ಇದ್ದು ಅಲ್ಲಿ ಕಂಡುಂಡ ಕರಾಳ ಅನುಭವವನ್ನು "ನನ್ನ ಎಲ್ಲ ಕನಸುಗಳನ್ನು ಆ ಭಗವಾಧ್ವಜದ ಮುಂದೆ ಸಮರ್ಪಿಸಿದ್ದೆ. ಈಗ ಆ ಕ್ರೌರ್ಯದದಾರಿಯನ್ನು ಮಾನವೀಯತೆಯ ದಾರಿಯಲ್ಲಿ ಮುನ್ನಡೆಯುತ್ತಿದ್ದೇನೆ" ಎಂದು ತನ್ನ ಪುಸ್ತಕದಲ್ಲಿ ಹೇಳಿರುವ ಸುಧೀಶ್ ದೃಢಭಾವದಿಂದ ಘೋಷಿಸಿದರು. ಆರ್‌ಎಸ್‌ಎಸ್‌ನ ಸಂಕುಚಿತ ಕೋಮುವಾದಿ ಕಣ್ಣೋಟ ಹೇಗೆ ಅದರ ಮಾತು ಮತ್ತು ಕೃತಿಗಳಲ್ಲಿ ವೈರುಧ್ಯವನ್ನು ತಂದಿದೆ ಎಂದು ಕೆಲವು ಉದಾಹರಣೆಗಳನ್ನು ಸ್ವಂತ ಜಿಲ್ಲೆಯಾದ ಕಣ್ಣೂರಿನಲ್ಲಿ ಕಂಡ ಘಟನೆಗಳು, ಆ ಮೇಲೆ ರಾಜ್ಯದ ರಾಜಧಾನಿ ತಿರುವನಂತಪುರದಲ್ಲಿನ ಅನುಭವಗಳು, ನಂತರ ಮುಂಬೈ, ಭೋಪಾಲ್ ಮತ್ತು ಅಸ್ಸಾಂನಲ್ಲಿ ಕಂಡ ಸಂಗತಿಗಳಿಂದ ತಾನು ಅನುಭವಿಸಿದ ಯಾತನೆ, ಅದರಿಂದಾದ ಭ್ರಮನಿರಸನ ಕೊನೆಗೂ ಆ 'ಸಾವಿರಾರು ಮೋಸದ ಗುಂಡಿಗಳಿರುವ ಡ್ರಾಕುಲ ಕೋಟೆ'ಯೊಳಗಿಂದ ಹೊರಬರುವಂತೆ ಮಾಡಿರುವುದನ್ನು ಅವರು ತಮ್ಮ ಪುಸ್ತಕದಲ್ಲಿ ದಾಖಲಿಸಿದ್ದಾರೆ.

ಬರಹಗಾರ್ತಿ ಚೇತನಾ ತೀರ್ಥಹಳ್ಳಿ ಮಾತನಾಡುತ್ತ ಮಹಿಳೆಯರ ಮೇಲೆ ಆರೆಸ್ಸೆಸ್ ಪ್ರಭಾವ ಇನ್ನೂ ಅಪಾಯಕಾರಿಯಾಗಿದ್ದು ಆ ಬಗ್ಗೆಯೂ ಯೋಚನೆ ಮಾಡಬೇಕಾಗಿದೆ ಎಂದರು. ಪಿಕೆಪಿ ಕೃಷ್ಣನ್, ಸಿಪಿಎಂ ಮುಖಂಡರಾದ ಮೀನಾಕ್ಷಿ ಸುಂದರಂ, ಕೆ.ಪ್ರಕಾಶ್ ವೇದಿಕೆಯಲ್ಲಿ ಉಪಸ್ಥಿತರಿದ್ದರು. ಸಮುದಾಯ ಸಾಂಸ್ಕೃತಿಕ ಸಂಘಟನೆಯ ರಾಜ್ಯ ಉಪಾಧ್ಯಕ್ಷ ಟಿ. ಸುರೇಂದ್ರರಾವ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಸಿಪಿಎಂ ಬೆಂಗಳೂರು ದಕ್ಷಿಣ ಜಿಲ್ಲಾ ಕಾರ್ಯದರ್ಶಿ ಕೆಎನ್‌ಉಮೇಶ್ ಕಾರ್ಯಕ್ರಮದ ಆರಂಭದಲ್ಲಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಲಿಂಗರಾಜು ಕಾರ್ಯಕ್ರಮ ನಿರೂಪಿಸಿದರೆ, ಜೊಮಿಜಾರ್ಜ್ ಸ್ವಾಗತಿಸಿ, ಗೋಪಿನಾಥ್ ವಂದಿಸಿದರು. ●

RNI No. KARKAN /2006/17926 Posted on every Satuarday
Licensed to Post without prepayment License No. WPP-283

ಆರ್‌ಎಸ್‌ಎಸ್ ದೇಶದ ಮೊದಲ ಭಯೋತ್ಪಾದಕ ಸಂಘಟನೆ - ಎ.ಕೆ.ಸುಬ್ಬಯ್ಯ

ಬೆಂಗಳೂರಿನಲ್ಲಿ ಆರ್‌ಎಸ್‌ಎಸ್‌ನ ನಿಜ ಮುಖವನ್ನು ತೆರೆದಿಟ್ಟ ಪೋಸ್ಟರ್ ಪ್ರದರ್ಶನ

ವರದಿ: ಲಿಂಗರಾಜು

ಕಮ್ಯುನಿಸ್ಟರ ಮೇಲೆ ಸಂಘ ಪರಿವಾರದ ದಾಳಿ ಕುರಿತು ಪೋಸ್ಟರ್ ಪ್ರದರ್ಶನ ಮತ್ತು "ನರಕದ ಗರ್ಭಗುಡಿಯೊಳಗೆ" ಪುಸ್ತಕ ಲೋಕಾರ್ಪಣೆ ಕಾರ್ಯಕ್ರಮ ಬೆಂಗಳೂರಿನ ಎನ್.ಜಿ.ಓ ಸಭಾಂಗಣದಲ್ಲಿ ಡಿಸೆಂಬರ್ 4 ರಂದು ನಡೆಯಿತು. ದೇಶಾಭಿಮಾನಿ ಬಳಗ ಕಾರ್ಯಕ್ರಮ ಆಯೋಜಿಸಿತ್ತು.

ಪೋಸ್ಟರ್ ಪ್ರದರ್ಶನವನ್ನು ಹಿರಿಯ ರಾಜಕಾರಣಿ ಹಾಗು ಚಿಂತಕ ಎ.ಕೆ.ಸುಬ್ಬಯ್ಯ ಉದ್ಘಾಟಿಸಿದರು. ನಂತರ ಮಾತನಾಡಿದ ಅವರು ಆರೆಸ್ಸೆಸ್‌ನ ಮತೀಯವಾದದ ವಿರುದ್ಧ, ಅದರ ಕೊಲೆಗಡುಕನದ ವಿರುದ್ಧ ಎಡಪಕ್ಷಗಳು ಮತ್ತು ಎಲ್ಲಾ ಜಾತ್ಯಾತೀತ ಪಕ್ಷಗಳು ಒಗ್ಗೂಡಿ ಎದುರಿಸಬೇಕಿದೆ ಎಂದು ಅಭಿಪ್ರಾಯಪಟ್ಟರು. ಆರೆಸ್ಸೆಸ್ ತನ್ನ ಮತೀಯವಾದಿ ಕ್ರೈಮ್ ಚಟುವಟಿಕೆಗಳಿಗೆ ಹಿಂದುಳಿದ ಮತ್ತು ದಲಿತ ಯುವಕರನ್ನು ಬಳಸಿಕೊಂಡು ಅವರನ್ನು ದಾರಿ ತಪ್ಪಿಸುತ್ತಿದೆ. ಈ ಬಗ್ಗೆ ನಾವು ಎಚ್ಚರ ವಹಿಸುವ ಅಗತ್ಯವಿದೆ ಎಂದು ಈ ಹಿಂದೆ ಬಿಜೆಪಿಯ ಹಿಂದಿನ ಅವತಾರವಾದ ಜನ ಸಂಘದ ಕರ್ನಾಟಕ ರಾಜ್ಯ ಅಧ್ಯಕ್ಷರಾಗಿದ್ದು ಆರೆಸ್ಸೆಸ್‌ನ ಕಾರ್ಯವೈಖರಿಯನ್ನು ಬಹಳ ಹತ್ತಿರದಿಂದ ಕಂಡಿರುವ ಅವರು ಹೇಳಿದರು.

ದೇಶದಲ್ಲಿ ಮೊದಲ ಭಯೋತ್ಪಾದನೆ ಘಟನೆ ಗೋಡ್ಸೆ ಗಾಂಧಿಯನ್ನು ಗುಂಡಿಟ್ಟು ಕೊಂದಿದ್ದು, ಎರಡನೆಯದು ಬಾಬರಿ ಮಸೀದಿಯನ್ನು ಕೆಡವಿದ್ದು. ಈ ಎರಡೂ ಭಯೋತ್ಪಾದನಾ ಕೃತ್ಯಗಳನ್ನು ನಡೆಸಿದ್ದು ಆರೆಸ್ಸೆಸ್. ಇದರ ನಂತರವೇ ಇಂಡಿಯಾದಲ್ಲಿ ಭಯೋತ್ಪಾದನೆ ಆರಂಭವಾಗಿದ್ದು ಎಂದು ಅವರು ಅಭಿಪ್ರಾಯಪಟ್ಟರು. ಆರೆಸ್ಸೆಸ್‌ನಲ್ಲಿರುವ ಶಿಸ್ತು ಬೌದ್ಧಿಕ ಶಿಸ್ತಾಗಿರದೇ 'ಸರ್ಕಸ್ ಶಿಸ್ತು' ಮಾತ್ರವೇ ಆಗಿದೆ. ಅಲ್ಲಿ ಪ್ರಜಾಸತ್ತಾತ್ಮಕ ವಾತಾವರಣ ಎಂಬುದಿಲ್ಲ. ಅವರು ನಡೆಸುವ ಬೈಠಕ್‌ಗಳಲ್ಲಿ ಪ್ರಶ್ನಿಸುವವರನ್ನು ಉಳಿಸುವುದಿಲ್ಲ. ಅಲ್ಲಿಜೀ ಹುಜೂರ್ ಎನ್ನುವವರಿಗೆ ಮಾತ್ರ ಅವಕಾಶವಿದೆ. ಮುಸಲೋನಿಯ ರಹಸ್ಯ ಕಾರ್ಯಾಚರಣೆಯನ್ನು ಆರೆಸ್ಸೆಸ್ ತನ್ನ ಸಂಘಟನಾ ತಂತ್ರವನ್ನಾಗಿ ಅಳವಡಿಸಿಕೊಂಡಿದೆ. ಹೀಗಾಗಿ ಅಲ್ಲಿ ಎಲ್ಲವೂ ರಹಸ್ಯವಾಗಿಯೇ ನಡೆಯುತ್ತಿದೆ ಎಂದು ಅದರ ಭಯಾನಕ ಸಂಘಟನಾ ಕಾರ್ಯಶೈಲಿಯನ್ನು ಎಳೆ ಎಳೆಯಾಗಿ ಬಿಡಿಸಿಟ್ಟರು.

ಪ್ರಜಾ ಸೋಷಿಯಲಿಸ್ಟ್ ಪಾರ್ಟಿಯಲ್ಲಿ ಸಕ್ರಿಯ ಕಾರ್ಯಕರ್ತನಾಗಿ ರಾಜಕೀಯ ಜೀವನ ಆರಂಭಿಸಿ. ಆ ಪಕ್ಷ ಇಲ್ಲವಾದಾಗ, ಮುಖ್ಯವಾಗಿ ಕಾಂಗ್ರೆಸ್-ವಿರೋಧ ಭಾವನೆಯಿಂದಾಗಿಯೇ



1964ರಲ್ಲಿ ಜನಸಂಘ ಸೇರಿಕೊಂಡು ಅಲ್ಲಿ 20 ವರ್ಷಗಳ ಕಾಲ ಕೆಲಸ ಮಾಡಿದೆ ಎಂದ ಎ.ಕೆ.ಸುಬ್ಬಯ್ಯನವರು ಅದರ ರಾಜ್ಯಾಧ್ಯಕ್ಷನಾಗಿದ್ದಾಗ ಏಕಾಂಗಿ ಹೋರಾಟ ನಡೆಸಿ 18 ಸೀಟುಗಳನ್ನು ಗೆಲ್ಲಿಸಿದ್ದೆ ಎಂದು ನೆನಪಿಸಿಕೊಂಡರು. ಆದರೆ ಆಗ ವಿ.ಎಸ್.ಆಚಾರ್ಯ, ಶಂಕರಮೂರ್ತಿ, ರಾಮಭಟ್ ಇವರೆಲ್ಲರೂ ರಾಮಕೃಷ್ಣ ಹೆಗಡೆಯವರ ಸರಕಾರದಲ್ಲಿ ಸಚಿವರಾಗಲು ತುದಿಗಾಲ ಮೇಲೆ ನಿಂತಿದ್ದನ್ನು ಕಂಡಾಗ ಇಪ್ಪತ್ತು ವರ್ಷ ನನ್ನ ಸಮಯವನ್ನು ವ್ಯರ್ಥ ಮಾಡಿಕೊಂಡೆ, ದುಷ್ಟತನ, ಕ್ರೌರ್ಯವನ್ನು ಬೆಳೆಸಿದೆನಲ್ಲ ಎಂಬ ಕೊರಗು ನನ್ನಲ್ಲಿ ಕಾಡತೊಡಗಿತು, ಹಾಗಾಗಿ ಅದರಿಂದ ಹೊರಬಂದು ಮುಕ್ತನಾಗಿ ಮನುಷ್ಯನಾದೆ ಎಂದು 'ಶಿಸ್ತಿ'ನ ಆರ್‌ಎಸ್‌ಎಸ್‌ನ ನಿಜ ಚಿತ್ರವನ್ನು ಬಿಚ್ಚಿಟ್ಟರು. ಆರ್.ಎಸ್.ಎಸ್ ನವರು ತಳ ಸಮುದಾಯದ ಹುಡುಗರನ್ನು ಕೇಂದ್ರೀಕರಿಸಿ ಅವರಿಗೆ ತರಬೇತಿಯನ್ನು ನೀಡಿ ಕೊಲೆ, ದೌರ್ಜನ್ಯಗಳಂತಹ ಹೀನ ಕೃತ್ಯಗಳನ್ನು ಮಾಡುವಂತೆ ಪ್ರೇರೇಪಿಸುತ್ತಾರೆ. ಇಲ್ಲಿಯವರೆಗೆ ಹೀನಕೃತ್ಯ ನಡೆಸಿ ಶಿಕ್ಷೆಗೆ ಒಳಗಾಗಿರುವ ಎಲ್ಲರೂ ತಳ ಸಮುದಾಯದ ಯುವಕರೇ ಆಗಿದ್ದಾರೆ. ಮೇಲ್ಜಾತಿಗೆ ಸೇರಿದವರು ಪ್ರಚಾರಕರಾಗಿಯೋ ಅಥವಾ ಸರ ಸಂಚಾಲಕರಾಗಿಯೋ ನೇಮಕಗೊಂಡು ಮಾಸ್ಟರ್ ಮೈಂಡ್ ರೂಪಿಸುವವರಾಗಿರುತ್ತಾರೆ ಎಂದು ಆರೆಸ್ಸೆಸ್‌ನ ಜೀವಾಳವಾದ ಮನುಪ್ರಣೀತ ಜಾತೀಯತೆಯನ್ನು ಅವರು ವರ್ಣಿಸಿದರು.

ಆರ್.ಎಸ್.ಎಸ್ ನಿಂದ ಹೊರಬಂದು ಅವರು ಬರೆದ ಪುಸ್ತಕ 'ಆರ್.ಎಸ್.ಎಸ್‌ಅಂತರಂಗ' ಓದಿ ಇತರ ಹಲವರು ಕೂಡ ಆರ್.ಎಸ್,ಎಸ್ ತ್ಯಜಿಸಿದರು ಎಂದ ಎ.ಕೆ.ಸುಬ್ಬಯ್ಯನವರು ಮೋಸಗಾರರನ್ನಾಗಿ, ವಂಚಕರನ್ನಾಗಿ ಸೃಷ್ಟಿಸುವ ಆರ್.ಎಸ್.ಎಸ್ ಎಂಬ ಕ್ರೈಮ್ ಕಾರ್ಖಾನೆಯನ್ನು ಬುಡ ಸಮೇತ ಕಿತ್ತು ಹಾಕುವ ಸಂಕಲ್ಪದಿಂದ ಹೋರಾಟ ನಡೆಸುತ್ತಲಿರುವುದಾಗಿ ತಿಳಿಸಿದರು. ಆರ್.ಎಸ್.ಎಸ್ ನ ಮುಖವಾಡ ತಿಳಿಸುವ ಪುಸ್ತಕ ಹಾಗೂ ಪೋಸ್ಟರ್ ಪ್ರದರ್ಶನ ಏರ್ಪಡಿಸಿರುವುದು ಸ್ತುತ್ಯಾರ್ಹವಾಗಿದೆಯಲ್ಲದೇ ಇದನ್ನು ಎಲ್ಲೆಡೆಯೂ ಏರ್ಪಡಿಸಿ ಜನರನ್ನು ಜಾಗೃತಗೊಳಿಸಬೇಕಾದ ಮಹತ್ವದ ಕೆಲಸವನ್ನು ಪ್ರಗತಿಪರರೆಲ್ಲರೂ ಮಾಡಬೇಕಿದೆಯೆಂದರು. 24 ವರ್ಷ ಪ್ರಚಾರಕರಾಗಿದ್ದು, ಅದನ್ನು ಬಿಟ್ಟು ಬರುವ ಬಹಳ ಧೈರ್ಯದ ಕೆಲಸ ಮಾಡಿದ್ದಾರೆ ಎಂದು ಆ ಕಾರ್ಯಕ್ರಮದಲ್ಲಿ ಬಿಡುಗಡೆಯಾದ "ನರಕದ ಗರ್ಭಗುಡಿಯೊಳಗೆ" ಕೃತಿಯ ಮೂಲ ಲೇಖಕ ಸುಧೀಶ್ ಮಿನ್ನಿಯವರನ್ನು ಪ್ರಶಂಸಿಸಿದರು. ಸುಧೀಶ್ ಮಿನ್ನಿಯವರು ಕೂಡ ತಮ್ಮ ಪುಸ್ತಕದಲ್ಲಿ ತಾನು ತನ್ನ ಬದುಕಿನ 24 ವರ್ಷಗಳನ್ನು ವ್ಯರ್ಥಮಾಡಿಕೊಂಡು ಎಂದು ಹೇಳಿಕೊಂಡಿದ್ದಾರೆ ಎಂಬುದನ್ನು ಇಲ್ಲಿ ಗಮನಿಸಬಹುದು.

ಈ ಕನ್ನಡ ಅನುವಾದವನ್ನು ಲೋಕಾರ್ಪಣೆ ಮಾಡಿದ ಹಿರಿಯ ಚಿಂತಕ ಕೆ.ಮರುಳಸಿದ್ಧಪ್ಪ ಲೇಖಕರ ಈ ಅಭಿಪ್ರಾಯವನ್ನು ಉದ್ಧರಿಸುತ್ತ ಈ ಕೃತಿ ಸಂಘಪರಿವಾರದವರ ಕ್ರೌರ್ಯವನ್ನು ಕೊಳಕು ಮನಸ್ಸನ್ನು ಎತ್ತಿ ತೋರಿಸುತ್ತದೆ, ಸಂಘ ಪರಿವಾರವು ಕಲ್ಪಿತ ವೈರಿಯನ್ನು ಸೃಷ್ಟಿಸಿ, ಗಲಭೆಗಳನ್ನು ಹರಡಿ ಹೇಗೆ ಜನರ ಸೌಹಾರ್ದ ಬದುಕನ್ನು ಹಾಳು ಮಾಡುತ್ತಿದೆ, ಹೇಗೆ ಅದು ದೌರ್ಜನ್ಯ, ಕೊಲೆ, ಮೋಸ ವಂಚನೆ ವೈಭಿಚಾರದ ಮುಖವಾಗಿದೆ ಎಂಬುದನ್ನು ಚಿತ್ರಿಸಿದೆ ಎಂದು ತಿಳಿಸಿದರು. ಇಲ್ಲಿರುವ ಫೋಟೋಗಳು ಆರೆಸ್ಸೆಸ್‌ನ ಕ್ರೌರ್ಯದ ಮುಖವನ್ನು ಬಯಲು ಮಾಡುತ್ತವೆ ಎಂದು ಅವರು ಹೇಳಿದರು

ಕೇರಳದ ಕೋಳಿಕೋಡ್ ವಿಧಾನಸಭಾಕ್ಷೇತ್ರದ ಶಾಸಕ ಎ.ಪ್ರದೀಪ್‌ಕುಮಾರ್ ಮಾತನಾಡಿ, ಸಂಘಪರಿವಾರವು ಕೇರಳದಲ್ಲಿ ಸಿಪಿಐ(ಎಂ) ಕಾರ್ಯಕರ್ತರ ಮೇಲೆ ಎಸಗುತ್ತಿರುವ ದೌರ್ಜನ್ಯದ ಇತಿಹಾಸವನ್ನು ಬಿಚ್ಚಿಟ್ಟರು. ಈವರೆಗೆ ಕೇರಳದಲ್ಲಿ ಸಂಘಪರಿವಾರದ ಭಯೋತ್ಪಾದಕರು 128 ಕಮ್ಯುನಿಸ್ಟರನ್ನು ಕ್ರೂರವಾಗಿ ಹತ್ಯೆ ಮಾಡಿದ್ದಾರೆ. ಬಿಜೆಪಿ/ಆರೆಸ್ಸೆಸ್‌ಗೆ ಕಮ್ಯುನಿಸ್ಟರ ಭಯ ಇರುವುದರಿಂದಲೇ ಈ ಕೊಲೆಗಳನ್ನು ನಡೆಸುತ್ತಿದ್ದು, ಆ ಮೂಲಕ ತನ್ನ ಕೋಮುವಾದಿ ಅಜೆಂಡಾವನ್ನು ನಿರಾತಂಕವಾಗಿ ಕೊಂಡೊಯ್ಯಬಹುದೆಂದು ಭಾವಿಸಿದೆ. ಮುಕ್ತ ಚಿಂತನೆಗೆ ಅವಕಾಶ ನೀಡದ, ಪ್ರಜಾಸತ್ತಾತ್ಮಕ ಆಶಯಗಳನ್ನು ಒಪ್ಪದ ಸಂಘಪರಿವಾರವು ಇತ್ತೀಚೆಗೆ ಈವರೆಗೆ ಪಕ್ಷದ ಪ್ರಮುಖ ಜವಾಬ್ದಾರಿಯನ್ನು ನಿರ್ವಹಿಸದೇ ಇರುವ ಕುಮ್ಮಮ್ ರಾಜಶೇಖರನ್ ಅವರನ್ನು ಭಾರತೀಯ ಜನತಾ ಪಕ್ಷದ ಅಧ್ಯಕ್ಷರನ್ನಾಗಿ ನೇಮಿಸಿದೆ. ಹಲವು ಹಿರಿಯ ನೇತಾರರಿದ್ದೂ ಅವರೆಲ್ಲರನ್ನು ಕಡೆಗಣಿಸಿ ತನಗೆ ಬೇಕಾದವರನ್ನು ಸಂಘ ಪಕ್ಷದ ಪ್ರಮುಖರನ್ನಾಗಿ ಆರಿಸಿದೆ. ಅದರ ಧೋರಣೆ ಇಂಥದ್ದು ಎಂದು ಹೇಳಿದರು. ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸದೆ ದೂರವುಳಿದಿದ್ದ ಸಂಘಪರಿವಾರ ಈಗ ರಾಷ್ಟ್ರೀಯ ಹಿತಾಸಕ್ತಿ ಹಾಗೂ ರಾಷ್ಟ್ರಗೀತೆಯ ಬಗ್ಗೆ ದೊಡ್ಡ ದೊಡ್ಡ ಮಾತುಗಳನ್ನಾಡುತ್ತಿದೆ, ಸಂಘ ಪರಿವಾರ ಯಾವತ್ತೂ ಸಂವಿಧಾನವನ್ನು ಗೌರವಿಸಿದ್ದಿಲ್ಲ ಎಂದೂ ಅವರು ಆರೋಪಿಸಿದರು.

ಆರೆಸ್ಸೆಸ್ ಬಿಜೆಪಿ ಜೋಡಿಗೆ ಅಂದಿನಿಂದ ಇಂದಿನವರೆಗೆ ಇರುವುದು ಕೋಮುವಾದಿ ಅಜೆಂಡಾ ಒಂದೇ. ಅದನ್ನು ಪ್ರಧಾನಮಂತ್ರಿ ನರೇಂದ್ರ ಮೋದಿಯ ಮೂಲಕ ಸಾಕಾರಗೊಳಿಸಿಕೊಳ್ಳಲು ಹೊರಟಿದೆ. ಅದಕ್ಕಾಗಿ ಸಂಘಪರಿವಾರ ಹಿಟ್ಲರನ ಕಾಲದಲ್ಲಿ ಜರ್ಮನಿಯ ನಾಝಿಗಳು ಅನುಸರಿಸಿದ ಗೋಬೆಲ್ ತಂತ್ರವನ್ನೇ ಅನುಸರಿಸುತ್ತಿದೆ. ಕಮ್ಯುನಿಸ್ಟರನ್ನು ಸೈದ್ಧಾಂತಿಕವಾಗಿ ಎದುರಿಸುವುದು ದುಸ್ತರವೆಂದು ಮನಗಂಡಿರುವ ಸಂಘ ಪರಿವಾರ ಹೊಸ ಹೊಸ ದಾರಿಗಳನ್ನು ಹುಡುಕುತ್ತಿದೆ. ಅನಾಣ್ಯೀಕರಣದ ನಂತರ ಬಿಜೆಪಿ, ಸಹಕಾರಿ ಬ್ಯಾಂಕಿಂಗ್ ವ್ಯವಸ್ಥೆಯನ್ನೇ ಮುಗಿಸಿಹಾಕುವ ಮೂಲಕ ಕೇರಳದ ಜನಸಾಮಾನ್ಯರ ನಡುವೆ ಆಳವಾಗಿ ಬೇರು ಬಿಟ್ಟಿರುವ ಆರ್ಥಿಕ ವ್ಯವಸ್ಥೆಯನ್ನು ಬುಡಮೇಲು ಮಾಡಲು ಹೊರಟಿದೆ ಎಂದು ದೂರಿದರು. ಸಂಘ ಪರಿವಾರ ಏನಾದರೂ ಮಾಡಲಿ, ಸಿಪಿಐ(ಎಂ) ಪ್ರಗತಿಪರ ಸಂಘಟನೆಗಳ ಜೊತೆ ಕೈಜೋಡಿಸಿ ಸಂಘಿಗಳ ಜನವಿರೋಧಿ ನಡೆಗಳ ವಿರುದ್ಧ ತನ್ನ ಹೋರಾಟ ಮುಂದುವರೆಸುತ್ತದೆ ಎಂದು ಪ್ರದೀಪ್‌ಕುಮಾರ್ ಘೋಷಿಸಿದರು.

ಪುಟ 15 ಕ್ಕೆ



ನರಕದ ಗರ್ಭಗುಡಿಯೊಳಗೆ

ಮೂಲ ಮಲಯಾಳಂ
ಸುಧೀಶ್ ಮಿನ್ನಿ
ಅನುವಾದ : ಪಿ.ಕೆ.ಪಿ. ಕೃಷ್ಣನ್
ಪುಟಗಳು152+4, ಬೆಲೆ ರೂ.120
ಪ್ರಕಟಣೆ: ಕ್ರಿಯಾ ಪುಸ್ತಕ



ಸಿ.ಪಿ.ಐ(ಎಂ) ಹಾಗೂ ಆರ್‌ಎಸ್‌ಎಸ್ ಸಂಘಟನೆ ಎರಡೂ ಒಂದೇ ತರಹದ ಸಂಘಟನೆಗಳೆಂದು ಬಲಪಂಥೀಯ ಮಾಧ್ಯಮಗಳು ವರ್ಷಗಳಿಂದ ಪ್ರಚಾರ ಮಾಡುತ್ತಲೇ ಬರುತ್ತಿವೆ. ಫ್ಯಾಸಿಸ್ಟ್ ಶೈಲಿಯಲ್ಲಿ ಕಾರ್ಯನಿರ್ವಹಿಸುವ ಆರ್‌ಎಸ್‌ಎಸ್ ಹಾಗೂ ಪ್ರಜಾಸತ್ತಾತ್ಮಕವಾಗಿ ಕಾರ್ಯನಿರ್ವಹಿಸುವ ಸಿಪಿಐ(ಎಂ) ಪಕ್ಷ, ಯಾವ ಕಾರಣಕ್ಕೂ ಒಂದೇ ತರಹದ ಸಂಘಟನೆಗಳಲ್ಲ. .. ಆರ್‌ಎಸ್‌ಎಸ್‌ನಲ್ಲಿ ಇಲ್ಲ. ಮಾತ್ರವಲ್ಲ, ಅದೊಂದು ತೀರ ರಹಸ್ಯ ಕಾರ್ಯನಿರ್ವಹಣಾ ಶೈಲಿಯ ಸಂಘಟನೆಯಾಗಿದೆ. ಆರ್‌ಎಸ್‌ಎಸ್‌ನ ರಹಸ್ಯ ಕಾರ್ಯಾಚರಣೆಯ ರಹಸ್ಯ ಕೋಣೆಗಳ ಒಳಗೆ ಸುಧೀಷ್ ಮಿನ್ನಿಯವರ ಈ ಪುಸ್ತಕ ಬೆಳಕು ಚೆಲ್ಲುತ್ತದೆ. **-ಪಿ.ಜಯರಾಜನ್, (ಮೂಲಕೃತಿಯ ಮುನ್ನುಡಿಯಲ್ಲಿ)**

... ನನ್ನ ಎಲ್ಲಾ ಕನಸುಗಳನ್ನು ಆ 'ಭಗವಧ್ವಜ'ದ ಮುಂದೆ ಸಮರ್ಪಿಸಿದ್ದ ನಾನು ಆ ಕ್ರೌರ್ಯದ ದಾರಿಯನ್ನು ತೊರೆದು ಮಾನವೀಯತೆಯ ದಾರಿಯಲ್ಲಿ ಮುನ್ನಡೆಯುತ್ತಿದ್ದೇನೆ. ಪುನರ್ ಚಿಂತನೆಯ ಭಾಗವಾಗಿ ಬದಲಾವಣೆಯಾಗಿರುವ ನನ್ನ ಅನುಭವಗಳ ಪ್ರತಿಯೊಂದು ಹಾಳೆಯನ್ನೂ ನೀವು ಓದಬೇಕು. ಇನ್ಯಾರೂ ದಾರಿ ತಪ್ಪಿ ಅಲ್ಲಿಗೆ ತಲುಪಿ, ನಾನು ಅನುಭವಿಸಿದ ಆ ಹೊತ್ತಿ ಉರಿಯುವ ನೋವಿನ ಅನುಭವಕ್ಕೆ ಗುರಿಯಾಗಬಾರದು. ಸಾವಿರಾರು ಮೋಸದ ಗುಂಡಿಗಳಿರುವ ಆ ಡ್ರಾಕುಲ ಕೋಟೆಯೊಳಗೆ ನನ್ನಂತೆ ಇನ್ಯಾರೂ ಸಿಲುಕಬಾರದು. ನೀವು ಜನರರಕ್ಷಕರಾಗಬೇಕು. ಈ ಮಣ್ಣಿನಿಂದ ಇನ್ನೊಂದು ತಾಯಿಯ ಆಕ್ರಂದನ ಮುಗಿಲು ಮುಟ್ಟುವಂತೆ ಮೇಲೇರಬಾರದು, ಅಕ್ಕ ತಂಗಿಯರ ಬಿಕ್ಕಳಿಕೆಗಳು ಕೇಳಬಾರದು. ಈ ನಾಡಿನ ಯಾವುದೇ ಮಕ್ಕಳು ಅನಾಥರಾಗಬಾರದು. ಇದು ನನ್ನ ಮುಂದಿನ ಗುರಿ. **-ಸುಧೀಶ್ ಮಿನ್ನಿ**

JANASHAKTHI KANNADA VARA PATRIKE: Printed by **G.V.SRIRAMA REDDY**, EMS Bhavana, No.37/A, 8th Cross, Mahalakshmi Layout, BANGALORE-560086 Published by: **G.V.SRIRAMA REDDY** EMS Bhavana, No.37/A, 8th Cross, Mahalakshmi Layout, BANGALORE-560086, Karnataka on behalf of / owned by **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027 Karnataka(State). and Published at BANGALORE. EMS Bhavana, No.37/A, 8th Cross, Mahalakshmi Layout, BANGALORE-560086 . Editor **G.V.SRIRAMA REDDY** EMS Bhavana, No.37/A, 8th Cross, Mahalakshmi Layout, BANGALORE-560086 Editor : **G.V.SRIRAMA REDDY**